ಕಲ್ಯಾಣ ಕಿರಣ

ಬೆಲೆ ೩ ರೂ. ಮಾರ್ಚ್ ೧೯೯೩



ಕಲ್ಯಾಣ ಕಿರಣ

ಮಾಸಪತ್ರಿಕೆ, ಮಾರ್ಚ್-1993, ಬಿಡಿಸಂಚಿಕೆ 3-00 ರೂ.

ಸಂಪುಟ : 21 ಸಂಚಿಕೆ : 8 ಬಸವ ಶಕೆ : 887

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300-00

ಕಿರಣಗನ್ನಡಿ

ಮುಖಪುಟ : ವಿಶ್ವಗುರು ಬಸವಣ್ಣನವರು,

ಹೊದ್ದಿಕೆಯ 4 ನೇ ಪುಟ : ಜಗನ್ಮಾತಾ ಅಕ್ಕಮಹಾದೇವಿಯವರು.

KALYANA KIRANA- monthly magazine Printedand Published by B. Shambhulingaiah at Prabhudeva Printing

ಕಲ್ಯಾಣ ಕಿರಣ

ಸಂಪುಟ : 21 ಸಂಚಿಕೆ : 8 ಬಸವ ಶಕೆ : 887, ಫೆಬ್ರುವರಿ 1993

ಬನ್ನಿ ಬನ್ನಿ ನೋಡ ಬನ್ನಿ ಸಂಗಮದ ಕ್ಷೇತ್ರವ
ಬನ್ನಿ ಬನ್ನಿ ನೋಡ ಬನ್ನಿ ಶರಣ ಮೇಳವ ॥ಪ॥

ಶ್ರೀ ಸಂಗಮೇಶನ ಭವ್ಯ ತಾಣ ಸಂಗಮ
ಮಲಪ್ರಭೆ–ಕೃಷ್ಣೆಯರು ಸೇರುತಿರುವ ಸಂಗಮ
ಬಸವ ಗುರುವು ಬಯಲಾಗಿಹ ಧರ್ಮ ಕ್ಷೇತ್ರ ಸಂಗಮ
ಶರಣ ಮೇಳ ನಡೆಯುತಿರುವ ದಿವ್ಯಕ್ಷೇತ್ರ ಸಂಗಮ ॥೧॥

ಬಸವ ಕ್ರಾಂತಿ ದಿವ್ಯದಿನದಿ ನಡೆಯುತಿದೆ ಶರಣ ಮೇಳ
ನಾಡ ಮೂಲೆ ಮೂಲೆಯಿಂದ ಸೇರುತಿದೆ ಶರಣ ಬಳಗ
ನಮ್ಮ ನಿಮ್ಮ ಬಾಳಿನ ಬನ್ನವನ್ನು ಕಳೆಯುವ
ವಚನ ಮೇಳ, ತತ್ತ್ವ ಮೇಳ, ಕಮ್ಮನೆಯ ಶರಣ ಮೇಳ ॥೨॥

ತಮಿಳುನಾಡು ತೆಲುಗುನಾಡು ಮಹಾರಾಷ್ಟ್ರ ಹಿಂದಿನಾಡು
ಕರುನಾಡಿನ ಮೂಲೆಯಿಂದ ಬರುತಿಹರು ಸಂಗಮಕೆ
ಬಸವ ಲತೆಯು ಅರಳಿಸಿರುವ ಭಕ್ತ ಸುಮಂಗಳಿವರ ನೋಡಿ
ಮಾಲೆ ಮಾಡಿ ಇಡುತಿದೆ ಸಂಗಮದ ಶರಣ ಮೇಳ ॥೩॥

ಎಲ್ಲರೆದೆಯ ಗುಪ್ಪರದಲಿ ಅಣುರಣಿಸಿದೆ ಶರಣ ಮೇಳ
ಸೆಳೆಯುತಿದೆ ಎಲ್ಲರನು ಅವರು–ಇವರು ಎನ್ನದೆ
ಜಾತಿ ಮತ ಪಂಥಗಳ ಸೀಮೆಯನ್ನು ದಾಂಟುತಾ
ಹಚ್ಚುತಿದೆ ಬಸವ ಬೆಳಕ ಹೃದಯದ ಹಣತೆಗಳಿಗೆ ॥೪॥

ಧನ್ಯವಾದ

ಆರನೆಯ ಶರಣ ಮೇಳ—ಜನ ಪ್ರವಾಹವನ್ನು ನೆನೆಸಿಕೊಂಡರೇ ಮೈ-ರೋಮಾಂಚನಗೊಳ್ಳುತ್ತದೆ. ಯಾವ ಶಕ್ತಿ ಇಷ್ಟು ಅಸಂಖ್ಯಾತರನ್ನು ಕರೆತರುತ್ತಿದೆ ? ಹರಿಹರ ಮಹಾಕವಿ ಹೇಳುವಂತೆ ;

" ಬಸವಣ್ಣನ ಪುಣ್ಯದ ಲೀಲೆ ಲೀಲೆ ಹೋ "

ಅಲ್ಲವೆ ? ಅಯೋಧ್ಯೆಯ ದುರ್ಘಟನೆ, ನಂತರ ನಡೆದ ಭಯಂಕರ ಹಿಂಸಾ ಕೃತ್ಯಗಳು, ಅಸ್ತವ್ಯಸ್ತಗೊಂಡ ಜನಜೀವನ-ಈ ಹಿನ್ನೆಲೆಯಲ್ಲಿ ಶರಣ ಮೇಳಕ್ಕೆ ಜನರು ಹೇಗೆ ಬರುವರೊ ? ಕಾರ್ಯ ಕರ್ತರಿಗೆ ದೇಣಿಗೆ ಸಂಗ್ರಹಿಸಲು ಆದೀತೇ ? ಎಂಬ ಸಂದೇಹ, ದುಗುಡ. ಆದರೆ ಈ ಎಲ್ಲ ಆತಂಕಗಳನ್ನು ಮೀರಿ ಜನರು ಬಂದರು, ಪ್ರವಾಹದೋಪಾದಿಯಲ್ಲಿ ಬಂದರು. ಆ ಜನ ಸಮೂಹವನ್ನು ನೋಡಿಯೇ ಎಲ್ಲರೂ ಬೆರಗಾದರು. ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುತ್ತ, ತನ್ನ ಪ್ರಭಾವವಲಯವನ್ನು ವಿಸ್ತರಿಸಿಕೊಳ್ಳುತ್ತಾ ಶರಣ ಮೇಳ ಬೆಳೆಯುತ್ತಿದೆ.

ಹಿಂದಿನ ವರ್ಷಕ್ಕಿಂತಲೂ ಹೆಚ್ಚು ಪ್ರಮಾಣದ ಕೋಣೆಗಳನ್ನು ನಿರ್ಮಿಸಲಾಗಿತ್ತಾದರೂ ಅವು 13 ನೇ ತಾರೀಖಿಗೇ ತುಂಬಿ ಬಿಟ್ಟವು. ತಂದಿದ್ದ ಹೆಚ್ಚುವರಿ ಸಾಮಾನನ್ನು ಬಳಸಿಯೂ ಶಾಮಿಯಾನಾ ಕಂಪೆನಿಗಳವರು ಇನ್ನು ನಿರ್ಮಿಸಲು ಸಾಮಾನು ಇಲ್ಲ ಎಂದರು. ಗುರು ಬಸವಣ್ಣನವರ ಮಾತೃಹೃದಯ ಸದಾ ಜಾಗೃತ. ಎಂಟನೆಯ ತಾರೀಖಿನವರೆಗೆ ಇದ್ದ ಚಳಿ ಒಂಭತ್ತನೆಯ ತಾರೀಖಿಗೆ ಕಾಲ್ತೆಗೆದಿತ್ತು; ಮೈ ಕೊರೆಯುವಂತೆ ಬೀಸುತ್ತಿದ್ದ ಶೀತಗಾಳಿ ವಿಶ್ರಾಂತಿ ಪಡೆದಿತ್ತು, (ಹದಿನೇಳನೆ ತಾರೀಖಿನಿಂದ ಪುನಃ ಅವು ತಮ್ಮ ಇರುವನ್ನು ಪ್ರತಿಷ್ಠಾಪಿಸಿದವು.) ಹೀಗಾಗಿ ಜನರು ತೊಂದರೆಯಾಗದಂತೆ ಅಲ್ಲಲ್ಲೇ ಮಲಗಲು ಸಾಧ್ಯವಾಯಿತು. ಸಭಾಮಂಟಪ ಸಹ ತುಂಬಿ ಚೆಲ್ಲವರಿಯಿತು.

ಹೆಚ್ಚಾಗುತ್ತಿರುವ ಜನ ಪ್ರವಾಹ ನೋಡಿ ನನಗೆ ಒಳಗೊಳಗೇ ಆತಂಕ. ಖರ್ಚು ಹೆಚ್ಚುಬರಲಿ ಚಿಂತೆಯಿಲ್ಲ; ಕೊಡುವವನೂ ಆ ಬಸವ ಗುರುವೆ, ತನ್ನ ಭಕ್ತರ ಮೂಲಕ ಕೊಳ್ಳುವವನೂ ಆತನೆ. ಬಸವ ಮಹಾಮನೆಯ ಮಕ್ಕಳಿಗಾಗಿ ತಾನೇ ನಾವು ದುಡಿಯುವುದು ? ಆದರೆ ಈ ಜನ ಸಮುದ್ರಕ್ಕೆ ಊಟೋಪಚಾರ ಹೇಗೆ ? ಅಡಿಗೆ-ಯವರು ಹೇಗೆ ನಿಭಾಯಿಸಬಲ್ಲರು ? ಶರಣ ಕಾರ್ಯಕರ್ತರು ಹೇಗೆ ಜನರನ್ನು ನಿಯಂತ್ರಿಸಿ, ಪ್ರಸಾದವನ್ನು ಎಡೆಮಾಡಬಲ್ಲರು ? ಎಂದು ಕಳವಳಗೊಂಡು "ಗುರು ಬಸವೇಶಾ-ನೀನೇ ನಿಭಾಯಿಸಬೇಕು." ಎಂದು ಅಂತರಂಗದಲ್ಲಿ ಪ್ರಾರ್ಥಿಸುತ್ತಿದ್ದೆ. ಇನ್ನೊಂದು ಅಳುಕೂ ಕಾಡುತ್ತಿತ್ತು.

ಕಾರ್ಯಕರ್ತರ ಪೂರ್ವಭಾವಿ ಸಭೆಯನ್ನು ಬೆಂಗಳೂರಲ್ಲಿ ಕರೆದಿದ್ದೆ. ಆಗ ಕೆಲವು ಶರಣರು ಅಂದರು ; ಉಚಿತ ದಾಸೋಹ ನಿಲ್ಲಿಸೋಣ. ಪ್ರತಿನಿಧಿಗಳಿಗೆ ಮಾತ್ರ ಮಾಡೋಣ"ಎಂದು. ನಾನು ಒಪ್ಪಲಿಲ್ಲ. "ಇಲ್ಲ....ಉಚಿತ ದಾಸೋಹ ಬೇಕೇ ಬೇಕು. ಅಪ್ಪ ಬಸವಣ್ಣನವರು ದಿನ ನಿತ್ಯ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳಿಗೆ ದಾಸೋಹ ಮಾಡಿಸುತ್ತಿದ್ದರು ಎಂದು ಓದುತ್ತೇವೆ. ನಾವು ವರ್ಷಕ್ಕೊಮ್ಮೆ ಮಾಡಲೂ ಆಗದೆ ? ಕೆಲವು ಬಡವರು ಬಸ್ ಚಾರ್ಜು ಖರ್ಚು ಮಾಡಲೂ ಅಸಮರ್ಥರಿರುತ್ತಾರೆ. ಅಂಥವರು ಶುಲ್ಕ ಕಟ್ಟಲಾರದೆ ವಂಚಿತರಾಗುವುದು ಬೇಡ. ನಮ್ಮ ಕೈಲಿ ಆಗುವತನಕ ಮಾಡೋಣ. ಆಗದಿದ್ದಾಗ ನೋಡೋಣ." ಎಂದೆ. ಕಾರ್ಯಕರ್ತರು ಸುಮ್ಮನಾದರು. "ಮಾತಾಜಿ ಹೇಳಿಬಿಡುತ್ತಾರೆ; ನಿಂತು ಮಾಡುವವರಿಗೆ ತಾನೇ ಕಷ್ಟ ?" ಎಂದು ಎಲ್ಲಿ ಇವರೆಲ್ಲ ಅಂದು ಕೊಳ್ಳುವರೋ ಈ. ಜನಸಮುದ್ರ ನೋಡಿ ಎಂದು ನನಗೆ ಒಳಗೇ ಅಳುಕು.

ಆದರೆ ನಮ್ಮ ಶರಣ ಬಂಧುಗಳು ದೊಡ್ಡ ಮನಸ್ಸಿನವರು ; ಹಗಲಿರುಳು ದುಡಿದರು; ತಾಳ್ಮೆ ಕೆಡಲಿಲ್ಲ, ಮುಖದ ನಗು ಮಾಸಲಿಲ್ಲ. ಅಡಿಗೆಯವರು ಸಹ ಇದೊಂದು ಕೂಲಿ ಕೆಲಸ ಎಂಬ ಉದಾಸೀನ ಭಾವ ತಾಳದೆ, ಪವಿತ್ರ ಸೇವೆ ಎಂದು ಅಡಿಗೆ ಸಿದ್ಧಪಡಿಸಿದರು. ಜನರು ರಾತ್ರಿಯ ವೇಳೆ ಬಂದರೂ ಅಡಿಗೆ ಮಾಡಿದರು, ನೀಡಿದರು. ಈ ಸಲ ಸ್ವಯಂ ಸೇವಕರು ಅದ್ಭುತವಾಗಿ ದುಡಿದರು ತನುಮುಟ್ಟಿ, ಮನ ಮುಟ್ಟಿ ದುಡಿದರು. ನನಗೆ ಹೃದಯ ತುಂಬಿ ಬಂದಿದೆ. ಯಾರನ್ನು ಹೊಗಳಬೇಕು,ಯಾರನ್ನು ಬಿಡಬೇಕು ಎನ್ನುವಂತಾಗಿದೆ.ಆ ಜನ ಸಮೂಹಕ್ಕೆ ಪ್ರಸಾದ ವ್ಯವಸ್ಥೆ ಆದುದು ನೋಡಿ ಇದೊಂದು ಪವಾಡ ಸದೃಶ ಘಟನೆ ಎನ್ನಿಸಿಬಿಟ್ಟಿದೆ "ಬಸವಾ" ಎಂಬ ಮೂರಕ್ಷರ ಹೃದಯದಲ್ಲಿ ನೆಲೆಗೊಂಡರೆ ಅಭೇದ್ಯ ಭೇದ್ಯವಾಯಿತು; ಅಸಾಧ್ಯ ಸಾಧ್ಯವಾಯಿತ್ತು ಎಂಬ ಶರಣವಾಣಿ ಸತ್ಯವೆನಿಸಿದೆ. 'ಬಸವಾ' ಎಂಬ ಮೂರಕ್ಷರ 'ಯಶಸ್ಸು' ಎಂಬ ಅಂತರಾರ್ಥ ಒಳಗೊಂಡಿದೆ ಎಂಬ ಭಾವ ಬಂದಿದೆ.

ಎಂ. ಜೀವನ ಎಂಬ ಲೇಖಕರಿದ್ದರು. ಅವರು ಇಸ್ಲಾಂ ಧರ್ಮಾನುಯಾಯಿಗಳಾದರೂ ಒಂದು ಪ್ರಸಂಗವನ್ನು ತಮ್ಮ ಬರಹವೊಂದರಲ್ಲಿ ಉಲ್ಲೇಖಿಸಿದ್ದರು. ಅವರು ಬಾಲಕರಿದ್ದಾಗ ಒಮ್ಮೆ ಒಂದು ಚೇಳು ಬಂದಿತಂತೆ. ಅವರ ಅಕ್ಕ ಆ ಚೇಳಿಗೆ "ನೀನು ಮುಂದಕ್ಕೆ ಸರಿದರೆ ಬಸವಣ್ಣನ ಆಣೆ ಆದೀತು" ಎಂದಳಂತೆ. ಅದು ಸ್ತಂಭೀಭೂತ-ವಾಗಿ ನಿಂತಿತಂತೆ. ಆಣೆ ತೆಗೆದ ಮೇಲೆಯೇ ಅದು ಸರಿಯಿತಂತೆ. ಬಾಲಕರಿದ್ದ ಇವರು ಬೆರಗಾದರಂತೆ. ಈ ಘಟನೆ ಸಾಂಕೇತಿಕ. ದೇಶದಲ್ಲಿ ಎಲ್ಲೆಡೆ ಅಶಾಂತಿ, ಉದ್ವೇಗ ತುಂಬಿ ತುಳುಕುವಾಗ ಇಷ್ಟು ನಿರ್ವಿಘ್ನವಾಗಿ ಶರಣ ಮೇಳ ನಡೆದುದನ್ನು ನೋಡಿದರೆ.ಅದೂ ಯಾರ್‍ಯಾರಿಗೂ ಏನೇನೂ ತೊಂದರೆಯಿಲ್ಲದೆ ನಡೆದುದು ನೋಡಿದರೆ, ಮೇಲಿನ ಪ್ರಸಂಗ ಸಾಂಕೇತಿಕ ಮತ್ತು ಸತ್ಯ ಎನ್ನಿಸದೆ ಇರದು.

ಶರಣ ಮೇಳದಂತಹ ಬೃಹತ್ ಸಮಾವೇಶ ನಿರ್ವಹಣೆಗೆ ಬೇಕಾದ ಮುಖ್ಯ ಪೋಷಕಾಂಶ ಹಣ. ಧನ ಸಂಗ್ರಹಣೆಗೆ ಶರಣ ಬಂಧುಗಳು ಬಹಳ ಶ್ರಮಿಸಿದ್ದಾರೆ. ಶರಣ ಮೇಳಕ್ಕೆ ಸರ್ಕಾರದ ಹಣವೂ ಇಲ್ಲ; ಕೋಟ್ಯಾಧಿಪತಿಗಳ ನೆರವೂ ಇಲ್ಲ. ಸದ್ಭಕ್ತಿ ಸಂಪನ್ನರ ಬಲವೇ ಬಲ. ಹೀಗಾಗಿ ಹಣವು ಶರಣ ಮೇಳಕ್ಕೆ ಪ್ರವಾಹದಂತೆ ಬರದು; **ಚಿಲುಮೆಯ ನೀರಿನಂತೆ ಬರುವುದು.** ಅದನ್ನು ಶ್ರದ್ಧೆಯಿಂದ, ಶಾಂತಿಯಿಂದ, ತಾಳ್ಮೆಯಿಂದ, ಪರಿಶ್ರಮದಿಂದ ಸಂಗ್ರಹಿಸಬೇಕಾಗುವುದು. ಇಂಥ **ಶ್ರದ್ಧೆ–ಶಾಂತಿ–ತಾಳ್ಮೆ–ಪರಿಶ್ರಮ** ದಿಂದ ಎಲ್ಲಕ್ಕಿಂತ ಮಿಗಿಲಾಗಿ ಪ್ರಾಮಾಣಿಕತೆಯಿಂದ ಸಂಗ್ರಹಿಸುವ ಶರಣ ಬಂಧುಗಳೇ ಇಂದು ನಮ್ಮ **ಜಂಗಮ ಆಸ್ತಿ.** ನೂರು ಮಾತನ್ನಾಡಿ ಹತ್ತು ರೂಪಾಯಿ ಕೊಡುವ ಅಥವಾ ಅದನ್ನೂ ಕೊಡದೆ ಬೈದು ಕಳಿಸುವ ಜನ, ನಮ್ಮ ಮನೆಗೆ ಶರಣರು ಬಂದರು ಎಂದು ರಾತ್ರಿ 11 ಗಂಟೆಯಲ್ಲಿ ಬಾಗಿಲು ಬಡಿದರೂ ಬಾಗಿಲು ತೆರೆದು ಅಡಿಗೆ ಮಾಡಿ ಉಣ್ಣಿಸಿ ಕಾಣಿಕೆ ಕೊಟ್ಟು ಕಳಿಸುವ ಹೃದಯವಂತರು-ಉಭಯತರ ಒಡನಾಡಿ ದೇಣಿಗೆ ಸಂಗ್ರಹಿಸುವುದೇನೂ ಸಾಮಾನ್ಯ ಕೆಲಸವಲ್ಲ. ಚಿತ್ತ ಸಮತೆಯಿಂದ ನಮ್ಮ ಶರಣರು ಶ್ರಮಿಸಿದ್ದಾರೆ. ಹೀಗಾಗಿ ಇವರನ್ನೆಲ್ಲ ಯಾವ ಪದಗಳಿಂದ ಹೊಗಳಬಹುದು ?

ರಾಷ್ಟ್ರೀಯ ಬಸವ ದಳದ ಸದಸ್ಯರು, ಇನ್ನಿತರ ಶರಣ ಬಂಧುಗಳು ತನುಮನ ಧನದಿಂದ ದುಡಿದಿದ್ದಾರೆ. ಸುಮಾರು 3 ತಿಂಗಳ ಕಾಲ ಅವರು ತಿರುಗಾಡಿದ್ದಾರೆ. ಈ ಮೂರು ತಿಂಗಳ ಕಾಲದ ಪ್ರಚಾರ ಅಪ್ರತ್ಯಕ್ಷವಾಗಿ ಧರ್ಮ ಪ್ರಚಾರವಾಗಿದ್ದು, ಇದ-ರಿಂದ ಜಾಗೃತಿಯುಂಟಾಗಿರುವುದು ವಿಶೇಷ ಸಂಗತಿ. ಆದ್ದರಿಂದ ಇವರೆಲ್ಲರಿಗೂ ಅಭಿನಂದನೆ ಸಲ್ಲಿಸುವುದು ಅಸಾಧ್ಯವಾದರೂ ಅನಿವಾರ್ಯವೆನಿಸಿದೆ. ಹೃದಯವಂತರಾದ ಈ ಶರಣ ಬಂಧುಗಳು ತಮ್ಮ ಜವಾಬ್ದಾರಿ ಅರಿತು ತಾವು ತಾವೇ ಸಿದ್ಧತೆಗಳನ್ನು ಮಾಡಿಕೊಳ್ಳುವುದರಿಂದ ನಮ್ಮ ಮಾನಸಿಕ ಒತ್ತಡ ಸಹ ಕಡಿಮೆಯಾಗಿದೆ. ವರ್ಷದಿಂದ ವರ್ಷಕ್ಕೆ ಜನ ಜಾಸ್ತಿಯಾಗಿ ಹೊಣೆಗಾರಿಕೆ ಹಿರಿದಾಗುತ್ತಿದ್ದರೂ, ಮನಮನ ಧನಗಳಿಂದ ಹೆಗಲುಕೊಟ್ಟು ದುಡಿವ ಶರಣ ಬಂಧುಗಳ ಸಂಖ್ಯೆ ಬೆಳೆಯುತ್ತಿರುವುದರಿಂದ ಮನಸ್ಸು ಆನಂದ ಪುಳಕಿತವಾಗಿದೆ. ಇಷ್ಟು ದಿನಗಳಿಗೆ ಈ ಸೇವಾವಕಾಶ ಸಿಕ್ಕಿತಲ್ಲಾ ಎಂಬ ಇಮ್ಮಡಿಸಿದ ಉತ್ಸಾಹದಿಂದ ಶರಣ ಬಂಧುಗಳು ದುಡಿಯುವುದನ್ನು ಕಂಡು ಹೃದಯ ತುಂಬಿ ಬರುತ್ತಿದೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

—**ಮಾತಾಜಿ**

ಶರಣ ಮೇಳ ಉತ್ಸವ ಸಂಚಾಲಕ ಸಮಿತಿ

ಶರಣ ಮೇಳವು ಅಗಾಧ ಜನಪ್ರಿಯತೆ ಗಳಿಸಿಕೊಂಡು ವರ್ಷದಿಂದ ವರ್ಷಕ್ಕೆ ಹೆಚ್ಚಿನ ಶರಣ ಬಂಧುಗಳನ್ನು ಆಕರ್ಷಿಸುತ್ತಿರುವ ಕಾರಣ ಜವಾಬ್ದಾರಿ ಜಾಸ್ತಿಯಾಗುತ್ತಿದೆ. ಇದರಲ್ಲಿ ಜನರು ಸ್ವಯಂ ಪ್ರೇರಣೆಯಿಂದ ದೇಣಿಗೆ ಸಂಗ್ರಹಿಸಲು ಮುಂದಾಗಲು ಒಂದು ಯೋಜನೆ ರೂಪಿಸಬೇಕು ಎಂಬ ಸಲಹೆಯನ್ನು ಶಿವಮೊಗ್ಗಾದ ಶರಣ. ವಿಜಯಕುಮಾರ್, ಭದ್ರಾವತಿಯ ಶರಣ. ಬಸವರಾಜು ಮತ್ತು ವಿಜಯಪುರದ ಶರಣರುಗಳಾದ ಮುನಿನಾರಾಯಣಪ್ಪ, ಬಸವರಾಜಪ್ಪ, ಜಯದೇವ ಮುಂತಾದವರು ಪ್ರಸ್ತಾಪಿಸಿದರು. ಬೆಂಗಳೂರಲ್ಲಿ ದಿ. 27-12-92 ರಂದು ಕರೆದ ಕಾರ್ಯಕರ್ತರ ಸಭೆಯಲ್ಲಿ ಪ್ರಸ್ತಾಪಿಸಿದರು. ಇದನ್ನು ದಿ. 12-1-93 ರಂದು ನಡೆದ ಬಸವ ಧರ್ಮ ಸಂಸತ್ ಮತ್ತು ಶರಣರ ಮಹಾಸಭೆಯಲ್ಲಿ ಮಂಡಿಸಿ ಚರ್ಚಿಸಲು ಹೇಳಿದೆ. ಅದರಂತೆ ಚರ್ಚೆ ಮತ್ತು ನಿರ್ಣಯದ ಸಾರಾಂಶ ಹೀಗಿದೆ :

1. ಶರಣ ಮೇಳ ನಿರ್ವಹಣೆ ಪ್ರತಿಯೊಬ್ಬರ ಜವಾಬ್ದಾರಿ.
2. ಆದ್ದರಿಂದ ಸ್ವಯಂ ಪ್ರೇರಣೆಯಿಂದ ದೇಣಿಗೆ ಸಂಗ್ರಹಿಸಿ ಕೊಡಲು ಶರಣ ಬಂಧುಗಳು ಮುಂದಾಗಬೇಕು. ರಾಷ್ಟ್ರೀಯ ಬಸವ ದಳಗಳವರು ತಮ್ಮ ತಮ್ಮ ನಗರ, ಪಟ್ಟಣ, ಗ್ರಾಮಗಳ ವ್ಯಾಪ್ತಿಗೆ ಅನುಗುಣವಾಗಿ ದೇಣಿಗೆ ಸಂಗ್ರಹಿಸಬೇಕು.
3. ಶರಣ ಮೇಳ ಉತ್ಸವ ಸಂಚಾಲಕ ಸಮಿತಿಯೊಂದನ್ನು ಮಾಡಬೇಕು. ಈ ಸಮಿತಿಗೆ ಸ್ವಯಂ ಪ್ರೇರಣೆಯಿಂದ ಜನರು ಹೆಸರು ನೋಂದಾಯಿಸಬೇಕು. ಅವರು ವೈಯಕ್ತಿಕವಾಗಿಯಾಗಲೀ, ಸಂಗ್ರಹಿಸಿಯಾಗಲೀ ಕನಿಷ್ಟ ಪಕ್ಷ 2000 ರೂ.ಗಳನ್ನು, ಹೆಚ್ಚು ಎಷ್ಟು ಸಾಧ್ಯವೋ ಅಷ್ಟನ್ನು ಸಂಗ್ರಹಿಸಿಕೊಡಬೇಕು.

ಪ್ರತಿವರ್ಷವೂ ಅಕ್ಟೋಬರ ತಿಂಗಳಲ್ಲಿ ಕೇಂದ್ರ ಸಂಸ್ಥೆಯಿಂದ ಈ ಶರಣರಿಗೆ ಸೂಚನಾ ಪತ್ರ, ಪ್ರಚಾರ ಸಾಮಗ್ರಿ, ರಸೀತಿ ಪುಸ್ತಕ ಹೋಗಬೇಕು.

ಇಂಥ ಕಾರ್ಯಕರ್ತರ 500 ಹೆಸರನ್ನಾದರೂ ಸಂಗ್ರಹಿಸಬೇಕು. ಪ್ರತಿವರ್ಷವೂ ಸಂಗ್ರಹಗೊಂಡು, ವಿನಿಯೋಗವಾಗಿ ಉಳಿದರೆ ಆ ಹಣವನ್ನು ಶರಣ ಮೇಳ ಉತ್ಸವದ ನಿಧಿಯನ್ನಾಗಿ ಬ್ಯಾಂಕಿನಲ್ಲಿ ಇಡಬೇಕು.

ಈ ಸಂಗತಿಗಳ ಬಗ್ಗೆ ಒಮ್ಮತದ ನಿರ್ಣಯ ವ್ಯಕ್ತವಾಯಿತು. ಅನೇಕ ಶರಣರು ತಮ್ಮ ಹೆಸರುಗಳನ್ನು ರಾಷ್ಟ್ರೀಯ ಬಸವ ದಳದ ಸರ್ವೋಚ್ಚ ಸಮಿತಿಯ ಸದಸ್ಯ ಎಸ್. ಲಿಂಗಣ್ಣನವರ ಬಳಿ ಬರೆಸಿದರು.

ಈ ಸಮಿತಿಯ ಸದಸ್ಯರಾಗಲು ಎಲ್ಲರಿಗೂ ಅವಕಾಶವಿದೆ. ಇಲ್ಲಿ ಮುಖ್ಯವಾಗಿ ಬೇಕಾದುದು ಸ್ವಯಂ ಸ್ಫೂರ್ತಿ. ಆದ್ದರಿಂದ ಅಂಥ ಉತ್ಸಾಹಿಗಳು ತಮ್ಮ ಹೆಸರು ವಿಳಾಸಗಳನ್ನು ಬರೆಸಬೇಕು.

ಕ್ರ.ಸಂ.	ಹೆಸರು	ಊರು
	ಶರಣರುಗಳಾದ :	
1,	ರಾಜಶೇಖರ ಮಡಕಿ,	ಸೊಲ್ಲಾಪುರ
2.	ಇ. ಎಲ್. ಚನ್ನಬಸಪ್ಪ,	ಬೀಚಗಾನಹಳ್ಳಿ
3.	ಬಾಲಚಂದ್ರ ಚೆನ್ನಿ,	ಮಹಾಲಿಂಗಪುರ
4.	ಗುರುಲಿಂಗಮೂರ್ತಿ,	ಬೆಂಗಳೂರು

5.	ಡಿ. ಬಿ. ಕೊಳ್ಳಿ	ಬೈಲಹೊಂಗಲ
6.	ಎಸ್. ಪ್ರಭಯ್ಯ,	ಬೆಂಗಳೂರು
7.	ವಿ. ಎಂ. ಮೆಳವಂಕಿ,	ಬೆಳಗಾಂವ
8.	ಬಿ. ಜಯದೇವ,	ಬೆಂಗಳೂರು
9.	ಬಸವರಾಜ ಕರಡಿ,	ಗುಲಬರ್ಗಾ
10.	ವೀರಣ್ಣ ವೀರಭದ್ರಪ್ಪ ಕೊರ್ಲಳ್ಳಿ,	ಕೊಪ್ಪಳ
11.	ಸಿ. ಬಿ. ಬೇವನೂರು,	ಬಿಜಾಪುರ
12.	ಎಂ. ನಂಜಪ್ಪ,	ಚಾಮರಾಜನಗರ
13.	ಎಸ್. ಸದಾಶಿವಪ್ಪ,	ಚಾಮರಾಜನಗರ
14.	ಎ. ಮಹಾಲಿಂಗಯ್ಯ,	ತುಮಕೂರು
15.	ಶರಣಪ್ಪ,	ಭದ್ರಾವತಿ
16.	ಜಿ. ಚನ್ನಯ್ಯ,	ಚಿತ್ರದುರ್ಗ
17.	ಮುರಿಗೆಪ್ಪ ಬಾಬಣ್ಣ ಶಿವಮೂರ್ತಿ,	ಹಲ್ಯಾಳ
18.	ಗುರುಪಾದಪ್ಪ ಎಂ. ಬೆಟಗೇರಿ,	ಧಾರವಾಡ
19.	ಅನ್ನಪೂರ್ಣಮ್ಮ ಪಟ್ಟೇದ,	ಧಾರವಾಡ
20.	ರತ್ನ ನಾಗಪ್ಪ ಜಕ್ಕಣ್ಣನವರ,	ಧಾರವಾಡ
21.	ಗಂಗಮ್ಮ ಮಲ್ಲೇಶಪ್ಪ ಕನಸೋಗಿ,	ಧಾರವಾಡ
22.	ಸರಸ್ವತಮ್ಮ ಗರಗದ,	ಧಾರವಾಡ
23.	ವಿಜಯಾ ನಂಜುಂಡಪ್ಪ,	ದಾವಣಗೆರೆ
24.	ಪಂಚಾಕ್ಷರಯ್ಯ,	ನೊಣವಿನಕೆರೆ
25.	ಚನ್ನಬಸಪ್ಪ ಹೊಸಮನಿ,	ಬೈಲಹೊಂಗಲ
26.	ಟಿ. ಬಸವರಾಜಪ್ಪ,	ವಿಜಯಪುರ
27.	ಎಂ. ಜಯದೇವ	ವಿಜಯಪುರ
28.	ವಿ. ಶಿವಣ್ಣನವರು	ವಿಜಯಪುರ
29.	ಬಿ. ಮುನಿನಾರಾಯಣಪ್ಪ,	ವಿಜಯಪುರ
30.	ಎನ್. ಮಲ್ಲಿಕಾರ್ಜುನ್,	ಬೆಂಗಳೂರು
31.	ಸಿ. ಸಂಗಮೇಶ್ವರ,	ಶಿವನಾಪುರ
32.	ಶಂಕರಪ್ಪ ವಿಜಯನಗರ,	ಬೆಂಗಳೂರು
33.	ಎ. ಎನ್. ವಿಶ್ವೇಶ್ವರಯ್ಯ,	ಚಿಕ್ಕಬಳ್ಳಾಪುರ
34.	ನಾಗರತ್ನಮ್ಮ,	ಚಿಕ್ಕಬಳ್ಳಾಪುರ
35.	ಎಸ್. ಜಿ. ಬಿರಾದಾರ್,	ಧವಳಗಿ
36.	ಪುಟ್ಟಹೊನ್ನಮ್ಮ,	ಬೆಂಗಳೂರು
37	ಲಿಂಗರಾಜ ಶಿವಪ್ಪ	ಇಂಗಳಹಳ್ಳಿ
38.	ಬಾಣೂರು ಹಿರಣ್ಣಯ್ಯ,	ತರೀಕೆರೆ
39.	ಬಾಣೂರು ರಾಮಚಂದ್ರಪ್ಪ,	ಬಾಣೂರು
40.	ಗೌರಮ್ಮ ಹಿರಣ್ಣಯ್ಯ,	ತರೀಕೆರೆ
41.	ಬಾಣೂರು ಚನ್ನಪ್ಪ,	ಅಜ್ಜಂಪುರ
42.	ತೋಟಪ್ಪ ದೇವೇಂದ್ರಪ್ಪ ಮುಮ್ಮಿಗಟ್ಟಿ,	ಧಾರವಾಡ
43.	ಡಾ॥ ಆರ್. ಬಿ. ಕಾಲ್‌ತಿಪ್ಪಿ,	ತೇರದಾಳ
44.	ಕೆ. ಹೆಚ್. ಬಸವಾನಾಯಕ,	ಬೇರಂಬಾಡಿ
45.	ಲಿಂಗೇಗೌಡ,	ಅಂತರಗಂಗೆ,
46.	ಆರ್. ಎಸ್. ಹೊನ್ನಪ್ಪನವರು,	ಧಾರವಾಡ
47.	ಸುಬ್ಬಣ್ಣ ನಂಜಪ್ಪ ಮೈಸೂರು,	ಧಾರವಾಡ
48.	ಎಸ್. ಎಲ್. ಗೋಂಧಳಿ,	ಅಥಣಿ
49.	ಎಂ. ನಾಗರಾಜು,	ಮೈಸೂರು
50.	ಬಸವರಾಜ ಬರಗುಂಡಿ,	ಬಾದಾಮಿ
51.	ಡಾ॥ ಎ. ಆರ್. ಕಡಕೋಳ,	ಗೋಕಾಕ
52.	ಕಂಚ್ಯಾಣಿ ಶರಣಪ್ಪ,	ಮಲಘಾಣ
53.	ಬಾಳಗೌಡ ಬಾಬಣ್ಣ ನೇರಲಿ,	ಸಂಕೇಶ್ವರ
54.	ಶಂಕರಪ್ಪ ಗುಂಡಪ್ಪ ಮಹಾಂತಗೋಳ,	ಗುಲಬರ್ಗಾ
55.	ಶಿವಯೋಗಿ ಹಿರೇಮಠ,	ಚಿಪ್ಪಲಕಟ್ಟಿ
56.	ಅನಿತಾ ಪಾಟೀಲ,	ಬೆಂಗಳೂರು
57.	ಮಲ್ಲೇಶಪ್ಪ ಕತ್ತೀಶೆಟ್ಟಿ,	ಧಾರವಾಡ
58.	ಎಂ. ಸಿ. ಶ್ರೀಕಂಠನ್	ಮತ್ಸಮುದ್ರ
59.	ಕುಮಾರ ಕಕ್ಕಯ್ಯ ಪೋಳ,	ಬಿಜಾಪುರ
60.	ಬಸವಣ್ಣ ಹಂಪನಗೌಡ್ರ,	”
61.	ಪಾರ್ವತಾ ಸುನಂದಮೂರ್ತಿ,	ಬೆಂಗಳೂರು
62.	ವಿ. ಶ್ರೀಕಂಠಮೂರ್ತಿ,	ಬೆಂಗಳೂರು
63.	ಎಂ. ಶಿವಕುಮಾರಸ್ವಾಮಿ,	ಉಮ್ಮತ್ತೂರು
64.	ಇಂದುಶೇಖರ,	ಬೆಂಗಳೂರು
65.	ಬಸವರಾಜ ಚಂದ್ರಕಾಂತ ಲುಕ್,	ಬಾಗಲಕೋಟೆ
66.	ಎಂ. ಆರ್. ಹುಲ್ಯಾಳ,	”

67.	ಶಿವಪ್ಪ ಮೇಲಪ್ಪ ಜೋಳದ,	ಬಾಗಲಕೋಟೆ
68.	ಸರೋಜಮ್ಮ ಎಂ. ನಾಗರಾಜು,	ಮೈಸೂರು
69.	ಮಣ್ಣೂರು ವಕೀಲರು,	ಬಾಗಲಕೋಟೆ
70.	ರೇವಣಸಿದ್ಧಪ್ಪ ಶೆಟಗಾರ,	ಗುಲಬರ್ಗಾ
71.	ಸಿದ್ಧರಾಮಪ್ಪ ಬಾಳಪ್ಪಗೋಳ,	"
72.	ವಿಶ್ವನಾಥ ಬಸಪ್ಪ ಡೋಣೂರು,	ಸಗರ
73.	ರವೀಂದ್ರನಾಥ ಬಿರಾದಾರ,	ಗುಲಬರ್ಗಾ
74.	ಮಲ್ಲಪ್ಪ ಪುಲಾರಿ,	ಗುಲಬರ್ಗಾ
75.	ಬಸವಣ್ಣೆಪ್ಪ ಸಾತೀರಪ್ಪ ಕಳಸಣ್ಣನವರು,	ಬೈಲಹೊಂಗಲ
76.	ಸಿ. ಎಂ. ರಾಜಣ್ಣ,	ಧೂದಗಂಗಾನಗರ
77.	ಗಂಗಮ್ಮ ಪಾಟೀಲ,	ಧಾರವಾಡ
78.	ಬಸವರಾಜ ಗಾಯತೊಂಡೆ,	ಬೀದರ
79.	ವೀರಭದ್ರಪ್ಪ ಪಾರಶೆಟ್ಟಿ,	ಗುಲಬರ್ಗಾ
80.	ಪರುತಪ್ಪ ಕರದಳ್ಳಿ,	ವಾಡಿ
81.	ಜಿ. ಶಾಂತಯ್ಯ,	ಗನ್ನಾಯ್ಯನಹಳ್ಳಿ
82.	ಬಸಮ್ಮ ರುದ್ರಮುನಿಯಪ್ಪ ಮತ್ತು ಕೆ. ರಂಗಸ್ವಾಮಿ,	ಸೋಮಗುದ್ದು
83.	ದೇವಿಕಾ ಶರಣಪ್ಪ,	ಬೆಂಗಳೂರು
84.	ಪಾರ್ವತಿ ಡಾ|| ಸಿ. ವಿ. ಶಿರೋಳ,	ಬೆಂಗಳೂರು
85.	ಬಸವರಾಜ ನಾಡಗೌಡ,	ಗಣಜಲಿ
86.	ರಂಗಣ್ಣ,	ದೇವದುರ್ಗ
87.	ಆರ್. ಚಂದ್ರಶೇಖರ, ಸಕಲಟ್ಟಿ,	ತಮಿಳುನಾಡು
88.	ಸೋಮಣ್ಣ,	ಬಿಸಿಲೇರಿ
89.	ಪರಮೇಶ್ವರಪ್ಪ,	ಬಿಸಿಲೇರಿ
90.	ಜಿ. ಬಸವರಾಜು,	ತಿಮ್ಮಪ್ಪಯ್ಯನಹಳ್ಳಿ
91.	ಪಿ. ಎಸ್. ಅಂಗಡಿ,	ಹುಬ್ಬಳ್ಳಿ
92.	ಬಿ. ಎ. ವೆಂಕಟಸ್ವಾಮಿ,	ಮೈಲನಹಳ್ಳಿ
93.	ಟಿ. ತಿಮ್ಮಪ್ಪ,	ಕಸವಿಗೊಂಡನಹಳ್ಳಿ
94.	ಎಂ. ಮಲ್ಲಿಕಾರ್ಜುನಪ್ಪ,	ಚಳ್ಳಕೆರೆ
95.	ಡಿ. ಬಿ. ಗೌಡರ್,	ಬಾಗಲಕೋಟೆ
96.	ಟಿ. ಜಿ. ಶೆಟ್ಟರ್,	"
97.	ಟಿ. ಚಂದ್ರಣ್ಣ,	
		ಮೈಲನಹಳ್ಳಿ

98.	ಡಿ. ಸಿ. ಈಶ್ವರಶಾಸ್ತ್ರಿ,	ಡಿಗ್ಗೇನಹಳ್ಳಿ
99.	ಬಸಣ್ಣ ರಾಮಚಂದ್ರ	ದೇವಣಗಾಂವ
100.	ಎಂ. ಸಿ. ಶಿವಣ್ಣ,	ತುಮಕೂರು
101.	ಎಸ್. ಲಿಂಗಣ್ಣ,	ಚಿತ್ರದುರ್ಗ
102.	ಶಿವಪುತ್ರಪ್ಪ ಮಲ್ಲೇಶಪ್ಪ ಪಾಟೀಲ	
103.	ಪಂಚಕಮಿಟಿ, ಹೆಬ್ಬಳ್ಳಿ ಅಗಸಿ	ಧಾರವಾಡ
104.	ಸಂಗನಬಸಪ್ಪ ಮರಿಯಪ್ಪ ಮೂಲೀಮನಿ	
105.	ಆರ್. ಬಿ. ಹೆಬ್ಬಳ್ಳಿ,	ಬಾಂಬೆ
106.	ಹೆಚ್. ವಿ. ವೆಂಕಟೇಶ,	ಚನ್ನಕೇಶವಪುರ
108.	ಜೆ. ಷಡಕ್ಷರಪ್ಪ,	ಭದ್ರಾವತಿ
109.	ಎಂ. ಕೆ. ದಾನಪ್ಪ,	ಮೈಲನಹಳ್ಳಿ
110.	ಕೆ. ಸಿ. ಕೊಂಡಗುಳಿ,	ಹುಬ್ಬಳ್ಳಿ
111.	ಜಿ. ಎಂ. ಮರುಳಸಿದ್ದಪ್ಪ,	ತರೀಕೆರೆ
112.	ಬಸವರಾಜ್ ಬೂದಪ್ಪ ಪೂಜಾರ,	ಆಂತೂರು ಬೆಂತೂರು
113.	ವೀರಪ್ಪ ವೀ. ಮದ್ನೂರು,	" "
114.	ವೀರಣ್ಣ ದಾಟನಾಳ,	ಹುಬ್ಬಳ್ಳಿ
115.	ಬಸವರಾಜಪ್ಪ, ಬಸರೆಡ್ಡಿ,	ಅಲ್ಲೂರು
116.	ಸಿದ್ಧರಾಮ ಈರಪ್ಪ ಚೌಧರಿ,	ಗೋಕಾಕ
117.	ಬಾಳಾಸಾಹೇಬ ಶರಣಪ್ಪ ಭಾವೀಕಟ್ಟಿ,	ಬೊಮ್ಮನಹಳ್ಳಿ
118.	ಬಸವರಾಜ ಭರಶೆಟ್ಟಿ	ಬೀದರ
119.	ಮಾಣಿಕ್ಯಪ್ಪ ಗೋರ್ನಳ್ಳಿ	
120.	ಚನ್ನಪ್ಪ ಬಸವರಾಜ ಪಾಟೀಲ,	ಜೇವರ್ಗಿ
121.	ಆರ್. ಮಲ್ಲಿಕಾರ್ಜುನ, ಬಾಗೇಪಲ್ಲಿ	

(ಮುಂದುವರಿಯುವುದು)

ದಿ. 12-1-1993 ರಂದು ಚರ್ಚಿಸಿದಾಗ ಇನ್ನೂ ಅನೇಕ ಕಾರ್ಯಕರ್ತರು ಬಂದಿರಲಿಲ್ಲ. ನಾವು ಮಧ್ಯೆ ಮಧ್ಯೆ ಅನೌನ್ಸ್ ಮಾಡಲಿಲ್ಲ. ಹೀಗಾಗಿ ಎಷ್ಟೋ ಜನರು ಗೊತ್ತಾಗದ್ದರಿಂದ ತಮ್ಮ ಹೆಸರು ನೋಂದಾಯಿಸಿಲ್ಲ. ಕಲ್ಯಾಣ ಕಿರಣ ಓದಿದ ಬಳಿಕ ತಮ್ಮ ಹೆಸರನ್ನು ಬರೆದು ಕಳಿಸಬೇಕು. ಈಗಾಗಲೇ ಸಕ್ರಿಯವಾಗಿ ದುಡಿಯುತ್ತಿರುವ ಅನೇಕರ ಹೆಸರು ಈ ಯಾದಿಯಲ್ಲಿ ಬಂದಿಲ್ಲ. ನಾನು ಅವರಿಗೆಲ್ಲ ಶರಣ ಮೇಳದ ಸಮಯದಲ್ಲಿ ಸೂಚನಾ ಪತ್ರ ಕಳಿಸುತ್ತೇನೆ. ಆ ವಿಷಯ ಬೇರೆ. ಆದರೆ ಈ ಯಾದಿಯಲ್ಲಿ ಸ್ವಯಂ ಪ್ರೇರಣೆಯಿಂದ ಹೆಸರು ಬರೆಸುವುದು ಅಭಿನಂದನಾರ್ಹ.

ವಿಜಯಕುಮಾರ್-ಬಸವರಾಜರು ಈ ಸಲಹೆ ಮುಂದಿಟ್ಟಾಗ ಈಗ ಬಹಳಷ್ಟು ಜನ ದುಡಿಯುತ್ತಲೇ ಇದ್ದಾರೆ. ಇನ್ನೊಂದು ಸಮಿತಿ ಮಾಡುವ ಅಗತ್ಯವೇನು ಎಂದು ನಾನು ಮತ್ತು ಶರಣ. ಪುಟ್ಟರುದ್ರಪ್ಪ ಕೇಳಿದಾಗ ಅವರು ಹೇಳಿದರು. "ತುಂಬಾ ಜನ ಶರಣರು ದುಡಿಯುತ್ತಾರೆ. ಒಟ್ಟಾಗಿ ಆಯಾ ರಾಷ್ಟ್ರೀಯ ಬಸವ ದಳದ ಹೆಸರಲ್ಲಿ ನಾವು ಹಣ ತಂದು ಜಮಾ ಮಾಡುತ್ತೇವೆ. ಈ ರೀತಿ ಸಮಿತಿ ಮಾಡುವುದರಿಂದ ಅವರ ಹೆಸರೂ ಕಾಣಿಸಲ್ಪಡುವುದರಿಂದ, ಅವರಿಗೂ ಪ್ರತ್ಯೇಕ ಮನ್ನಣೆ ಸಿಕ್ಕುವುದು. ಕೇಂದ್ರದಿಂದ ನೀವೇ ನೇರವಾಗಿ ಆದೇಶ ಕಳಿಸಿದರೆ ಅವರ ಉತ್ಸಾಹ ಇನ್ನಷ್ಟು ಹೆಚ್ಚಾಗುವುದು" ಎಂದರು. ಹೀಗೆ ಈ ಇಬ್ಬರು ಶರಣರ ಸೂಚನೆ ನಿಜಕ್ಕೂ ಗಮನಾರ್ಹವಾದುದರಿಂದ ಅದನ್ನು ಆಚರಣೆಗೆ ತರಲಾಗಿದೆ.

—: ವಿಶೇಷ ಸೂಚನೆ :—

1. ಈ ಯಾದಿಯಲ್ಲಿರುವ ಶರಣ ಬಂಧುಗಳಿಗೆ ಅಧಿಕೃತ ಸದಸ್ಯತ್ವದ ಒಂದು ಪ್ರಮಾಣ ಪತ್ರ (ಸರ್ಟಿಫಿಕೇಟ್) ಕಳಿಸಲಾಗುವುದು. ಮತ್ತು ಶರಣ ಮೇಳದ ದೇಣಿಗೆ ಸಂಗ್ರಹಕ್ಕೆ ಅನುಮತಿ ನೀಡಲಾಗುವುದು.
2. ಇವರುಗಳು ಇಷ್ಟಪಟ್ಟಲ್ಲಿ ರಸೀತಿ ಪುಸ್ತಕಗಳನ್ನು ಯಾವಾಗಬೇಕಾದರೂ, ಈಗಲೇ ಬೇಕಾದರೂ ಕೊಡಲು ಸಾಧ್ಯವಿದೆ. ಏಕೆಂದರೆ, ಕೆಲವರು ತಮ್ಮ ಕಾಯಕಕ್ಕಾಗಿ ಬೇರೆ ಬೇರೆ ಕಡೆಗೆ ಸಂಚರಿಸುವುದರಿಂದ ಭೇಟಿಯಾದ ಸಹೋದ್ಯೋಗಿಗಳು, ಗಿರಾಕಿಗಳು, ಬಂಧು ಮಿತ್ರರಿಂದ ಸಂಗ್ರಹಿಸಬಹುದು. 7 ನೆಯ ಶರಣ ಮೇಳದ ಕರಪತ್ರ ಮುದ್ರಿಸಿ ಕೊಡಲಾಗುವುದು.
3. ರಾಷ್ಟ್ರೀಯ ಬಸವ ದಳಗಳ ವಿವಿಧ ಶಾಖೆಗಳ ಮೂಲಕವೂ ಈ ರೀತಿ ಶರಣ ಬಂಧುಗಳು ಸಂಗ್ರಹಿಸಿದ ಹಣ ಕೊಡಬಹುದು. ರಾಷ್ಟ್ರೀಯ ಬಸವ ದಳ ಇಲ್ಲದಲ್ಲಿ ಮತ್ತು ಕಾರಣಾಂತರದಿಂದ ನೇರವಾಗಿ ಕೊಡುವ ಇಷ್ಟವಿದ್ದಲ್ಲಿ ಹಾಗೆಯೂ ಮಾಡಬಹುದು.
4. ಸ್ವಯಂ ಪ್ರೇರಣೆಯಿಂದ ಈ ಸೇವಾಕಾರ್ಯದಲ್ಲಿ ತೊಡಗಿರುವ ಕಾರಣ, ಬಹುಪಾಲು ಎಲ್ಲರೂ ಪ್ರಾಮಾಣಿಕರೇ ಇರುತ್ತಾರೆ. ಅಕಸ್ಮಾತ್ ಮಾವಿನಕಾಯಿಯ ಬುಟ್ಟಿಯಲ್ಲಿ ಒಂದು ಎಕ್ಕಿಯಕಾಯಿ ಸೇರಿಕೊಂಡಂತೆ ಯಾರಾದರೂ ಅಪ್ರಾಮಾಣಿಕರೆಂದು ತಿಳಿದು ಬಂದರೆ ಅನಿವಾರ್ಯವಾಗಿ ಅವರ ಹೆಸರನ್ನು ತೆಗೆದು ಹಾಕಲಾಗುವ ಸ್ವಾತಂತ್ರ್ಯ ಇರಿಸಿಕೊಳ್ಳುವುದು ಸೂಕ್ತವೆಂದು ಶರಣ ಮೇಳ ಉತ್ಸವ ಸಮಿತಿಯು ಭಾವಿಸುತ್ತದೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ|| ಹುನಗುಂದ, ಜಿಲ್ಲೆ-ಬಿಜಾಪುರ.

ಓದುಗರ ಗಮನಕ್ಕೆ

ಆದಿ ಪ್ರಮಥ ಪುಂಗವರಲ್ಲಿ ಪ್ರಮುಖರಾದ ಚನ್ನಬಸವಣ್ಣ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ನೀಲಾಂಬಿಕೆ, ಕಲ್ಯಾಣಮ್ಮ ಮುಂತಾದ ಮಹಾನುಭಾವರು ಕಾಲಜ್ಞಾನ ವಚನಗಳನ್ನು ಬರೆದಿಟ್ಟಿದ್ದು ನಮಗೆ ಒಂದು ಪ್ರತಿ ಲಭ್ಯವಾಗಿದೆ. ಇದು ಶ್ರೀ ಶಿವರುದ್ರಸ್ವಾಮಿಗಳು ಸಾಲಿಮಠ ಎಂಬುವವರು ಸಂಗ್ರಹಿಸಲ್ಪಟ್ಟದ್ದು, ಹುಬ್ಬಳ್ಳಿಯ ಕೊಪ್ಪೀಕರ ರಸ್ತೆಯಲ್ಲಿರುವ ಭಾರತ ಬುಕ್ ಡಿಪೋದವರು ಪ್ರಕಾಶಿಸಿದ್ದು ಸರ್ವಪುರಾತನರ ಕಾಲಜ್ಞಾನ ಎಂಬುದೇ ಇದರ ಶೀರ್ಷಿಕೆಯಾಗಿದೆ. ಈ ಪುಸ್ತಕದ ಹೆಚ್ಚಿನ ಪ್ರತಿಗಳು ಯಾರ ಬಳಿಯಲ್ಲಾದರೂ ಇದ್ದರೆ ಮತ್ತು ಇನ್ನಿತರರು ಪ್ರಕಟಿಸಿದ ಕಾಲಜ್ಞಾನ ವಚನಗಳು ಇದ್ದರೆ ಅವನ್ನು ನಮಗೆ ಕಳಿಸಿಕೊಟ್ಟರೆ ಬಹಳ ಉಪಕಾರವಾಗುವುದು. ಏಕೆಂದರೆ ಅವುಗಳಲ್ಲಿ ಅನೇಕ ಐತಿಹಾಸಿಕ ಅಂಶಗಳು ಅಡಕವಾಗಿರುತ್ತವೆ. ಕೆಲವರ ಮನೆಗಳಲ್ಲಿ ಹಿರಿಯರು ಸಂಗ್ರಹಿಸಿದ ಗ್ರಂಥ ಭಂಡಾರಗಳಲ್ಲಿ ಸಿಗುವ ಸಾಧ್ಯತೆ ಇರುತ್ತದೆ.

ಲಿಂ|| ಶರಣ. ಫ. ಗು. ಹಳಕಟ್ಟಿಯವರು ಸಂಪಾದಿಸಿದ "ವಚನ ಶಾಸ್ತ್ರಸಾರ" ಎಂಬ ಕೃತಿಗಳು ಬೇಕಾಗಿವೆ. ಅದರ ಪುನರ್ ಮುದ್ರಿತ ಆವೃತ್ತಿ ಇದೆಯಾದರೂ ಲಿಂ|| ಹಳಕಟ್ಟಿಯವರು ಪ್ರಕಟಿಸಿದ್ದು ಪರಿಶೀಲನೆಗೆ ಬೇಕಾಗಿದೆ. ಬೆಂಗಳೂರು ವಿಳಾಸಕ್ಕೆ ಕಳಿಸಿಕೊಡಿರಿ.

—ಸೋದರಿ ನೀಲಾಂಬಿಕೆ
ಬಸವ ಮಂಟಪ, 2035, 2 ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ತ್ಯಾಗ ಜೀವಿಗಳಿಗಾಗಿ ಭದ್ರತಾ ಠೇವಣಿ

ಅನೇಕ ಜನ ಸಾಧಕ-ಸಾಧಕಿಯರು ಪೂರ್ಣಾವಧಿ ಕಾರ್ಯಕರ್ತರಾಗಿ ವಿಶ್ವ ಕಲ್ಯಾಣ ಮಿಷನ್-ಬಸವ ಧರ್ಮ ಪೀಠಕ್ಕೆ ದುಡಿಯುತ್ತಿದ್ದಾರೆ. ಸಂಪೂರ್ಣವಾಗಿ ಬಸವ ತತ್ತ್ವ ಪ್ರಚಾರಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ. ಯಾವುದೇ ವೇತನ ಪಡೆಯುತ್ತಿಲ್ಲ. ಅನೇಕ ಸದ್ಭಕ್ತರ ಸೂಚನೆ ಮೇರೆಗೆ ಮತ್ತು ಟ್ರಸ್ಟ್ ಸದಸ್ಯರ ಅಪೇಕ್ಷೆಯಂತೆ ಇಂಥವರ ಹೆಸರಿನಲ್ಲಿ ಭದ್ರತಾ ಠೇವಣಿಯೊಂದನ್ನು ಇಡುವ ಯೋಜನೆ ಆರಂಭಿಸಲಾಗಿದೆ. ಸಂಸ್ಥೆಯನ್ನು ಪ್ರವೇಶಿಸಿದ ಸಮಯ, ಅವರ ಮನೋವೃತ್ತಿ ಮುಂತಾದುವನ್ನು ಪರಿಗಣಿಸಿ ಇದೇ ಜನವರಿಯಲ್ಲಿ ಪ್ರಥಮ ಬ್ಯಾಚ್ ಆರಂಭಿಸಲಾಗಿದೆ. ಪ್ರತಿ ತಿಂಗಳು ಅವರ ಹೆಸರಿನಲ್ಲಿ 100 ರೂ ಗಳ ಆರ್. ಡಿ. ಕಟ್ಟುವುದು. 5 ವರ್ಷದ ಬಳಿಕ ಆ ಮೊತ್ತವನ್ನು ಎಫ್. ಡಿ ಮಾಡುವುದು. ತಿಂಗಳಿಗೆ 100 ರೂ ದಂತೆ ಮತ್ತೊಂದು ಆರ್. ಡಿ ಪ್ರಾರಂಭಿಸುವುದು.

ಅವರು ಯಾರೂ ಬೇಡಿಕೆ ಸಲ್ಲಿಸಿರದಿದ್ದರೂ ಸಂಸ್ಥೆಯೇ ಈ ಯೋಜನೆ ಪ್ರಾರಂಭಿಸಿದೆ. ಅವರು ಜೀವಮಾನ ಪೂರ್ತಿ ಸಂಸ್ಥೆಯಲ್ಲೇ ಇದ್ದು ತಮ್ಮ ನಂತರ ಆ ಹಣವನ್ನು ಮಾತೃ ಸಂಸ್ಥೆಗೆ ಕೊಡಬಹುದು, ಅಕಸ್ಮಾತ್ ಭಿನ್ನಾಭಿಪ್ರಾಯ ಬಂದು ಹೊರಹೋದರೆ ಅಲ್ಲಿಯವರೆಗೆ ಜಮಾ ಆದ ಹಣವನ್ನು ಅವರು ತೆಗೆದುಕೊಂಡೂ ಹೋಗಬಹುದು.

ಪ್ರತಿ ಜನವರಿಯಲ್ಲಿ ಈ ರೀತಿ ಸೇವಾಕಾಂಕ್ಷಿಗಳ ಹೆಸರಿನಲ್ಲಿ ಭದ್ರತಾ ಠೇವಣಿ ಇಡಲಾಗುವುದು.

—ಸದ್ಗುರು ಮಾತೆ ಗಂಗಾದೇವಿ, ಕೋಶಾಧ್ಯಕ್ಷೆ

ಕಾರ್ಯಕರ್ತರಿಗೆ ಸ್ಫೂರ್ತಿಗೀತೆ

ಬಸವ ದಳದ ಸೋದರ
ಪರಿಸ್ಥಿತಿ ದುರ್ಧರ
ಆಗು ನೀ ಎಚ್ಚರ
ಕಟ್ಟು ರಾಷ್ಟ್ರ ಬಂಧುರ ॥೧॥

ದಿಟ್ಟ ಹೆಜ್ಜೆ ಇಡುವಲ್ಲಿ
ತತ್ತ್ವ ನಿಷ್ಠೆ ಬಾಳಿನಲ್ಲಿ
ಹಿಮ್ಮೆಟ್ಟದೆ ನಡೆವಲ್ಲಿ
ಸಾಟಿ ಯಾರು ನಿನಗಲ್ಲಿ ? ॥೨॥

ಕೈಗೆ ಕೈ ಕೂಡಿಸಿರಿ
ಭಾವ ಒಂದಾಗಿಸಿರಿ
ಬಾಳು ಧ್ಯೇಯಕರ್ಪಿಸಿ
ಬದುಕ ಸಾರ್ಥಕಾಗಿಸಿ ॥೩॥

ಬಸವ ದಳದ ಕುಡಿಗಳೇ
ಬೆಳೆಯುತಿರುವ ಚೇತನರೇ
ಮಿನುಗುತಿರುವ ಸೊಡರುಗಳೇ
ಬೆಳಗಿರಿ ಬಸವ ಜ್ಯೋತಿಯ ॥೪॥

ಉಸಿರು ಉಳಿಮೆ ತತ್ತ್ವಕಾಗಿ
ನಿನ್ನ ಬದುಕು ತ್ಯಾಗದೀಪ್ತಿ
ಪೂರ್ಣಸೇವೆ ದೇಶಕಾಗಿ
ಹೊರಡು ನೀ ಸಿದ್ಧನಾಗಿ ॥೫॥

ದುಷ್ಟತನವ ತೊಲಗಿಸಿ
ಶಿಷ್ಟತನವ ಬೆಳೆಸಿರಿ
ಬಸವ ನಾಮವ ಜಪಿಸುತ
ಕಲ್ಯಾಣ ರಾಜ್ಯವ ಸ್ಥಾಪಿಸಿ ॥೬॥

—ರಚನೆ : ಶರಣೆ. ಅನ್ನಪೂರ್ಣ, ಬೀದರ
ಹಾಡಿದವರು : ಶರಣೆ. ಗಂಗಾಂಬಿಕೆ, ಬೀದರ

ರಾಷ್ಟ್ರೀಯ ಬಸವ ದಳಗಳವರಿಂದ ಪಥ ಸಂಚಲನ ಮತ್ತು ಶರಣಾರ್ಥಿ

ವಿವಿಧ ರಾಷ್ಟ್ರೀಯ ಬಸವ ದಳಗಳವರು ಭಜನೆ, ವಚನ ಪಠಣ, ಘೋಷಣೆಗಳೊಡನೆ ಮಾಡಿದ ಪಥ ಸಂಚಲನ ಮತ್ತು ಶರಣಾರ್ಥಿ(ಗುರುವಂದನ) ಕಾರ್ಯಕ್ರಮ ಬಹಳ ಹೃದಯಸ್ಪರ್ಶಿಯೂ, ಸ್ಫೂರ್ತಿದಾಯಕವೂ. ಶಿಸ್ತಿನದು ಆಗಿ ನೋಡುವವರ ಮೇಲೆ ಬಹಳ ಪರಿಣಾಮ ಬೀರಿತು. ಈ ಪಥ ಸಂಚಲನದ ಆಲೋಚನೆ ಕೇವಲ ಒಂದು ವಾರದ ಹಿಂದೆ ಮೂಡಿದ್ದರಿಂದ ಎಲ್ಲ ರಾಷ್ಟ್ರೀಯ ಬಸವ ದಳದವರಿಗೆ ಸೂಚನೆ ಕೊಡಲು ಆಗಲಿಲ್ಲ. ಮುಂದಿನ ಶರಣ ಮೇಳಕ್ಕೆ ಪೂರ್ವಭಾವಿ ಸಿದ್ಧತೆಯೊಡನೆ ಶರಣ ಬಂಧುಗಳು ಬರಬೇಕು.

1. 2 ಅಡಿ × 3 ಅಡಿ ಅಳತೆಯ ಷಟ್ಕೋನ ಬಸವ ಧ್ವಜವನ್ನು ನೀಳವಾದ ಕೋಲಿಗೆ ಹಾಕಿಕೊಳ್ಳಬೇಕು. ಧ್ವಜಗಳು ಮಾರಾಟಕ್ಕೆ ಲಭ್ಯವಿರುತ್ತವೆ.
2. ಆಯಾ ರಾಷ್ಟ್ರೀಯ ಬಸವ ದಳಗಳ ಹೆಸರನ್ನು ಕಲಾತ್ಮಕವಾಗಿ ಹಾರ್ಡ್‌ಬೋರ್ಡ್ ಮೇಲೆ ಬರೆಸಿಕೊಂಡು ಬರಬೇಕು.
3. ಆಯಾ ಬಸವ ದಳಗಳ ಶರಣ-ಶರಣೆಯರು ತಮ್ಮ ಗುಂಪಿನ ನಾಯಕರ ಹಿಂದೆ, ಒಂದೇ ಕಡೆ ಇರಬೇಕು.
4. ಬಿಳಿಯ ವಸ್ತ್ರವನ್ನುಟ್ಟು ಮೇಲೆ ಕಾವಿಯ ಸ್ಕಾರ್ಫ್ ಹೊದ್ದಿರಬೇಕು.

ಅಕ್ಟೋಬರ್ ಶಿಬಿರದಲ್ಲಿ ವಿವರಗಳನ್ನು ನೀಡಲಾಗುವುದು.

ಶರಣ ಬಂಧುಗಳೇ,

ಉತ್ತಮ ನಡತೆ, ಉದಾತ್ತ ಸಂಸ್ಕಾರ ನೀಡಲು ರಾಷ್ಟ್ರೀಯ ಬಸವ ದಳಗಳನ್ನು ನಿಮ್ಮ ಊರುಗಳಲ್ಲಿ ರಚಿಸಿರಿ. ವಾರಕ್ಕೊಮ್ಮೆ ಪ್ರಾರ್ಥನೆ ಮಾಡಿರಿ. ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲರನ್ನು ಆದರಿಸಿರಿ. ಪ್ರಾರ್ಥನೆಯಲ್ಲಿ ಭಾಗವಹಿಸಲು ಪ್ರೇರಣೆ ನೀಡಿರಿ. ನಿಮ್ಮ ಸಂಸ್ಥೆಯ ಹೆಸರನ್ನು ಕೇಂದ್ರ ಸಂಸ್ಥೆಯ ಜೊತೆಗೆ ನೋಂದಾಯಿಸಿರಿ.

... **ಸಂಸ್ಕರಣಗೊಂಡ ಬುದ್ಧಿ, ಸುಸಂಸ್ಕೃತ ಹೃದಯ ನಿಮ್ಮದಾಗಲಿ** ...

ಪಥ ಸಂಚಲನದಲ್ಲಿ ಮೊಳಗಿದ ಘೋಷಣೆಗಳು

ಭಾರತ ದೇಶ – ಜೈ ಬಸವೇಶ
ಬಸವ ದಳದ ವ್ಯಕ್ತಿ – ದೇಶಕ್ಕೊಂದು ಶಕ್ತಿ
ಬಸವ ದಳದ ವೀರ – ಹಿಮ್ಮೆಟ್ಟದ ಧೀರ
ಬಸವ ದಳದ ಶರಣ – ದೇಶದ ಆಶಾಕಿರಣ
ಕಟ್ಟುವೆವು ನಾವ್ ಕಟ್ಟುವೆವು
ಕಲ್ಯಾಣ ರಾಜ್ಯವ ಕಟ್ಟುವೆವು.

—ರಚನೆ : ಶರಣ. ಬಸವ ಕುಮಾರ್ ಪಾಟೀಲ, ಬೀದರ.

ಕೂಡಲ ಸಂಗಮ ದೇವಾಲಯ ಆಡಳಿತ

ಶರಣ ಮೇಳದ ಸಮಾರೋಪ ಸಮಾರಂಭ ದಿ. 15-1-1993 ರಂದು ನಿರ್ಣಯಗಳ ಮಂಡನೆ ನಡೆಯುತ್ತಿತ್ತು. ನಾನು ಮೊದಲೇ ಕಲ್ಯಾಣ ಕಿರಣದಲ್ಲಿಯೂ ಪ್ರಕಟಣೆ ಕೊಟ್ಟಿದ್ದೆ. ದಿ. 15 ರಂದು ಚರ್ಚೆಗೆ ಅವಕಾಶವಿರದು. ಚರ್ಚೆ ಮಾಡ- ಬೇಕು ಎನ್ನುವವರು ದಿ. 12-1-1993 ರಂದು ಬಂದು ಚಿಂತನಗೋಷ್ಠಿಯಲ್ಲಿ ವಿಷಯ ಮಂಡಿಸಬೇಕು. ಅಂದು ಬಸವ ಧರ್ಮ ಸಂಸತ್ ಸಭೆಯಲ್ಲಿ ಚರ್ಚಿಸಿ, ನಿರ್ಣಯಿಸಿದ ವಿಷಯಗಳನ್ನು ಮಾತ್ರ ದಿ. 15-1-93 ರಂದು ಸಮಾರೋಪ ಸಮಾರಂಭದಲ್ಲಿ ಬಹಿರಂಗಪಡಿಸಬೇಕು ಎಂದು.

ಆದರೆ, ಅನಿರೀಕ್ಷಿತವಾಗಿ ಶರಣ. ಡಿ. ಎಸ್. ವಿಜಯಕುಮಾರ್ ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು ನಂತರ ಒಬ್ಬರ ಹಿಂದೆ ಮತ್ತೊಬ್ಬರು ಈ ಬಗ್ಗೆ ಚರ್ಚಿಸತೊಡಗಿದರು. ವಿಷಯ ಸಂಗಮೇಶ್ವರ ದೇವಾಲಯ ಆಡಳಿತಕ್ಕೆ ಸಂಬಂಧ ಪಟ್ಟುದಾಗಿತ್ತು. ಸಭಿಕರ ಸಂದೇಹಗಳು, ಆಕ್ಷೇಪಗಳು ಹೀಗೆ ವ್ಯಕ್ತವಾದವು.

ಕೂಡಲ ಸಂಗಮದಲ್ಲಿರುವ ಐತಿಹಾಸಿಕ ಮಹತ್ವದ ಶ್ರದ್ಧಾಕೇಂದ್ರಗಳು ಎರಡು ಶ್ರೀಸಂಗಮೇಶ್ವರ ದೇವಾಲಯ ಮತ್ತು ಶ್ರೀ ಬಸವೇಶ್ವರ ಐಕ್ಯ ಮಂಟಪ.

ಮೊದಲು ಶ್ರೀ ಬಸವೇಶ್ವರ ಐಕ್ಯಮಂಟಪ ಬಯಲಲ್ಲಿ ಇತ್ತು. ಯಾರು ಬೇಕಾ ದರೂ ಪೂಜಿಸಿ, ದರ್ಶಿಸಿ ಬರಬಹುದಿತ್ತು. ಅದು ಮುಳುಗಡೆ ಪ್ರದೇಶದಲ್ಲಿ ಇದ್ದು ದರಿಂದ ಸರ್ಕಾರ ಸಿಮೆಂಟ್ ಕೊಳವೆ ಕಟ್ಟಿಸಿ, ಆ ಐಕ್ಯ ಮಂಟಪವನ್ನು ಸಂರಕ್ಷಿಸಿತು. ಶರಣ ಮೇಳ ಆರಂಭವಾಗಿ ಬಸವ ತತ್ತ್ವಾನುಯಾಯಿಗಳು ಅಧಿಕ ಸಂಖ್ಯೆಯಲ್ಲಿ ಬರ ತೊಡಗುತ್ತಲೇ ಗುಡಿಯ ಆಡಳಿತದವರಿಗೆ ಆಸೆ ಹುಟ್ಟಿ 50 ಪೈಸೆಯ ಪ್ರವೇಶ ಟಿಕೆಟ್ಟು ಇಟ್ಟರು.

1. ಸಂಗಮೇಶ್ವರ ಗುಡಿಗೆ ಇಲ್ಲದ ಟಿಕೆಟ್ಟು ಬಸವೇಶ್ವರ ಐಕ್ಯಮಂಟಪಕ್ಕೆ ಏಕೆ ?
2. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಯು. ಕೆ. ಪಿ. ಯವರು ಕೊಳವೆ ಕಟ್ಟಿಸಿದ್ದಾರೆ. ಇದಕ್ಕಾಗಿ ಏನೇನೂ ಖರ್ಚು ಮಾಡದ ಗುಡಿ ಕಮಿಟಿ ಟಿಕೆಟ್ಟು ಇಟ್ಟು ಹಣ ಸಂಗ್ರಹಿಸುವುದು ಸೂಕ್ತವೆ ? ಈ ಸಂಗ್ರಹಣೆಗೆ ಯಾರಿಂದ ಅನುಮತಿ ಪಡೆದಿದ್ದಾರೆ ?
3. ಶರಣ ಮೇಳ ಆರಂಭವಾದ ಮೇಲೆ ಬಸವ ಭಕ್ತರು ಶ್ರೀ ಸಮಾಧಿಯ ದರ್ಶನಕ್ಕೆ ಬರುವುದು ಹೆಚ್ಚಾಗಿ ಆದಾಯ ಅಧಿಕವಾಯಿತು. ಹೀಗೆ ಅಧಿಕ ವಾಗಿ ಹಣ ಸಂಗ್ರಹವಾಗತೊಡಗಿದರೂ ಯಾವುದೇ ಅಭಿವೃದ್ಧಿ ಕಾರ್ಯ ವನ್ನು ಕೈಗೆತ್ತಿಗೊಳ್ಳುತ್ತಲಿಲ್ಲ. ಯು. ಕೆ. ಪಿ, ಯವರ ಮೇಲೆ ನಿರ್ಮಾಣ ಕಾರ್ಯದ ನೆಪ ಹಾಕಿ ಬಂದ ಆದಾಯವನ್ನು ಹಂಚಿಕೊಳ್ಳುತ್ತಿದ್ದಾರೆ, ಮನೆ- ತನದ ಆಸ್ತಿಯನ್ನು ಅಣ್ಣತಮ್ಮಂದಿರು ಹಂಚಿಕೊಂಡಂತೆ.
4. ಶರಣ ಮೇಳದ ಸಮಯದ 5–6 ದಿವಸಗಳ ಅವಧಿಯಲ್ಲಿ ಐಕ್ಯ ಮಂಟಪದ ಧನ ಸಂಗ್ರಹಣೆಗಾಗಿ ಹರಾಜು ಹಾಕುವರಂತೆ. ಪೂಜಾರಿಗಳಲ್ಲಿ ಒಬ್ಬರು ಹರಾಜಿ ನಲ್ಲಿ ಐಕ್ಯ ಮಂಟಪವನ್ನು 'ಕೊಂಡುಕೊಳ್ಳುತ್ತಾರಂತೆ.' ಇದು ನಿಜವೇ ? ಬಸವಣ್ಣ ನವರ ಪವಿತ್ರ ಸಮಾಧಿ ಹರಾಜಿನ ವಸ್ತುವಾಗಬೇಕೆ ?
5. ಈ ವರ್ಷ ಇನ್ನೊಂದು ಹೊಸ ತಂತ್ರ ಆರಂಭಿಸಿದ್ದಾರಂತೆ. ಬಸವೇಶ್ವರರ ದಿವ್ಯ ಸಮಾಧಿಯ ಮೇಲಿರುವ ಲಿಂಗವನ್ನು ಸ್ಪರ್ಶಿಸಲು 5 ರೂ. ಕೊಡಬೇಕು ಎಂದು ನಿಯಮ ಮಾಡಿ, ಭಾವುಕ ಭಕ್ತರಿಂದ ಒಂದು ಸಲ ಮುಟ್ಟಿ ನಮಸ್ಕರಿಸಲು 5 ರೂ ವಸೂಲಿ ಮಾಡಿದ್ದಾರಂತೆ.
6. ದೇವಾಲಯ–ಐಕ್ಯ ಮಂಟಪಗಳ ನಿರ್ವಹಣೆ ಆನುವಂಶಿಕ ಮತ್ತು ಕೌಟುಂಬಿಕ ಟ್ರಸ್ಟ್ ವಶದಲ್ಲಿರುವುದರಿಂದ ಎಷ್ಟೇ ಆದಾಯ ಬಂದರೂ ಹೊಲದ ಉತ್ಪನ್ನ ವನ್ನು ಅವಿಭಕ್ತ ಕುಟುಂಬದ ಸದಸ್ಯರು ಹಂಚಿಕೊಳ್ಳುವಂತೆ ಅಣ್ಣ ತಮ್ಮಂದಿರು ಹಂಚಿಕೊಂಡರೆ ದೇವಾಲಯ ವೃದ್ಧಿಯಾಗುವುದೆಂದು ?
7. ದೇವಾಲಯ ಪುನರ್ನಿರ್ಮಾಣ ಯು. ಕೆ. ಪಿ. ಯವರದು ಇರಬಹುದು. ಬಂದ ಭಕ್ತರಿಗೆ ಕನಿಷ್ಟ ಅನುಕೂಲತೆ ಒದಗಿಸುವುದು ಗುಡಿಯವರದಲ್ಲವೆ ? ಬೇಸಿಗೆ ಯಲ್ಲಿ ನದಿ ಬತ್ತಿ ಮಲಿನವಾದಾಗ ಕುಡಿಯುವ ಶುದ್ಧ ನೀರಿನ ವ್ಯವಸ್ಥೆ ಮಾಡಲು ಬರದೆ ?
8. ಬಂದ ಭಕ್ತರ ಕೈಯಲ್ಲಿ ಕುಂಕುಮ, ಕಲ್ಲುಸಕ್ಕರೆ ಪೊಟ್ಟಣ ಇಟ್ಟುಬಿಟ್ಟು, ಅವರು ಅದನ್ನು ಉಚಿತ ಪ್ರಸಾದ ಎಂದು ತಗೊಳ್ಳುವಾಗ ಅದಕ್ಕೆ 5 ರೂ ಕೊಡಿರಿ ಎಂದು ಪೂಜಾರಿಗಳು ಕಾಡಿಸುವರು ; ಇಲ್ಲವೇ ಪ್ರಸಾದ ವಾಪಸ್ಸು ಕೊಡಿ ಎಂದು ಕೋಪಗೊಳ್ಳುವರು. ವಾಪಸ್ಸು ಕೊಡಲು ಭಯ; ಹಣವಿಲ್ಲದವರಿಗೆ ಕೊಡಲು ತೊಂದರೆ. ಈ ರೀತಿ ಮೋಸಗಾರಿಕೆಯ ತಂತ್ರ ಯೋಗ್ಯವೆ ?
9. ಬಂದ ಭಕ್ತರನ್ನು ಪೂಜಾರಿಗಳು ದೀಪಕ್ಕೆ ಎಣ್ಣೆ ಕೊಡಿಸಿರಿ ಎಂದು ಪೀಡಿಸುವರು. ಇಲ್ಲವೇ ಎಣ್ಣೆ ಕೊಳ್ಳಲು ಹಣ ಕೊಡಿರಿ ಎಂದು ಒತ್ತಾಯಿಸುವರು. ದೀಪಕ್ಕೆ ಎಣ್ಣೆ ಒದಗಿಸುವುದು ದೇವಾಲಯ ಕಮಿಟಿಯವರದಲ್ಲವೇ ? ಭಕ್ತರು ಎಣ್ಣೆ ಗಾಗಿ ಕೊಟ್ಟ ಹಣ ಅಂದಿನ ಪೂಜಾರಿಯ ಕಿಸೆ ಸೇರುವುದು. ಎಣ್ಣೆ ಕೊಟ್ಟರೆ ಆ ಎಣ್ಣೆಯನ್ನೂ ಬಗ್ಗಿಸಿಕೊಂಡು ಮನೆಗೆ ಒಯ್ಯುವದನ್ನು ಪ್ರತ್ಯಕ್ಷವಾಗಿ ನೋಡಿದ್ದೇವೆ.
10. "ಪೂಜಾರಿಗಳಲ್ಲಿ ಕೆಲವರಂತೂ ವಿಪರೀತ ಕುಡುಕರಿದ್ದು ಬೆಳಿಗ್ಗೆ 7–8 ಗಂಟೆಯ ಸಮಯದಲ್ಲಿ ಸಹ ಕುಡಿದು ಬಂದಿರುತ್ತಾರೆ. ಇದು ಯಾರಿಗೆ ಶೋಭಾಯ– ಮಾನ ? ಅನ್ಯ ಧರ್ಮೀಯರ ಕ್ಷೇತ್ರಗಳಿಗೆ ಹೋದರೆ ಎಂತಹ ಶಿಸ್ತು, ಸ್ವಚ್ಛತೆ; ನಮಗೆ ನಾಚಿ ತಲೆ ತಗ್ಗಿಸುವಂತಾಗುತ್ತದೆ." ಎಂದು ಮತ್ತೊಬ್ಬರು ಅಂದರು.

ಹೀಗೆ ಒಬ್ಬರಾದ ಮೇಲೆ ಒಬ್ಬರು ಆರೋಪಗಳನ್ನು ಮಾಡತೊಡಗಿದರು.

ನಾನು ಹೇಳಿದೆ, "ನಮ್ಮ ಟ್ರಸ್ಟಿಗೂ ಅದಕ್ಕೂ ಸಂಬಂಧವಿಲ್ಲ, ಅವರದು ಪ್ರತ್ಯೇಕ ಟ್ರಸ್ಟ್. ನಾವು ಏನೇ ಆಡಿದರೂ ಅದು ಅನ್ಯರ ವಿಷಯದಲ್ಲಿ ಹಸ್ತಕ್ಷೇಪವಾಗುತ್ತದೆ. ನಾವು ದ್ವೇಷಿಸುತ್ತೇವೆ ಎಂದು ಅವರು ಪ್ರಚಾರ ಮಾಡುತ್ತಾರೆ. ಆದ್ದರಿಂದ ನಮ್ಮ ಟ್ರಸ್ಟಿನ ಬಗ್ಗೆ-ಆಡಳಿತದ ಬಗ್ಗೆ ಹೇಳುವುದಿದ್ದರೆ, ಕೇಳುವುದಿದ್ದರೆ ಕೇಳಿರಿ. ಅವರ ಬಗ್ಗೆ ನಾನು ಏನು ಹೇಳಲಿ ? ಮತ್ತು ಈ ವೇದಿಕೆ ಮೇಲೆ ಅವರ ವಿಷಯ ಚರ್ಚಿಸುವುದು ಸೂಕ್ತವಲ್ಲ. ಟ್ರಸ್ಟ್ ಕಮಿಟಿ ಚೇರ್ಮನ್ನರ ಬಳಿ ಹೋಗಿ ಕೇಳಿರಿ" ಎಂದು ಹೇಳಿದೆ.

ಸಭಿಕರಲ್ಲಿ ಒಬ್ಬರು ಹೇಳಿದರು, "ಹಾಗಾದರೆ ಸಂಗಮೇಶ್ವರ ದೇವಾಲಯ ಐಕ್ಯಮಂಟಪದ ರಕ್ಷಣೆ ನಿಮಗೆ ಸಂಬಂಧವಿಲ್ಲವೆ ? ಅದು ನಮಗೆ ನಿಮಗೆ ಇಡೀ ಸಮಾಜಕ್ಕೆ ಸಂಬಂಧಿಸಿದ್ದು ಅಲ್ಲವೆ ? "

"ನಾವು ಸುಮ್ಮನಿದ್ದರೆ ಹೀಗನ್ನುವಿರಿ. ದೇವಾಲಯದ ಟ್ರಸ್ಟದವರಿಗೆ ಸಲಹೆ ಕೊಡಹೋದರೆ ನಾವು ಅವರನ್ನು ದ್ವೇಷಿಸುತ್ತೇವೆ ಎಂದು ಅಪಪ್ರಚಾರ ಮಾಡುವರು, " ಎಂದು ಹೇಳಿದೆ.

"ಇಡೀ ಸಮಾಜದ ಮಹತ್ವದ ಕ್ಷೇತ್ರವಿದು. ಇದರ ರಕ್ಷಣೆ-ಅಭಿವೃದ್ಧಿ ಬಹು ಮುಖ್ಯ. ಆನುವಂಶಿಕ-ಕೌಟುಂಬಿಕ ಟ್ರಸ್ಟ್ ಇದ್ದರೆ ಇದು ಎಂದೂ ಬೆಳವಣಿಗೆಯಾಗದು. ಆದ್ದರಿಂದ ಇದು ಸಾರ್ವಜನಿಕ ಟ್ರಸ್ಟ್ ಆಗಬೇಕು. ಸರ್ಕಾರದ ಆಡಳಿತಾಧಿಕಾರಿಯಿರಬೇಕು. ಆದಾಯವು ದೇವಾಲಯದ ಬೆಳವಣಿಗೆಗೆ ಉಪಯೋಗವಾಗಬೇಕು. ಮಲೆ ಮಹದೇಶ್ವರ ಟ್ರಸ್ಟ್, ಎಡೆಯೂರು ದೇವಾಲಯ ಟ್ರಸ್ಟದ ಆಡಳಿತದಂತೆ ಇಲ್ಲಿಯೂ ಜಾರಿಗೆ ಬರಬೇಕು. "

ಈ ಹಂತದಲ್ಲಿ ಶ್ರೀದಯಾನಂದ ಸ್ವಾಮಿಗಳು ಮೈಕ್ ಮುಂದೆ ಬಂದು ಹೇಳಿದರು," ಈ ರೀತಿ ಆಗಬೇಕೆಂದು ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ವರದಿ ಹೇಳಿದೆ. ಸರ್ಕಾರವು ಒಪ್ಪಿಕೊಂಡಿದೆ. ಆದರೆ ವರದಿ ಆಗಿ 4 ವರ್ಷಗಳಾದರೂ ಜಾರಿಗೆ ಬಂದಿಲ್ಲ."

"ಒಳ್ಳೆಯದು, ಸಭೆಯಲ್ಲಿ ಅದೇ ರೀತಿ ನಿರ್ಣಯ ಕೈಗೊಳ್ಳಿರಿ. ಸರ್ಕಾರಕ್ಕೆ ನಿರ್ಣಯದ ಪ್ರತಿ ಕಳಿಸೋಣ," ಎಂದೆ. ಆಗ ಶ್ರೀ ದಯಾನಂದ ಸ್ವಾಮಿಗಳು ಗರ್ಜಿಸಿದರು, "ಇಂಥಾ ನಿರ್ಣಯಗಳಿಂದ ಏನೂ ಪ್ರಯೋಜನವಿಲ್ಲ. ನಿರ್ಣಯ ಮಾಡುತ್ತೇವೆ, ಹೋಗುತ್ತೇವೆ. ಮುಂದಿನ ವರ್ಷ ಸೇರುತ್ತೇವೆ. ಇಂಥದೇ ನಿರ್ಣಯ ಮಾಡುತ್ತೇವೆ. ಕ್ಷೇತ್ರ ಹೇಗಿತ್ತೋ ಹಾಗೆಯೇ ಇದೆ, ಇರುತ್ತದೆ. "

ಬಹಳ ಜನ ಉತ್ಸಾಹಿ ತರುಣರು ಶ್ರೀದಯಾನಂದ ಸ್ವಾಮಿಗಳ ವಿಚಾರ ಒಕ್ಕೊರಲಿನಿಂದ ಸ್ವಾಗತಿಸಿ, ಮುಂದಿನ ಕ್ರಮ ಸೂಚಿಸಲು ಹೇಳಿದರು.

"ನಾವು ಗುಡಿಯ ಬಳಿ ಹೋಗಿ ಉಪವಾಸ ಸತ್ಯಾಗ್ರಹ ಮಾಡುತ್ತೇವೆ. ಅವರು ಬಸವೇಶ್ವರ ಐಕ್ಯಮಂಟಪ ಸಂದರ್ಶನಕ್ಕೆ ಪ್ರವೇಶ ಶುಲ್ಕ ತೆಗೆದುಕೊಳ್ಳಬಾರದೆಂದು ಒತ್ತಾಯಿಸುತ್ತೇವೆ." ಎಂದು ಶ್ರೀ ದಯಾನಂದ ಸ್ವಾಮಿಗಳು ಘೋಷಿಸಿದರು. ಆಗ ಅಲ್ಲಿ ಇದ್ದ ಪೋಲಿಸ್ ಅಧಿಕಾರಿಗಳು ನನ್ನ ಬಳಿಗೆ ಬಂದು ಸಲಹೆ ಕೇಳಿದರು.

" ಗುಡಿಯ ಬಳಿ ಹೋಗುವುದು ಬೇಡ. ನಿಮ್ಮ ಬೇಡಿಕೆ ಏನು ಎಂಬುದನ್ನು ಕಾಯಿದೆ ಬದ್ಧವಾಗಿ ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ [ಚಾರಿಟಿ ಕಮೀಷನರ್] ವರಿಗೆ ತಿಳಿಸಿರಿ" ಎಂದು ಇದನ್ನು ದಯಾನಂದ ಸ್ವಾಮಿಗಳಿಗೆ ಹೇಳಿದರೂ ಅವರು ಘೋಷಿಸಿದರು, "ನಾವು ಸಾಂಕೇತಿಕ ಪ್ರತಿಭಟನೆ ಮಾಡುತ್ತೇವೆ, ಅಷ್ಟೇ. ಸಾರ್ವಜನಿಕರ ಮತ್ತು ಸರ್ಕಾರದ ಗಮನ ಸೆಳೆಯುವುದು ನಮ್ಮ ಗುರಿ. ಇಲ್ಲವಾದರೆ ಈ ದೇವಾಲಯ ಎಂದೆಂದೂ ಅಭಿವೃದ್ಧಿಗೊಳ್ಳದು. ಇದು ಸಾರ್ವಜನಿಕ ಟ್ರಸ್ಟ್ ಆಗಬೇಕು" ಎನ್ನುತ್ತ ಹೊರಟರು. ಉತ್ಸಾಹಿ ಶರಣರ ಗುಂಪು ಹಿಂಬಾಲಿಸಿತು. ಪೂಜಾರಿಗಳ ವಿರುದ್ಧ ಸಿಟ್ಟಿಗೆದ್ದ ಕೆಲವು ಅಜ್ಜಿಗಳ ಕೋಪವಂತೂ ಎಲ್ಲರ ಕುತೂಹಲ ಕೆರಳಿಸಿತ್ತು. "ನಮ್ಮ ಗುರುವಿನ ಸಮಾಧಿ ಮುಟ್ಟಿ ನಮಸ್ಕರಿಸಲು 5 ರೂ ಕೇಳಿದ್ರು. ಇದನ್ನು ಹೀಗೆ ಬಿಡಬಾರದು" ಎಂದು ಆವೇಶದಿಂದ ಕಿತ್ತೂರು ಚನ್ನಮ್ಮ ಬ್ರಿಟಿಷರಿಗೆ ಕಪ್ಪಕಾಣಿಕೆ ಕೊಡುವುದಿಲ್ಲವೆಂದು ಪ್ರತಿಭಟಿಸಿದಂತೆ ವೀರಾವೇಶದಿಂದ ಮಾತನಾಡುತ್ತಿದ್ದ ಓರ್ವ ಅಜ್ಜಿಯನ್ನು ಎಲ್ಲರೂ ಸೇರಿ ಸಾಂತ್ವನಗೊಳಿಸಬೇಕಾಯಿತು.

ಶ್ರೀ ದಯಾನಂದ ಸ್ವಾಮಿಗಳ ಈ ತೀವ್ರ ಪ್ರತಿಕ್ರಿಯೆಗೆ ಕಾರಣವೇನಿರಬೇಕು ಎಂದು ನಾವೆಲ್ಲ ಚಕಿತರಾದೆವು. ಪ್ರತಿಭಟನೆ ಸಲ್ಲಿಸಿ ಬಂದ ಬಳಿಕ ಬೆಳಗಿನಿಂದ ಊಟ ಮಾಡದೆ ಇದ್ದ ಅವರು ಸ್ನಾನ ಪೂಜೆ ಪ್ರಸಾದ ಮುಗಿಸಿ ಸ್ವಲ್ಪ ಸಮಾಧ ನ ತಾಳುವಷ್ಟರಲ್ಲಿಯೇ ಡಿ ವೈ ಎಸ್ ಪಿ ಶ್ರೀ ಹಿರೇಮಠ ಅವರು ಬಂದರು. ಅವರು ವಿವರಗಳನ್ನು ಕೇಳಿದಾಗ, ನಿಜ ಕಾರಣ ತಿಳಿಯಿತು. ಹೈದರಾಬಾದಿನಲ್ಲಿ ಅಲ್ ಕಬೀರ್ ಸಂಸ್ಥೆಯ ಯಾಂತ್ರೀಕೃತ ಕಸಾಯಿಖಾನೆಯ ವಿರುದ್ಧ ಹೋರಾಟ ನಡೆಸಿರುವ ಶ್ರೀ ದಯಾನಂದ ಸ್ವಾಮಿಗಳು ಒಂದು ವರ್ಷದ ಬಳಿಕ ದಿಢೀರನೆ ದಿ. 13-1-93 ರಂದು ಕಾಣಿಸಿ ಕೊಂಡಿದ್ದರು. ಅವರು ತಮ್ಮೊಡನೆ ನಮ್ಮ ಕ್ಷೇತ್ರವನ್ನು ತೋರಿಸಲು ರಾಜಸ್ಥಾನಿ ಜೈನ ಶ್ರೀಮಂತರನ್ನು ಹೈದರಾಬಾದಿನಿಂದ ತಮ್ಮ ಕಾರಿನಲ್ಲಿ ಕರೆತಂದಿದ್ದರು. 15 ನೆಯ ತಾರೀಖು ಬೆಳಿಗ್ಗೆ ಸಂಗಮೇಶ್ವರ ದೇವಾಲಯ ಮತ್ತು ಬಸವೇಶ್ವರ ಐಕ್ಯಮಂಟಪ ದರ್ಶಿಸಲು ಅವರನ್ನು ಕರೆದೊಯ್ದಿದ್ದಾರೆ. ಪ್ರವೇಶ ಟಿಕೆಟ್ಟು ಕೊಟ್ಟು ಒಳಹೋದ ಆ ಜೈನ ಶ್ರೀಮಂತರು "ನಮ್ಮಲ್ಲಿ ಕೋಟಿಗಟ್ಟಳೆ ಹಣ ಖರ್ಚು ಮಾಡಿ ಗುಡಿ ಕಟ್ಟಿಸುತ್ತೇವೆ. ಆದರೆ ಪ್ರವೇಶ ಶುಲ್ಕ ಇಡುವುದಿಲ್ಲ. ಇದೇನಿದು, ಸರ್ಕಾರ ಕಟ್ಟಿಸಿದ ಈ ಕಟ್ಟಡಕ್ಕೆ ಇವರು ಹಣ ವಸೂಲಿ ಮಾಡುತ್ತಾರೆ." ಎಂದಿದ್ದಾರೆ. ಇದು ದಯಾನಂದ ಸ್ವಾಮಿಗಳ ಆತ್ಮಾಭಿಮಾನವನ್ನು ಕೆರಳಿಸಿದೆ. ಶುಲ್ಕ ಕೊಟ್ಟು ಒಳಗೆ ಹೋದರೆ ಸರಿಯಾಗಿ ಕಸ ಸಹಿತ ಹೊಡೆದಿರದ ಪರಿಸ್ಥಿತಿ. ಏಕೆ ಈ ಅಸ್ವಚ್ಛತೆ ಎಂದರೆ, ಪೂಜಾರಿ

ಯಿಂದ 'ಬಿಡುವಿಲ್ಲ' ಎಂಬ ದಡ್ಡ ಉತ್ತರ "ಹಣ ಬಾಚಿಕೊಳ್ಳಲು ಬಿಡುವಿದೆ; ಸ್ವಚ್ಛವಾಗಿ ಇಡಲು ಬಿಡುವಿಲ್ಲವೆ ?" ಎಂದು ಅಲ್ಲಿಂದ ಕೋಪಗೊಂಡೇ ದಯಾನಂದ ಸ್ವಾಮಿಗಳು ಬಂದರು.

'ಹೋಗಲಿ ಬಿಡು, ಅವರ (ದೇವಾಲಯದವರ) ವ್ಯವಹಾರದ ವಿಷಯ ನಿನಗೇಕೆ ?' ಎಂದು ಸಮಾಧಾನಪಡಿಸಲಾಗಿತ್ತು. ಸಭಿಕರು ಮೈಕ್ ಮುಂದೆ ಈ ಬಗ್ಗೆ ಅನಿರೀಕ್ಷಿತವಾಗಿ ವಿಷಯ ಪ್ರಸ್ತಾಪಿಸುತ್ತಲೇ, ಅಂತರಂಗದಲ್ಲಿ ಹುದುಗಿದ್ದ ಅಸಹನೆ ಪುಟಿದೆದ್ದಿತು; ಸಾರ್ವಜನಿಕ ಚರ್ಚೆಗೆ ಗ್ರಾಸ ದೊರಕಿತು.

ಶ್ರೀ ದಯಾನಂದ ಸ್ವಾಮಿಗಳೇನೋ ಪತ್ರಿಕಾ ಕರ್ತರ ಗಮನ ಸೆಳೆದರು; ಪೋಲಿಸ್ ಅಧಿಕಾರಿಗಳ ಗಮನವನ್ನು ಸೆಳೆದರು. ಆದರೆ ಇದರಿಂದ ಸರ್ಕಾರ ಕಣ್ಣು ತೆರೆದೀತೆ? ಏನಾದರೂ ಸುಧಾರಣೆಗೆ ಯತ್ನಿಸಬಹುದೆ? ದೇವಾಲಯದ ಟ್ರಸ್ಟ್‌ದವರು ಅನುವಂಶಿಕವೇ ಇರಲಿ- ಈಗಲಾದರೂ ಎಚ್ಚೆತ್ತುಕೊಂಡು ಪ್ರಗತಿಪರ ಯೋಜನೆ ಹಾಕಿಕೊಳ್ಳಬಹುದೆ ?ಧರ್ಮಸ್ಥಳದ ಶ್ರೀವೀರೇಂದ್ರ ಹೆಗ್ಗಡೆ ಅವರದೂ ವಂಶಪಾರಂಪರ್ಯ ಟ್ರಸ್ಟ್. ಆದರೆ ಎಂಥ ವಿಧಾಯಕ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ! ಇನ್ನೊಬ್ಬರ ಬೆಳವಣಿಗೆ ನೋಡಿ ಮತ್ಸರಿಸುವ ಬದಲು ಲಿಂಗವಂತರು ವಿಧಾಯಕ ಕಾರ್ಯಕ್ರಮ ಹಾಕಿಕೊಂಡರೆ ಎಷ್ಟೋ ಮುಂದುವರಿಯಬಹುದು.

ಹಸುವನ್ನು ಪೋಷಿಸಿ ಹಾಲು ಹಿಂಡಿಕೊಳ್ಳುವುದು ಜಾಣರ ಲಕ್ಷಣ; ಕೆಚ್ಚಲು ಕೊಯ್ಯುವುದು ಮೂರ್ಖರ ಲಕ್ಷಣ; ದೇವಾಲಯವನ್ನು ಅಭಿವೃದ್ಧಿ ಪಡಿಸಿ, ಪರಿಸರವನ್ನು ಸುಂದರಗೊಳಿಸಿ, ಪ್ರಗತಿಪರ ಯೋಜನೆ ಹಾಕಿ, ಬಂದ ಭಕ್ತಾದಿಗಳಿಗೆ ಅನುಕೂಲ ಒದಗಿಸಿ, ಆದಾಯವನ್ನು ಅಧಿಕಗೊಳಿಸಿ ಕೀರ್ತಿವಂತರಾಗುವ ಬುದ್ಧಿವಂತಿಕೆಯನ್ನು ಇನ್ನು ಮೇಲಾದರೂ ಟ್ರಸ್ಟ್‌ದವರು ತೋರುವರೇನೋ ಕಾಯ್ದು ನೋಡಬೇಕಾಗಿದೆ.

—ಮಾತಾಜಿ

ಸತ್ತ ಕತ್ತೆಯ ಹೊತ್ತ । ರೆತ್ತಣದ ಹೊಲೆಯನು
ಉತ್ತಮನೆಂದು ಹೆರರೊಡವೆ ಹೊತ್ತರವ ।
ನಿತ್ಯವು ಹೊಲೆಯ ಸರ್ವಜ್ಞ ॥

॥ ಓಂ ಶ್ರೀಗುರುಬಸವಲಿಂಗಾಯ ನಮಃ ॥

ಪೀಠಾರೋಹಣ ವಾರ್ಷಿಕೋತ್ಸವ

ಮಂಗಳವಾರ ದಿನಾಂಕ 12-1-1993

ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿರುವ ಬಸವ ಧರ್ಮದ ಮಹಾ ಜಗದ್ಗುರು ಪೀಠಾಧೀಶ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿ

ಅವರಿಂದ

— ಸಂದೇಶ —

ವಿಶ್ವಗುರು ಬಸವಣ್ಣನವರನ್ನು ಹೃನ್ಮಂದಿರದಲ್ಲಿ ಸ್ಮರಿಸಿ, ಶರಣ ಬಂಧುಗಳಿಗೆಲ್ಲ ಶರಣು ಶರಣಾರ್ಥಿ.

ಇಂದಿಗೆ ಸರಿಯಾಗಿ ಒಂದು ವರ್ಷವಾಯಿತು, ಬಸವ ಧರ್ಮದ ಮಹಾಜಗದ್ಗುರು ಪೀಠವು ಸಂಸ್ಥಾಪನೆಯಾಗಿ. ಅದರ ವಾರ್ಷಿಕೋತ್ಸವವನ್ನು ಇಂದು ಆಚರಿಸಲಾಗುತ್ತಿದೆ. ವಾರ್ಷಿಕೋತ್ಸವದ ಆಚರಣೆಯೆಂದರೆ ಹಿಂದಿನ ವರ್ಷದ ಸಾಧನೆಯ ಆತ್ಮನಿರೀಕ್ಷಣೆ, ಅಂದರೆ ಹಿನ್ನೋಟ ಮುಂದಿನ ವರ್ಷದ ಯೋಜನೆಯ ರೂಪರೇಖೆಯ ರಚನೆ ಅಂದರೆ ಮುನ್ನೋಟ.

ಧರ್ಮಪಿತ ಬಸವಣ್ಣನವರು ಮತ್ತು ಅವರ ಪರಂಪರೆಯ ಶರಣರ ಸತ್ಸಂಕಲ್ಪವೆಂಬಂತೆ ಇದೀಗ ಕಾರ್ಯಗಳು ನಡೆಯುತ್ತಿವೆ. ಅವರ ದಿವ್ಯ ಅಪೇಕ್ಷೆಯನ್ನು ಪೂರೈಸುವಂತೆ ನೀವುಗಳೆಲ್ಲ ತುಂಬು ಹೃದಯದಿಂದ ದುಡಿಯುತ್ತಿದ್ದೀರಿ. ಶರಣ ಮೇಳ, ಇಲ್ಲಿ ನೀವು ಸಮಾವೇಶವಾಗುತ್ತಿರುವುದನ್ನು ನೋಡಿದಾಗ, ಶರಣರ ಈ ಕಾಲಜ್ಞಾನ ಪೂರ್ತಿಯಾಗುತ್ತಲಿದೆ ಎನ್ನಿಸದಿರದು.

1. ದಂಡನಾಯಕ ಹೋದ ರಾಕ್ಷಸ ನಾಮ ಸಂವತ್ಸರ ಹದಿಮೂರು ಬಾರಿ, ತಿರುಗಿ ಬಂದಂದಿಗೆ.
2. ಚನ್ನಣ್ಣ ಉಳುವಿಗೆ ಹೋದ ಏಳುನೂರು ಎಂಭತ್ತುವರ್ಷ ತುಂಬಲಂದಿಗೆ ಬಂದು ಚರಿಸುತ್ತಿಹರು.

ಪ್ರವಚನ ಕಾರ್ಯಕ್ರಮ

ನಮ್ಮ ಧರ್ಮಪೀಠದ ಮುಖ್ಯ ಧ್ಯೇಯ ಧರ್ಮ ಪ್ರಚಾರ, ಧರ್ಮದ ಕಡೆಗೆ ಜನ ಬರದಾಗ ಧರ್ಮವನ್ನೇ ಅವರ ಕಡೆಗೆ ಒಯ್ಯಬೇಕು. ಎಂಬುದೇ ನಮ್ಮ

ಸಂಸ್ಥೆಯ ಮೂಲಮಂತ್ರ. ಒಬ್ಬ ವ್ಯಕ್ತಿಯಾಗಲೀ ಸಮಾಜವಾಗಲೀ ಧಾರ್ಮಿಕ ಸತ್ವವನ್ನು ಬೆಳೆಸಿಕೊಳ್ಳದೆ ಕೇವಲ ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಬೆಳೆದರೆ ಸಾಲದು. ಅಧ್ಯಾತ್ಮಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಬೆಳೆಯಬೇಕು. ಆತ್ಮವಿಲ್ಲದ ದೇಹ ನಿಷ್ಕ್ರಿಯವಾದಂತೆ ಧಾರ್ಮಿಕ ತೇಜಸ್ಸು, ಸಾಂಸ್ಕೃತಿಕ ಸತ್ವವಿಲ್ಲದ ಸಮಾಜವು ನಿಶ್ಶಕ್ತವಾಗುತ್ತದೆ.

ಈ ತತ್ತ್ವದ ಬೆಂಬಳಿವಿಡಿದು ಧರ್ಮ ಪ್ರಚಾರಕ್ಕೈಗೊಂಡು ಶಿವಯೋಗಿ ಸಿದ್ಧರಾಮೇಶ್ವರರ ಸುಕ್ಷೇತ್ರವಾದ ಸೊಲ್ಲಾಪುರ, ಬಿಜಾಪುರ, ಜಮಖಂಡಿ, ಮುಧೋಳ, ಅಥಣಿ, ತೇರದಾಳ, ಕೂಡಲ ಸಂಗಮ ಇಲ್ಲಿ ಪ್ರವಚನ ನೆರವೇರಿದವು. ಅದೇ ರೀತಿ ನಮ್ಮ ಧರ್ಮಪೀಠದಿಂದ ಪೂಜ್ಯ ಮಾತೆ ಗಂಗಾದೇವಿ, ಚನ್ನಬಸವಾನಂದರು ಮುಂತಾದವರ ಪ್ರವಚನ ಕರ್ನಾಟಕದ ವಿವಿಧ ಭಾಗಗಳಲ್ಲಿ ಮಾತ್ರವಲ್ಲದೆ, ಗಡಿನಾಡುಗಳಾದ ಹಿಂದೂಪುರ, ಅಕ್ಕಲಕೋಟೆ ಮುಂತಾದಲ್ಲಿ ನಡೆದವು. ಅಲ್ಲಿಯ ಜನರೆಲ್ಲರೂ ಬಹಳ ಶ್ರದ್ಧಾ ಭಕ್ತಿಗಳಿಂದ ಪ್ರವಚನ ಕೇಳಿ; ಹೃದಯ ತುಂಬಿ ತನುಮನ ಧನಗಳಿಂದ ಸಹಾಯ ಸಹಕಾರ ಮಾಡಿದರಲ್ಲದೆ ಶರಣಮೇಳದ ಯಶಸ್ಸಿಗೆ ದುಡಿದಿದ್ದಾರೆ.

ಬೆಂಕಿಯ ಕಡ್ಡಿಯನ್ನು ತೀಡುತ್ತೇವೆ. ಆಗ ಹತ್ತಿದ ಬೆಂಕಿಯನ್ನು ದೀಪವೊಂದಕ್ಕೆ ಹಚ್ಚಿಕೊಳ್ಳದಿದ್ದರೆ ಅದು ಆರಿಹೋಗುತ್ತದೆ. ಹಾಗೆಯೇ ಪ್ರವಚನ ಧರ್ಮಪ್ರಚಾರಗಳಿಂದ ಉಂಟಾದ ಜ್ಞಾನ ಜಾಗೃತಿಯು ಸ್ಥಾಯಿಯಾಗಿ ಉಳಿಯಬೇಕಾದರೆ ರಾಷ್ಟ್ರೀಯ ಬಸವದಳಗಳೆಂಬ ಪ್ರಣತಿಗಳಿಗೆ ಜ್ಯೋತಿ ಉದ್ದೀಪನ ಕ್ರಿಯೆ ಅಗತ್ಯವಿದೆ. ರಾಷ್ಟ್ರೀಯ ಬಸವ ದಳಗಳು ಬಸವ ಧರ್ಮದ ಕಾವಲು ಪಡೆಗಳಂತೆ. ಒಳಹೊರಗಿನ ಶತ್ರುಗಳಿಂದ ಭದ್ರತಾಪಡೆಗಳು ರಾಷ್ಟ್ರವನ್ನು ರಕ್ಷಿಸುವಂತೆ, ರಾಷ್ಟ್ರೀಯ ಬಸವ ದಳಗಳು ಬಸವ ತತ್ತ್ವವನ್ನು ರಕ್ಷಿಸಬೇಕು. ಜಾತೀಯ ಮನೋಭಾವ, ಒಳಪಂಗಡಗಳ ಭಿನ್ನತೆ, ಸಂಕುಚಿತ ಮತಾಂಧತೆ ಮೂಢನಂಬಿಕೆಗಳು ಬಸವ ಧರ್ಮದ ಶತ್ರುಗಳು. ಇವು ಮಾನವ ಸಮಾಜಕ್ಕೂ ಪರಮ ಶತ್ರುಗಳೇ. ರಾಷ್ಟ್ರೀಯ ಬಸವ ದಳಗಳು ಜಾತಿಮತ ಪಂಥ ಭೇದವಿಲ್ಲದ ಆಸಕ್ತರನ್ನು ತತ್ತ್ವನಿಷ್ಠರನ್ನು, ಧರ್ಮವಂತರನ್ನು ವಿಶ್ವಾಸದಿಂದ ಸ್ವಾಗತಿಸಿ, ಅವರಲ್ಲಿ ಉದಾತ್ತ ಧ್ಯೇಯವನ್ನೂ ಉತ್ತಮ ಸಂಸ್ಕೃತಿಯನ್ನೂ ಬಿತ್ತಬೇಕು. ಇಂದು ಇಡೀ ದೇಶವೇ ಮತಾಂಧತೆಯಿಂದ ತತ್ತರಿಸಿ ಹೋಗಿರುವಾಗ ಬಸವ ತತ್ತ್ವದರ್ಶನ ಸೂಕ್ತವಾದ ಮಾರ್ಗದರ್ಶನ ಮಾಡಬಲ್ಲದು, ಇವನಾರವ ಇವನಾರವ ಎಂದು ಹೊರಹಾಕುವ ಮನೋಭಾವವಿರದ ಬಸವ ತತ್ತ್ವವು ಎಲ್ಲರನ್ನೂ ಇವ ನಮ್ಮವ ಇವನಮ್ಮವ ಎಂದು ಇಂಬಿಟ್ಟುಕೊಳ್ಳುವ ವಿಶಾಲತೆಯನ್ನು, ಔದಾರ್ಯವನ್ನು ಹೊಂದಿರುವುದು.

ರಾಷ್ಟ್ರೀಯ ಬಸವ ದಳ—ತತ್ತ್ವನಿಷ್ಠೆ.

ಈ ಸಂಸ್ಥೆಯು ತಾತ್ತ್ವಿಕವಾದ ನಿರ್ದಿಷ್ಟ ನಿಲುವಿನಿಂದ ಕೂಡಿರುವ ಸಂಸ್ಥೆಯು.

ಬಸವ ಧರ್ಮಪೀಠವು ತನ್ನ ಉಪಾಂಗಗಳನ್ನಾಗಿ ಬಸವ ಧರ್ಮ ಸಂಸತ್ ಎಂಬ ಶಾಸಕಾಂಗದ ಮೂಲಕ ನಿರ್ಣಯಿಸಿ, ಧರ್ಮಪೀಠವು ಏನನ್ನು ಘೋಷಿಸುವುದೋ ಆ ನಿರ್ಣಯಕ್ಕೆ ರಾಷ್ಟ್ರೀಯ ಬಸವ ದಳವು ಬದ್ಧವಾಗಿರಬೇಕು. ತನಗೆ ಬೇಕಾದಂತೆ ಬದಲಾವಣೆಗಳನ್ನು ನಂಬಿಕೆಗಳಲ್ಲಾಗಲೀ, ಘೋಷಣೆಗಳಲ್ಲಾಗಲೀ, ಆಚರಣೆಗಳಲ್ಲಾಗಲೀ ಮಾಡಲು ರಾಷ್ಟ್ರೀಯ ಬಸವ ದಳಗಳು ಸ್ವತಂತ್ರವಾಗಿಲ್ಲ. ಯಾವುದೇ ವ್ಯಕ್ತಿಗಾಗಲೀ ಅಥವಾ ಸ್ಥಳೀಯ ರಾಷ್ಟ್ರೀಯ ಬಸವ ದಳಗಳ ಕಾರ್ಯಕಾರಿ ಸಂಸ್ಥೆಗಾಗಲೀ ಭಿನ್ನಾಭಿಪ್ರಾಯ ಬಂದಾಗ, ಕೇಂದ್ರದೊಡನೆ ಚರ್ಚಿಸದೆ ನಿರ್ಧಾರ ತೆಗೆದುಕೊಳ್ಳಲು ಅಧಿಕಾರವಿಲ್ಲ. ನಿಯಮಕ್ಕೆ ಬದ್ಧರಾಗದ ಹೊರತು ಸಂಘಟನೆಯಲ್ಲಿ, ಸಂಸ್ಥೆಯಲ್ಲಿ ಶಿಸ್ತು ತರಲು ಸಾಧ್ಯವಿಲ್ಲ.

ರಾಷ್ಟ್ರೀಯ ಬಸವ ದಳಗಳು ಎಲ್ಲಿಯೇ ಪ್ರಾರ್ಥನಾ ಮಂಟಪ, ಸಮುದಾಯ ಭವನ, ಕಲ್ಯಾಣ ಮಂದಿರ ಮುಂತಾಗಿ ಕಟ್ಟಿಸಿದರೆ ಕೇಂದ್ರ ಬಸವ ಧರ್ಮಪೀಠದ ಹೆಸರಿನಲ್ಲೇ ಖರೀದಿಸಬೇಕು ಮತ್ತು ಕಟ್ಟಬೇಕು. ಕೇಂದ್ರ ಸಂಸ್ಥೆಯು ಸ್ಥಳೀಯ ಜನರ ಒಂದು ಕಾರ್ಯಕಾರಿ ಸಮಿತಿ ಮಾಡಿ, ಕೆಲಸಕಾರ್ಯಗಳನ್ನು ನಿರ್ವಹಿಸಲು ಅವಕಾಶ ಮಾಡಿಕೊಡುವುದು. ಭಿನ್ನಾಭಿಪ್ರಾಯ ಬಂದು ಆಡಳಿತ ನಿರ್ವಹಣೆಯಲ್ಲಿ ವ್ಯತ್ಯಯವಾದಾಗ ಮಾತ್ರ ಮಧ್ಯೆ ಪ್ರವೇಶಿಸಿ ಸಮಿತಿಯಲ್ಲಿ ಬದಲಾವಣೆ ಮಾಡುವುದು. ರಾಷ್ಟ್ರೀಯ ಬಸವ ದಳವು ಸರ್ವೋಚ್ಚ ಸಮಿತಿಯೊಂದನ್ನು ಹೊಂದಿದೆ.

ದೀಪವನ್ನು ಹಚ್ಚಿಟ್ಟಾಗ ಜೋರಾಗಿ ಗಾಳಿ ಬೀಸಿದರೆ ಅದು ಆರುವುದು. ಅದಕ್ಕೆ ಗಾಜಿನ ಹೊದ್ದಿಕೆ ಹಾಕಿದರೆ ಸುರಕ್ಷಿತವಾಗಿರುವುದು. ಅದೇ ರೀತಿ ರಾಷ್ಟ್ರೀಯ ಬಸವ ದಳಗಳು ಗಾಜಿನ ಆವರಣದಂತೆ ಬಸವ ಧರ್ಮದ ಜ್ಯೋತಿಯನ್ನು ರಕ್ಷಿಸಬೇಕು. ಸ್ಥಾನಿಕ ಪಂಥಗಳನ್ನು ವಿಪರೀತವಾಗಿ ಬೆಳೆಸಿ ಧರ್ಮಗುರು ನಿಷ್ಠೆಯನ್ನು ದುರ್ಬಲಗೊಳಿಸಿರುವ ಕೆಲವು ಸ್ವಾರ್ಥಪರ ಜನರ ಮನೋಗತವನ್ನು ಅರಿತು ಈಗ ಧರ್ಮಗುರು ನಿಷ್ಠೆಯನ್ನು ಬೆಳೆಸಬೇಕು. ಅಂದು ವಿಶ್ವಗುರು ಬಸವಣ್ಣನವರು ಏಕ ದೇವೋಪಾಸನೆಗೆ ಒತ್ತು ಕೊಟ್ಟರು. ನಾವಿಂದು ಅದರೊಡನೆ ಏಕ ಗುರೋಪಾಸನೆಗೆ ಒತ್ತು ಕೊಡಬೇಕಾಗಿದೆ.

ವಾರ್ಷಿಕ ಸಮಾವೇಶ :

ರಾಷ್ಟ್ರೀಯ ಬಸವ ದಳಗಳ ಸದಸ್ಯರು ಮತ್ತು ಬಸವ ಧರ್ಮ ಸಂಸತ್ ಸದಸ್ಯರು ಪರಸ್ಪರ ಸೋದರ ಭಾವನೆಯಿಂದ ಬೆರೆಯ ಬೇಕಾದರೆ ಆಗಾಗ ಸಮ್ಮೇಳನಗಳು ನಡೆಯಬೇಕು. ಆದ್ದರಿಂದ ವರ್ಷಕ್ಕೊಮ್ಮೆ ವಿವಿಧ ರಾಷ್ಟ್ರೀಯ ಬಸವ ದಳಗಳವರು ಒಂದು ಸಮ್ಮೇಳನ ನಡೆಸಬೇಕು. ಮೂರು ದಿನಗಳ ಸಮಾವೇಶದಲ್ಲಿ ವಿವಿಧ ವಿಷಯಗಳನ್ನು ಚರ್ಚಿಸಬಹುದು. ಪ್ರತಿನಿಧಿಗಳು ಮೂರು ದಿನಗಳ ಖರ್ಚಿಗಾಗಿ ಪ್ರತಿನಿಧಿ ಶುಲ್ಕ ಕೊಟ್ಟು ಸಮ್ಮೇಳನ ನಡೆಸುವ ರಾಷ್ಟ್ರೀಯ ಬಸವ ದಳದ ಭಾರ ಕಮ್ಮಿ ಮಾಡಬಹುದು.

ಇಂದು ಬಸವ ಧರ್ಮೀಯರ ಮೇಲೆ ಬಹುದೊಡ್ಡ ಹೊಣೆಗಾರಿಕೆ ಇದೆ, ತಂತಮ್ಮ ಮನೆಯ ಕೆಲಸಕ್ಕಿಂತಲೂ ಸಮಾಜದ, ಧರ್ಮ ರಕ್ಷಣೆಯ ಕೆಲಸ ಮಹತ್ವ ದೆಂದು ತಿಳಿಯುವುದಗತ್ಯವಿದೆ. ಶರಣ ಮೇಳ, ಅಕ್ಟೋಬರ್ ಶಿಬಿರ, ಈ ವಾರ್ಷಿಕ ಸಮ್ಮೇಳನಗಳಲ್ಲಿ ಭಾಗಿಯಾಗುವುದು ಅಗತ್ಯ. ಅದಕ್ಕಾಗಿ ಸಮಯ-ಹಣ ಎರಡನ್ನು ಮೀಸಲಿಡಬೇಕು ಎಂಬ ಕರ್ತವ್ಯ ಪ್ರಜ್ಞೆ ಮೂಡಬೇಕು. ತಮ್ಮ ಆದಾಯದ ಒಂದು ಪಾಲು ವಿನಿಯೋಗವಾಗಬೇಕು, ಎಂಬ ಉತ್ಕಟ ಹಂಬಲ ಬೆಳಿಸಿಕೊಳ್ಳಬೇಕು. ವಾರ್ಷಿಕ ಸಮಾವೇಶ ಸಾಮಾನ್ಯವಾಗಿ ಮೇ ತಿಂಗಳಲ್ಲಿ ನಡೆದರೆ ಒಳ್ಳೆಯದು. ಯಾವ ರಾಷ್ಟ್ರೀಯ ಬಸವ ದಳದವರು (ಅಥವಾ ಬಸವ ಧರ್ಮ ಸಂಸತ್ ಸದಸ್ಯರು) ಆಯಾ ವರ್ಷದ ಸಮ್ಮೇನ ನಡೆಸಲು ಸಾಧ್ಯ ಎಂಬುದನ್ನು ಶರಣ ಮೇಳದಲ್ಲಿ ಘೋಷಿಸ ಬಹುದು. ಈ ಸಮ್ಮೇಳನ ಬಹಳ ವೆಚ್ಚದಾಯಕವಾದ, ವೈಭವದ ಬಾಬತ್ತು ಆಗದೆ ಸರಳವಾಗಿ, ವೈಚಾರಿಕವಾಗಿ, ಆತ್ಮೀಯ ಸಮ್ಮಿಲನವಾಗಿ ಇರಬೇಕು.

ಶರಣ ಬಂಧುಗಳೇ, ನೀವು ರಾಷ್ಟ್ರೀಯ ಬಸವದಳದ ಸದಸ್ಯರಾಗುವುದು ನಿಮ್ಮ ಪವಿತ್ರ ಕರ್ತವ್ಯವೆಂದು ತಿಳಿಯಿರಿ. ಧರ್ಮಪಿತರು ಹೇಳಿದ್ದಾರೆ.

ಮಡಕೆಯ ಮಾಡುವರೆ ಮಣ್ಣೇ ಮೊದಲು
ತೊಡಿಗೆಯ ಮಾಡುವರೆ ಹೊನ್ನೇ ಮೊದಲು
ಶಿವಪಥವರಿವೊಡೆ ಗುರುಪಥವೇ ಮೊದಲು
ಕೂಡಲ ಸಂಗಮ ದೇವರನರಿವೊಡೆ
ಶರಣರ ಸಂಗವೇ ಮೊದಲು ಮೊದಲು.

ನಿತ್ಯವೂ ದೇವರ ಪೂಜೆಯನ್ನು ಮಾಡುವುದು ಎಷ್ಟು ಅಗತ್ಯವೋ ಅಷ್ಟೇ ಅಗತ್ಯ ಸಂಜೆಯ ಕೌಟುಂಬಿಕ ಪ್ರಾರ್ಥನೆ ಮತ್ತು ವಾರದ ಸಾಮೂಹಿಕ ಪ್ರಾರ್ಥನೆ ಎಂದು ನಂಬಿರಿ. ಇದು ಧರ್ಮಾನುಯಾಯಿಗಳನ್ನು ಹತ್ತಿರ ತರುತ್ತದೆ, ಜಾತೀಯ ತಳಹದಿಯ ಮೇಲೆ ಪರಸ್ಪರರನ್ನು ಬೆಸೆಯದೆ ತತ್ತ್ವದ ತಳಹದಿಯ ಮೇಲೆ ಎಲ್ಲರನ್ನೂ ಬೆಸೆಯುತ್ತದೆ. ಎಲ್ಲ ಕೆಲಸಗಳನ್ನು ಮತ್ತು ಬರಬಹುದಾದ ಆರ್ಥಿಕ ಲಾಭ ವನ್ನು ಕಡೆಗಣಿಸಿ ವಾರದ ಪ್ರಾರ್ಥನೆಗೆ ಬಸವ ಮಂಟಪಗಳಿಗೆ ಬನ್ನಿರಿ.

ಪ್ರತಿ ಗ್ರಾಮಕ್ಕೂ ರಾಷ್ಟ್ರೀಯ ಬಸವ ದಳ ಆಗಬೇಕು. ಇಲ್ಲದಿದ್ದರೆ ಈ ದೇಶ ದಲ್ಲಿ ಶಾಂತಿ ಸಾಧ್ಯವಿಲ್ಲ ; ಎಲ್ಲರನ್ನೂ ವಿಶ್ವಾಸದಿಂದ ಕರೆದುಕೊಂಡು ಜೊತೆಗೂಡಿ ಪ್ರಾರ್ಥನೆ, ವಚನ ಪಠಣ, ಸಾಹಿತ್ಯಾಧ್ಯಯನ ಮಾಡುವ ಪರಿಪಾಠ ನಿಮ್ಮಲ್ಲಿ ಬೆಳೆ ಯಲಿ. ನಿಮ್ಮ ಸುತ್ತ ಮುತ್ತಲಿನ ಸ್ಥಳಗಳಲ್ಲಿ ರಾಷ್ಟ್ರೀಯ ಬಸವ ದಳದ ಶಾಖೆ ತೆರೆದು ಪ್ರಾರ್ಥನೆಯನ್ನು ಆರಂಭಿಸಿರಿ. ಈ ಮೂಲಕ ಸಂಘಟನೆ-ಸಂಸ್ಕಾರ ಎರಡೂ ಸಾಧ್ಯ.

ಶರಣ ಮೇಳ

800 ವರ್ಷಗಳ ಕಾಲ ದಿಕ್ಕೆಟ್ಟು ಅಲೆದ ಬಸವ ಧರ್ಮೀಯರ ಸಮಾಜ ಇದೀಗ ಧರ್ಮ ಪಿತ ಬಸವಣ್ಣನವರನ್ನು ಹೃದಯ ಪೀಠದಲ್ಲಿ ಕುಳ್ಳಿರಿಸಿಕೊಂಡಿದೆ. ನಮ್ಮ ಅಪ್ಪ ಬಸ ವಣ್ಣ- ಅಮ್ಮ ವಚನ ಸಾಹಿತ್ಯ ಎಂಬ ಸತ್ಯ ಮನವರಿಕೆಯಾಗಿದೆ. ಈ ತಾಯಿ ತಂದೆಯರನ್ನು ಬಸವ ಮಹಾಮನೆ ಎಂಬ ಪರಂಪರೆಯು ಹೊಂದಿದ್ದು. ಇವರ ಮಕ್ಕ ದಳಾ ತಾವೆಲ್ಲ ಶರಣ ಮೇಳದ ಮೂಲಕ ಒಂದು ಗೂಡುವಂತಾಗಿದೆ. 'ಶರಣ ಮೇಳ'ದ ಕಲ್ಪನೆಯೇ ದಿವ್ಯ, ಭವ್ಯ, ಉದಾತ್ತ. ಇದಕ್ಕಾಗಿ ನೀವು ಸುಮಾರು ಮೂರು ತಿಂಗಳು ಶ್ರಮಿಸಲೇ ಬೇಕು. ಇದರ ಮಹತ್ವ ಮನಗಾಣಿಸಿ, ಹೆಚ್ಚಿನ ಜನರನ್ನು ಕರೆತರಬೇಕು, ಶರಣ ಮೇಳ ನಿರ್ವಹಣೆಗೆ, ದವಸಧಾನ್ಯ ಸಂಗ್ರಹಿಸಬೇಕು.

ಶರಣ ಮೇಳದ ನಿಧಿ

ಶರಣ ವೇಳವು ಯಶಸ್ವಿಯಾಗಿ ನಡೆಯಬೇಕಾದರೆ ನಿಧಿಯನ್ನು ಸಂಗ್ರಹಿಸಬೇಕು. ಖಚಿತ ಆಧಾಯ ಬರುವಂತೆ ಯೋಜನೆ ರೂಪಿಸಬೇಕು. ಖಾಯಂ ನಿಧಿಯೊಡನೆ ವಾರ್ಷಿಕ ದೇಣಿಗೆ ಸಂಗ್ರಹಣೆ ಕ್ರಮವಾಗಿ ಸಾಗಬೇಕು. ಬಸವ ಧರ್ಮ ಸಂಸತ್ ರಾಷ್ಟ್ರಿಯ ಬಸವ ದಳಗಳ ರಚನೆಯ ಉದ್ದೇಶವೇ ಇದು. ನೀವೆಲ್ಲ ಬಸವ ಧರ್ಮ ಪೀಠ ಎಂಬ ಮಹಾಭವನದ ಆಧಾರ ಸ್ತಂಭಗಳಿದ್ದಂತೆ. ನಾವು ಕೈಗೊಂಡ ಯೋಜ ನೆಗಳನ್ನು ಪೂರೈಸುವ ಅಂಗಾಂಗಗಳಂತೆ ಹಲವಾರು ಶರಣರ ಸೂಚನೆಯಂತೆ ಶರಣ ಮೇಳ ಉತ್ಸವ ಸಂಚಾಲಕ ಸಮಿತಿಯೊಂದನ್ನು ರಚಿಸಲಾಗುತ್ತಿದೆ. ಇಲ್ಲಿ ನಾವು ನಿಮ್ಮನ್ನು ಆಯ್ಕೆ ಮಾಡುವುದಕ್ಕಿಂತಲೂ, ನೀವೇ ಸ್ವಯಂ ಪ್ರೇರಣೆಯಿಂದ ನಿಮ್ಮ ಹೆಸರನ್ನು ಇದರಲ್ಲಿ ನೋಂದಾಯಿಸಬೇಕು. ಹೀಗೆ ನೋಂದಾಯಿಸಿದ ಶರಣ ಬಂಧುಗಳು ತಾವು ವೈಯಕ್ತಿಕವಾಗಿಯಾಗಲಿ, ತಮ್ಮ ಬಂಧು ಮಿತ್ರರಿಂದಾಗಲಿ ಸಂಗ್ರಹಿಸಿ ಕನಿಷ್ಟಪಕ್ಷ 2000ರೂ. ಗಳನ್ನು ಎಷ್ಟು ಹೆಚ್ಚು ಸಾಧ್ಯವೋ ಅಷ್ಟನ್ನು ಪ್ರತಿ 'ಶರಣ ವೇಳಕ್ಕೆ ಕೊಡಬೇಕು. ಇಂಥಾ ಸ್ವಯಂ ಪ್ರೇರಣೆಯ ಕಾರ್ಯ ಮಾಡಲು ತಾವಾಗಿ ಮುಂದೆ ಬಂದು ಹೆಸರು ಮತ್ತು ವಿಳಾಸ ಬರೆಸಬೇಕು. ಅಕ್ಟೋಬರ ತಿಂಗಳಲ್ಲಿ ಸಂಬಂಧ ಪಟ್ಟ ಪ್ರಚಾರ ಸಾಮಗ್ರಿಯನ್ನು ಅವರವರ ವಿಳಾಸಕ್ಕೆ ಕಳಿಸಲಾಗುವುದು. ಶರಣ ಮೇಳವು ಶರಣರಿಂದ ಶರಣರಿಗಾಗಿ ಶರಣರೇ ನಡೆಸುವ ಜನಪರ ಕಾರ್ಯಕ್ರಮ ಎಂಬುದನ್ನು ಎಲ್ಲರೂ ಮನಗಾಣಬೇಕು.

ಸುಮಾರು 3 ತಿಂಗಳ ಕಾಲ ಶರಣ ಬಂಧುಗಳು ಮಾಡುವ ಪ್ರಚಾರ ಕಾರ್ಯಕ್ರಮ ಅತ್ಯದ್ಭುತ ಪರಿಣಾಮ ಬೀರಿ ಅಪರಿಚಿತರನ್ನು ಆತ್ಮೀಯರನ್ನಾಗಿ ಮಾಟತ್ತಿದೆ. ಸಾಹಿತ್ಯ ಸಾಮಾಗ್ರಿಯನ್ನು ಮನೆಮನೆಗೆ ಮುಟ್ಟಿಸುತ್ತಿದೆ. ಎಲ್ಲ ಭಾಷಿಕರನ್ನು ಹತ್ತಿರ ತರುತ್ತಿದೆ. ಮತ್ತು ಎಲ್ಲರೂ ತನು-ಮನಗಳಿಂದ ಧರ್ಮ ಪ್ರಚಾ ಕಾರದಲ್ಲಿ ಭಾಗಿಗಳಾಗುವಂತೆ ಮಾಡುತ್ತಿದೆ, ಇದರಿಂದ ಕಾಲಜ್ಞಾನದಲ್ಲಿ ಆದಿಶರ ಣರು ನುಡಿದಂತೆ ಮನೆಮನೆಗೆ ಬಸವನ ಉತ್ಸವ ಪರಿಸಸುತ್ತಲಿದೆ.

ನಿಶ್ಯೋತ್ಸವ

ಬಸವ ಧರ್ಮೀಯರು ಕ್ರಮಿಸಬೇಕಾದ ಹಾದಿ ದೂರವಿದೆ–ಜಾಗತಿಕ ಧರ್ಮಗಳ ಸಾಲಿನಲ್ಲಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬಸವ ಧರ್ಮ ಸ್ಥಾನಗಳಿಸಿಕೊಳ್ಳಬೇಕಾಗಿದೆ. ಜಗತ್ತಿನ ಪ್ರವಾದಿಗಳ ಸಾಲಿನಲ್ಲಿ ಅತ್ಯದ್ಭುತ, ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವವುಳ್ಳ ಧರ್ಮಪಿತ ಬಸವಣ್ಣನವರು ಗುರುತಿಸಲ್ಪಡಬೇಕು, ಅಧ್ಯಯನಿಸಲ್ಪಟ್ಟು, ಗೌರವಿಸಲ್ಪಡಬೇಕು. ಶರಣರ ತ್ಯಾಗ-ಬಲಿದಾನಗಳ ಅರಿವು ಇತರರಿಗೆ ಆಗಬೇಕು, ಅಲ್ಲಿಯವರಿಗೂ ನಮ್ಮ-ನಿಮ್ಮ ತನು-ಮನು-ಧನಗಳಿಗೆ ವಿರಾಮವಿಲ್ಲ. ಆದ್ದರಿಂದ ಶರಣ ಮೇಳಕ್ಕೆ 3 ತಿಂಗಳು ದುಡಿದ ನೀವು ಮೇಳದ ಬಳಿಕ ವಿಶ್ರಾಂತಿ ತೆಗೆದುಕೊಳ್ಳುವಂತಿಲ್ಲ. ಪುನಃ ಧರ್ಮ ಪ್ರಚಾರಕ್ಕೆ ಅಣಿಯಾಗಬೇಕು. ಸಾಹಿತ್ಯ-ಆಡಿಯೋ-ವೀಡಿಯೋ ಕೆಸೆಟ್ಟಿನ ಮೂಲಕ ನಿಮ್ಮಕೈಗೆ ವಚನ ಧರ್ಮಶ್ರೀಯನ್ನು ಕೊಟ್ಟಿದ್ದೇವೆ. ಇದನ್ನು ಮನೆಮನೆಗೆ ಮುಟ್ಟಿಸುವ ಕಾರ್ಯ ಮಾಡಿರಿ.

ನೀವುಗಳು ಅಸಂಖ್ಯಾತರು ಹಗಲಿರುಳು ಶರಣ ಮೇಳಕ್ಕಾಗಿ ದುಡಿಯುತ್ತಿದ್ದೀರಿ. ನಿಮ್ಮನ್ನು ಎಷ್ಟು ಕೊಂಡಾಡಿದರೂ, ಸನ್ಮಾನಿಸಿದರೂ ಕಡಿಮೆಯೆ. ಆದರೂ ನಿಮ್ಮನ್ನು ಹೊಗಳಲಾರವು. ಏಕೆಂದರೆ ಬಸವ ಮಹಾಮನೆಯ ಮಕ್ಕಳಾದ ನೀವು ನಿಮ್ಮ ಕರ್ತವ್ಯ ಮಾಡಿದ್ದೀರಿ. "ಮನೆಯ ತೊತ್ತಲಸಿದರೆ ಮನೆಯೊಡತಿ ಮಾಡಿಕೊಳ್ಳುವಳು" ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು. ಇದನ್ನೇ ಅನ್ವಯಿಸಿ ಹೀಗೆ ಹೇಳೋಣ, ಬಸವ ಗುರುವಿನ ಕಾರ್ಯದಲ್ಲಿ ಆಲಸ್ಯ ತೋರುವವರು ತೊತ್ತಾಗಳಾದರೆ, ಆ ಕಾರ್ಯ ಪೂರೈಸಿದವರೇ ಒಡೆಯರು !

ಬಸವ ಧರ್ಮ–ಹೆಸರು ಬಳಕೆ

ನಾವೀಗ ನಿರ್ಣಾಯಕ ಹಂತಕ್ಕೆ ಬರುತ್ತಿದ್ದೇವೆ. ಪ್ರಥಮ ಸಮತಾವಾದಿ, ಮಹಾ ಪ್ರವಾದಿ, ಮಾನವತಾವಾದಿ, ಕಾರಣಿಕ ಪುರುಷ ವಿಶ್ವಗುರು ಬಸವಣ್ಣನವರು, ಸಂಸ್ಥಾಪಿಸಿಕೊಟ್ಟ ನೂತನ ಧರ್ಮವನ್ನು ಒಳ ಸೇರಿದ ಮತ್ತು ಹೊಸದಾಗಿ ಸೇರುತ್ತಿರುವ ಜಾತಿವಾದಿಗಳು ಅಂದಗೆಡಿಸಿದ್ದಾರೆ. ಇದರ ಇತಿಹಾಸವನ್ನು ತಿರುಚಿದ್ದಾರೆ, ಬಸವ ಗುರುವಿನ ಅವತಾರಕ್ಕೆ ಮೊದಲು ಈ ಧರ್ಮವಿತ್ತು ಎಂಬ ಭ್ರಾಂತ ಕಲ್ಪನೆಯಿಂದ ನಾವಿಂದು ಹೊರಬಂದಿದ್ದೇವೆ. ಬಸವಾದಿ ಪ್ರಮಥರು ಹೆಸರಿಟ್ಟು ಕರೆಮದು ಲಿಂಗ ವಂತ, ಲಿಂಗಾಯತ ಧರ್ಮ ಎಂದು. ಇನ್ನಷ್ಟು ಖಚಿತತೆ ತರಲು ಇದನ್ನು ನಾವು ಬಸವ ಧರ್ಮ ಎಂದು ಕರೆಯೋಣ ಬಸವ ಧರ್ಮೀಯರು ಎಂದು ಹೆಮ್ಮೆಯಿಂದ ಹೇಳೋಣ. ನೀವುಗಳು ಈ ಪದವನ್ನೇ ಖಚಿತವಾಗಿ, ಹೆಚ್ಚಾಗಿ ಬಳಸಿರಿ. ಹೀಗೆ ಬಳಸಿದಾಗ ಬಸವ ಧರ್ಮವು ಬಸವಣ್ಣನಿಗಿಂತಲೂ ಮೊದಲಿತ್ತು ಎಂದು ಯಾವ ಧೂರ್ತ ಪಂಡಿತನೂ ಸಾಧಿಸಲಾರ, ಯಾವ ಮೂರ್ಖ ಭಕ್ತನೂ ನಂಬಲಾರ. ಇನ್ನು ಸ್ಥಾಪಕರು ಯಾರು ಎಂಬ ಚರ್ಚೆಗೆ ತೊಡಗದೆ, ಧರ್ಮಪಿತ ಬಸವಣ್ಣನವರೇ ಕೊಟ್ಟ ತತ್ತ್ವದಲ್ಲಿ, ಪಥದಲ್ಲಿ ಶ್ರದ್ಧೆಯಿಟ್ಟು ನಡೆಯೋಣ.

ಕೋಮು ಸೌಹಾರ್ದತೆ ಇಂದಿನ ಅಗತ್ಯ

ಮಂದಿರ–ಮಸೀದಿ ವಿವಾದದಿಂದಾಗಿ ಎಲ್ಲೆಡೆಯಲ್ಲಿ ಅಶಾಂತಿ ತಲೆದೋರಿ ಇಡೀ ದೇಶವೇ ಹಿಂಸಾಚಾರದಲ್ಲಿ ನಲುಗಿ ಹೋಯಿತು. ಈ ಬಗೆಯ ಉದ್ರಿಕ್ತತೆ ಧರ್ಮವಂತರಿಗೆ ಸಲ್ಲದು. ನಿಜ ಧರ್ಮದ ಧ್ಯೇಯವೇ ಶಾಂತಿ ಸ್ಥಾಪನೆ. ನಮ್ಮ ದೇಶವಿಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಜೀವನವೇ ದುರ್ಧರವಾಗಿ ಭಾರತೀಯನ ಸ್ಥಿತಿ ಕರುಣಾಜನಕವಾಗಿರುವಾಗ ಭೌತಿಕ, ಮಂದಿರ-ಮಸೀದಿಗಳ ಸಲುವಾಗಿ ಎಲ್ಲರ ಭಕ್ತಿ, ಶಕ್ತಿ, ಗಮನ, ಸಮಯ ವ್ಯಯವಾಗುವಂತಾದುದು ಖೇದನೀಯ. ಭಕ್ತಿ-ಶ್ರದ್ಧೆಗಳನ್ನು ಪ್ರದರ್ಶಿಸಲು ಧರ್ಮಮಂದಿರಗಳು ಕೇವಲ ಸಾಧನ ಮಾತ್ರ ಅವೇ ಸಿದ್ಧಿಯಲ್ಲ. ಈ ದೇಶವು ಹಲವು ಧರ್ಮಗಳ ತೊಟ್ಟಿಲು ; ಎಲ್ಲ ಧರ್ಮೀಯರ ಮಧ್ಯೆ ಸೌಹಾರ್ದತೆ, ಸಹಬಾಳ್ವೆ, ಸಾಮರಸ್ಯ ಅತ್ಯಗತ್ಯ. ನಾವು ನಿಜ ಧರ್ಮವಂತರಾದರೆ ನಮ್ಮಲ್ಲಿ ದೂರಾಲೋಚನೆ ಅತ್ಯವಶ್ಯ, ಇಲ್ಲವಾದರೆ ನಾವು ದೇಶಪ್ರೇಮಿಗಳೂ ಅಲ್ಲ, ಧರ್ಮವಂತರೂ ಅಲ್ಲ ಎಂಬುದನ್ನು ಮನವಟ್ಟು ಮಾಡಿಕೊಳ್ಳಬೇಕು.

ಬಾಗಲುಕೋಟೆಯ ಬಸವೇಶ್ವರ ವೃತ್ತದಲ್ಲಿ ನಿಲ್ಲಿಸಿದ್ದ ವಿಶ್ವಗುರು ಬಸವಣ್ಣನವರ ಪುತ್ಥಳಿಯನ್ನು ದುಷ್ಕರ್ಮಿಗಳು ಗಲಭೆಯ ಸಂದರ್ಭದಲ್ಲಿ ಭಗ್ನಗೊಳಿಸಿದ್ದು ತಿಳಿಯಿತು. ಆಗ ಬಾಗಲುಕೋಟೆಯ ಬಸವ ತತ್ತ್ವಾನುಯಾಯಿಗಳು ಕೋಪದ ಕೈಗೆ ಬುದ್ಧಿಕೊಟ್ಟು ದುಡುಕಿಲ್ಲ, ವದಂತಿಗಳನ್ನು ನಂಬಿ ಹಿಂಸೆಗೆ ಇಳಿದಿಲ್ಲ ; ಇದರಿಂದ ನೀವು ಗುರು ಬಸವ ತಂದೆಗೆ ಕೀರ್ತಿ ತಂದಿದ್ದೀರಿ. ಕಾಯಿದೆಯನ್ನು ಉಲ್ಲಂಘಿಸುವುದು ಸಲ್ಲದು ; ಸಂವಿಧಾನಕ್ಕೆ ಅಪಚಾರ ಬೇಡ, ಸಭ್ಯತೆ-ಸಂಸ್ಕೃತಿಗಳ ನಡತೆ ನಿಮ್ಮದಾಗಿದೆ. ಸರಕಾರವು ಈ ಸಭ್ಯತೆ-ಸಂಸ್ಕೃತಿಗಳನ್ನು ಗಮನಕ್ಕೆ ತಂದುಕೊಂಡು, ಆದಷ್ಟು ತೀವ್ರವಾಗಿ ಭಗ್ನಗೊಂಡ ಮೂರ್ತಿಯನ್ನು ತೆಗೆಸಿ, ಶಾಶ್ವತವಾದ ಕಂಚಿನ ಪುತ್ಥಳಿಯನ್ನು ನಿಲ್ಲಿಸಿ, ಈ ದೇಶದಲ್ಲಿ ತಾಳ್ಮೆಗೆ, ಸುಸಂಸ್ಕೃತಿಗೆ ಬೆಲೆ ಇದೆ ಎಂಬುದನ್ನು ದೃಢೀಕರಿಸಲಿ.

ಒಂದೊಂದು ಶರಣ ಮೇಳವೂ ಬಸವ ಧರ್ಮ ಪ್ರಚಾರದ ದಿಶೆಯಲ್ಲಿ ಮಹತ್ವದ ಮೈಲಿಗಲ್ಲಾಗಬೇಕು. ನೀವುಗಳೆಲ್ಲ ಆ ದಿಕ್ಕಿನಲ್ಲಿ ಅಂತಃಕರಣ ಪೂರ್ವಕವಾಗಿ ಶ್ರಮಿಸುತ್ತೀರಿ. ವಿಶ್ವಗುರು ಮಂತ್ರ ಪುರುಷ ಬಸವಣ್ಣನವರು, ಜಗತ್ಕರ್ತ ಪರಮಾತ್ಮನು ನಿಮಗೆಲ್ಲ ಆಯುರಾರೋಗ್ಯ ಸಕಲ ಸಂಪದವ ನೀಡಲಿ ಎಂದು ಹಾರೈಸುತ್ತೇವೆ.

ನಾಡೆಂಬ ದೇಹಕ್ಕೆ । ರೂಢಿಪತಿಯೇ ಪ್ರಾಣ ।
ನಾಡಳಿಯೆ ರೂಢಿಪತಿ ಕೆಡಗು, ಅರಸಳಿಯೆ
ನಾಡೆಲ್ಲ ಕೆಡಗು ಸರ್ವಜ್ಞ ॥

ಕೂಡಲಸಂಗಮ ಆಡಳಿತ : ಪರಸ್ಪರ ದೋಷಾರೋಪಣೆ

(ಸ್ವಂತ ಸುದ್ದಿಗಾರರಿಂದ) ಬಾಗಲಕೋಟೆ, ೨೧– ಶ್ರೀಕ್ಷೇತ್ರ ಕೂಡಲ ಸಂಗಮದ ದೇವಸ್ಥಾನ ಆಡಳಿತ ಈಗ ಸಾರ್ವಜನಿಕ ಚರ್ಚೆಗೆ ಗ್ರಾಸವಾಗಿದ್ದು, ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಶರಣ ಮೇಳ ಉತ್ಸವ ಸಮಿತಿಗಳು ಈಗ ಪರಸ್ಪರ ದೋಷಾರೋಪಣೆಯಲ್ಲಿ ತೊಡಗಿವೆ.

ಕೂಡಲ ಸಂಗಮೇಶ್ವರ ದೇವಾಲಯ ಹಾಗೂ ಬಸವೇಶ್ವರ ಐಕ್ಯ ಮಂಟಪದ ಶೋಚನಿಯ ಸ್ಥಿತಿಗೆ ದೇವಾಲಯದ ಟ್ರಸ್ಟ್ ಸಮಿತಿ ಕಾರಣ. ದೇವಸ್ಥಾನದ ಅಭಿವೃದ್ಧಿಯ ವಿಷಯವನ್ನು ಸರ್ಕಾರಕ್ಕೆ ವಹಿಸಿಕೊಟ್ಟು ಮೌನವಾಗಿರುವ ಆಡಳಿತ ಮಂಡಳಿ ವೈಯಕ್ತಿಕ ಒಡೆತನದ ಕೌಟುಂಬಿಕ ಟ್ರಸ್ಟ್ ಆಗಿದ್ದು, ಬರುವ ಆದಾಯವನ್ನು ಅಭಿವೃದ್ಧಿಗೆ ಬಳಸದೆ ಸ್ವಂತಕ್ಕೆ ಬಳಸಿಕೊಂಡಿದ್ದಾರೆಂಬುದು ೬ನೇ ಶರಣ ಮೇಳದ ಆರೋಪವಾಗಿದೆ ಎಂದು ಬಸವಕಿರಣ ಪತ್ರಿಕೆ ಸಂಪಾದಕ ಡಿ. ಎಸ್. ವಿಜಯಕುಮಾರ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ದೇವಸ್ಥಾನದ ರಕ್ಷಣೆ ಹಾಗೂ ಅಭಿವೃದ್ಧಿಗೆ ಸಹಾಯಕವಾಗುವಂತೆ ಈ ಕೌಟುಂಬಿಕ ಟ್ರಸ್ಟ್ ಮಂಡಳಿ ರದ್ದುಪಡಿಸಿ ಎಲ್ಲ ಜಿಲ್ಲೆಗಳಿಂದ ಆಯ್ದ ಪ್ರತಿನಿಧಿಗಳನ್ನೊಳಗೊಂಡ ಟ್ರಸ್ಟ್ ರಚಿಸಬೇಕು. ಐಕ್ಯಮಂಟಪಕ್ಕೆ ಪ್ರವೇಶ ದರ ರದ್ದುಪಡಿಸಿ ದರ್ಶನಕ್ಕೆ ಮುಕ್ತ ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಲಾಗಿದೆ. ಇದಕ್ಕಾಗಿ ದೇವಸ್ಥಾನದ ಎದುರು ಸಾಂಕೇತಿಕ ಧರಣಿ ನಡೆಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ನಿರಾಕರಣೆ : ಶರಣಮೇಳದ ಆರೋಪವನ್ನು ಅಲ್ಲಗಳೆದಿರುವ ದೇವಸ್ಥಾನದ ಟ್ರಸ್ಟ್ ಸಮಿತಿ ಅಧ್ಯಕ್ಷ ಎಸ್. ಜಿ. ಪಾಟೀಲ ಅವರು ದೇವಸ್ಥಾನದ ಸರ್ವತೋಮುಖ ಅಭಿವೃದ್ಧಿ, ಬಸವ ತತ್ವ ಪ್ರಸಾರ, ಧಾರ್ಮಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆದಿರುವದನ್ನು ವಿವರಿಸಿದ್ದಾರೆ.

ದೇವಸ್ಥಾನದ ಮುಳುಗಡೆ ಪರಿಸ್ಥಿತಿ ಸರ್ಕಾರದ ಗಮನಕ್ಕೆ ತಂದು ವಿಶ್ವನಾಥ ರೆಡ್ಡಿ ಮುದ್ನಾಳ ಸಮಿತಿ ರಚನೆ, ಅದರ ಅನುಷ್ಠಾನಕ್ಕೆ ಆಗ್ರಹ, ಇವೆಲ್ಲ ಟ್ರಸ್ಟ್ ಮಂಡಳಿ ಪ್ರಯತ್ನದಿಂದ ಸಾಧ್ಯವಾಗಿದೆ ಎಂದರು.

ದೇವಸ್ಥಾನದ ಕಸಳಕ್ಕೆ ಬಂಗಾರದ ಗಿಲಿಟ ಮಾಡಿಸಲಾಗಿದೆ. ಪ್ರತಿ ವರ್ಷ ಸಾಮೂಹಿಕ ವಿವಾಹ, ಅಯ್ಯಾಚಾರ ದೀಕ್ಷೆ ರಾಜ್ಯಾದಾದ್ಯಂತ ಬಸವ ಜ್ಯೋತಿ ಸಂಚಾರ ಈ ಮೂಲಕ ಅವರ ಸಂದೇಶಗಳನ್ನು ಜನತೆಗೆ ಮುಟ್ಟಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಈ ಬಾರಿ ಲಕ್ಷ ದೀಪೋತ್ಸವ ನಡೆಸಿ ಸಚಿವ ರಾಜಶೇಖರ ಮೂರ್ತಿ ಅವರನ್ನು ಆಹ್ವಾನಿಸಿ ಸ್ಥಿತಿಯ ವಿವರಣೆ ನೀಡಲಾಗಿದೆ. ಇದಕ್ಕಾಗಿ 2. 25

ಕೋಟಿ ರೂ. ಪಡೆಯುವ ಪ್ರಯತ್ನ ನಡೆದಿರುವದನ್ನು ಪ್ರಸ್ತಾಪಿಸಿರುವ ಅವರು
ಇದೆಲ್ಲವೂ ಟ್ರಸ್ಟ ಮಂಡಳಿ ಪ್ರಯತ್ನದಿಂದ ಆಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.
ಐಕ್ಯಮಂಟಪ ರಕ್ಷಣೆ ಕೆಲಸ ಸರ್ಕಾರದಿಂದ ನಡೆಯುತ್ತಿರುವದರಿಂದ ಇದಕ್ಕಾಗಿ
ವಂತಿಕೆ ಸ್ವೀಕರಿಸುವ ವಿಚಾರವನ್ನು ಸ್ಪಷ್ಟವಾಗಿ ವಿರೋಧಿಸಲಾಗಿದೆ. ಯಾವ ದೇಣಿಗೆ
ನೀಡದಿರಲು ಕೋರಲಾಗಿದೆ ಎಂದಿದ್ದಾರೆ.
ಬಿ. ಡಿ. ಜತ್ತಿ, ಚಂದ್ರಶೇಖರ ಪೂಜ್ಯಶರಣಬಸಪ್ಪ ಅಪ್ಪ ಅವರು ದೇವಸ್ಥಾನದ
ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆಂದು ಅವರು ಹೇಳಿದ್ದಾರೆ.
ಟ್ರಸ್ಟ ಮಂಡಳಿ ಆನುವಂಶಿಕವಾಗಿದ್ದು ದತ್ತಿ ಇಲಾಖೆ ಮನ್ನಣೆ ನೀಡಿದೆ. ಆದರೆ
ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇಲ್ಲಸಲ್ಲದ ಪ್ರಚಾರ ಮಾಡುತ್ತ, ಬಸವಣ್ಣನವರ
ಹೆಸರಿನಲ್ಲಿ ಭಕ್ತ–ಭಕ್ತರಲ್ಲಿಯೇ ಒಡಕು ಹುಟ್ಟಿಸುತ್ತಿದ್ದಾರೆಂದು ಪ್ರತ್ಯಾರೋಪ ಮಾಡಿ
ರುವ ಅವರು ಜನತೆ ಇದರತ್ತ ಗಮನ ನೀಡಬಾರದೆಂದು ಕೋರಿದ್ದಾರೆ.
ಬಸವ ಧರ್ಮಪೀಠ ಸ್ಥಾಪಿಸಿ ಮಹಾ ಜಗದ್ಗುರು ಎಂದು ಸ್ವಯಂ ಘೋಷಿಸಿ
ಕೊಂಡು ಈಗ ರಾಜಕೀಯ ಪಕ್ಷ ರಚಿಸುವ ವಿಚಾರ ಇಡುತ್ತಿರುವದು ಅವರ ಉದ್ದೇಶ
ಏನು ಎಂಬುದನ್ನು ತಿಳಿಸುತ್ತದೆ ಎಂದು ಎಸ್. ಜಿ. ಪಾಟೀಲ ವ್ಯಂಗ್ಯವಾಡಿದ್ದಾರೆ.

(ಸಂಯುಕ್ತ ಕರ್ನಾಟಕ ದಿ. 22-1-1993)

ಪ್ರಥಮ ಬಸವ ಧರ್ಮ ಮಹಾಧಿವೇಶನ

ಶರಣ ಮೇಳದ ನಿಮಿತ್ತ ದಿ. 12-1-1993 ರಂದು ಚಿಂತನಗೋಷ್ಠಿ
ನಡೆದಾಗ, ಬಸವ ಧರ್ಮ ಸಂಸತ್ ಸದಸ್ಯರು ಒಮ್ಮತದ ನಿರ್ಣಯ ಕೈಗೊಂಡರು.
ಅದೆಂದರೆ, ಪ್ರತಿ ವರ್ಷವೂ (ಶರಣ ಮೇಳದಲ್ಲಿ ಅಲ್ಲದೆ) ಒಂದು ರಾಷ್ಟ್ರೀಯ ಬಸವ
ದಳದವರು ಒಂದು ಸಮಾವೇಶವನ್ನು ಕರೆದು, ಉಳಿದೆಲ್ಲ ಬಸವ ಧರ್ಮ ಸಂಸತ್
ಸದಸ್ಯರನ್ನು ಮತ್ತು ರಾಷ್ಟ್ರೀಯ ಬಸವ ದಳದ ಸದಸ್ಯರನ್ನು ಆಹ್ವಾನಿಸಬೇಕು ಎಂಬು
ದಾಗಿ ಇದಷ್ಟು ಮಾತ್ರವಲ್ಲದೆ ಬೃಹತ್ ಪ್ರಮಾಣದಲ್ಲಿಯೇ ಬಸವ ಧರ್ಮೀಯರ
ಮಹಾಧಿವೇಶನ ನಡೆಸಲು ತಮಿಳುನಾಡಿನ ಸಕಲಟ್ಟಿ ರಾಷ್ಟ್ರೀಯ ಬಸವ ದಳದವರು
ಮುಂದೆ ಬಂದಿದ್ದಾರೆ. ಹೀಗಾಗಿ ಪ್ರಥಮ ಬಸವ ಧರ್ಮ ಮಹಾಧಿವೇಶನವು
1993 ರ ಮೇ 8–9 ರಂದು ತಮಿಳು ನಾಡಿನ ನೀಲಗಿರಿ ಜಿಲ್ಲೆಯ ಊಟಿ (ಉದಕ
ಮಂಡಲ) ಯ ಪರಿಸರದಲ್ಲಿ ನಡೆಯಲಿದೆ. ಊಟಿಯ ಪರಿಸರದ ಪಾಲಾಡ್ ಎಂಬಲ್ಲಿ
ನಡೆಯಲಿರುವ ಈ ಸಮ್ಮೇಳನಕ್ಕೆ ಅಧಿಕಧಿಕ ಸಂಖ್ಯೆಯಲ್ಲಿ ಶರಣ ಬಂಧುಗಳು ಬಂದು
ಪಾಲ್ಗೊಳ್ಳಬೇಕೆಂದು ಕೋರುತ್ತೇವೆ.

— ವಿಶೇಷ ವಿವರಗಳಿಗಾಗಿ ವಿಳಾಸಗಳು —

ಶರಣ. ನಿಜಗುಣಾನಂದಸ್ವಾಮಿ
ಬಸವ ಮಂಟಪ, 2035
II ಬ್ಲಾಕು, 20 ನೆಯ ಮೆಯಿನ್
ರಾಜಾಜಿನಗರ, ಬೆಂಗಳೂರು-560010
ಫೋನ : 325335

Sharana R. Chandrashekhar
secretary, Rashtreeya Basava Dala
At-Sakalatty
Po-Sogatorai, Dt-Nilgiri
Tamil Nadu State
Phone: Off : 20699, Res : 84312, STD: 04264

ಕಾರ್ಯಕರ್ತರ ಲೋಪ

ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳಿಗೆ ಸ್ವಾಗತ, ಸಭಾ ನಿರ್ವಹಣೆ, ಮಾಲಾರ್ಪಣೆ, ಶರಣು ಸಮರ್ಪಣೆ ಮುಂತಾದ ಹೊಣೆಗಾರಿಕೆ ವಹಿಸಿ ಕೊಡುವ ಉದ್ದೇಶ ನನ್ನದಾಗಿತ್ತು. ವೇದಿಕೆಯ ಮೇಲಿದ್ದ ಕೆಲವು ಕಾರ್ಯಕರ್ತರು ಮುಖ ಪರಿಚಯವಿಲ್ಲದ ಬೇರೆ ಬೇರೆ ಊರುಗಳ ರಾ. ಬ. ದಳಗಳ ಪದಾಧಿಕಾರಿಗಳನ್ನು ಕರ್ತವ್ಯ ಪಾಲನೆಗೆ ಬಿಡಲಿಲ್ಲ ಎಂಬುದು ಐಗಳಿಯ ಶರಣ ಕೂಡಲ ಸಂಗಮ ಉಮರಾಣಿಯವರ ಪತ್ರದಿಂದ ತಿಳಿದು ವಿಷಾದವೆನಿಸಿತು. ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳೋಣ. ಮತ್ತು ಆಮಂತ್ರಣ ಪತ್ರಿಕೆಯಲ್ಲಿ ಮುದ್ರಣವಾದ ಯಾದಿಯಂತೆ ಸಂಬಂಧಪಟ್ಟ ಶರಣರು ಆಯಾ ಅಧಿವೇಶನಕ್ಕೆ ಮೊದಲು ಬಾದು ಸಿದ್ಧರಾಗಿರಬೇಕು. ಯಾರಾದರೂ ಕಾರ್ಯಕರ್ತರು ಅಡ್ಡಿಪಡಿಸಿದರೆ ತಕ್ಷಣವೇ ನಮ್ಮ ಗಮನಕ್ಕೆ ತರಬೇಕು. ಸಂಕೋಚ ಪಡುವ ಕಾರಣವಿಲ್ಲ.

ದಾನಿಗಳಿಗೆ ಸೂಚನೆ

ಕೆಲವು ಶರಣರು ಶರಣ ಮೇಳಕ್ಕೆಂದು ಮತ್ತು ಬಸವ ಧರ್ಮ ಪೀಠಕ್ಕೆಂದು ಅಲ್ಲೇ ಬಂದು ಕಾಣಿಕೆ ಕೊಡುತ್ತಾರೆ. ತಕ್ಷಣ ಘೋಷಿಸುತ್ತೇವೆ. ಕೆಲವೊಮ್ಮೆ ಯಾರದ್ದಾದರೂ ಭಾಷಣ ನಡೆಯುವಾಗ ತಂದು ಕೊಡುತ್ತಾರೆ. ನಾವು ಘೋಷಿಸಲು ಸಮಯಾವಧಾನ ನೋಡಬೇಕಾಗುತ್ತದೆ. ಮತ್ತು ಕೆಲವರು ನಾವು ಆ ಊರಲ್ಲಿ ಕೊಟ್ಟಿದ್ದೆವು. ಈ ಊರಲ್ಲಿ ಕೊಟ್ಟಿದ್ದೆವು ಎಂದು ಚೀಟಿ ಕಳಿಸುತ್ತಾರೆ. 500, 1000 ವಿವಿಧ ಊರುಗಳಲ್ಲಿ ಕೊಟ್ಟ ಸಂಖ್ಯೆ ಬಹಳ ಇರುತ್ತದೆ. ಅವನ್ನೆಲ್ಲ ಸಭೆಯಲ್ಲಿ ಹೇಳತೊಡಗಿದರೆ ಭಾಷಣ ಕಾರ್ಯಕ್ರಮವೇ ಸಾಗದಾಗುತ್ತದೆ. ಆದ್ದರಿಂದ ದಾನಿಗಳು ಬೇಸರಪಡಬಾರದು, 500 ರೂ ಮತ್ತು ಮೇಲೆ ದೇಣಿಗೆ ಕೊಟ್ಟವರ ಹೆಸರನ್ನು ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗುವುದು. ಅದರಲ್ಲಿ ಬರದೆ ಇದ್ದಾಗ ನೆನಪಿನ ಓಲೆ ಬರೆಯಬೇಕು. ಸಭೆಯಲ್ಲಿ ಹೇಳದಿದ್ದ ಮಾತ್ರಕ್ಕೆ ಬೇಸರಪಡಬಾರದು.

ತಟ್ಟೆಗಳ ದಾನಿಗಳ ಅಸಾಮಾನ್ಯ ಉಪಕಾರ

ಈ ಬಾರಿಯ ಶರಣ ಮೇಳಕ್ಕೆ ಜನರು ಅಗಾಧ ಸಂಖ್ಯೆಯಲ್ಲಿ ನೆರೆದರೂ ಪ್ರಸಾದ ವಿತರಣೆ ಸಾಂಗವಾಗಿ ನೆರವೇರಲು ಮುಖ್ಯ ಕಾರಣಗಳಲ್ಲಿ ಒಂದು ಊಟದ ತಟ್ಟೆಗಳು. ಜನ ಬಾಹುಳ್ಯ ಜಾಸ್ತಿಯಾದ್ದರಿಂದ ಊಟದ ಪೆಂಡಾಲವನ್ನು ಸಹ ವಸತಿಗೆ ಕೊಡುವ ಅನಿವಾರ್ಯತೆ ಒದಗಿತು. ಆದರೆ ತಟ್ಟೆಗಳು ಇದ್ದುದರಿಂದ ಶರಣ ಬಂಧುಗಳು ತಾವೇ ನೀಡಿಸಿಕೊಂಡು ಸ್ಥಳಾವಕಾಶ ನೋಡಿಕೊಂಡು ಪ್ರಸಾದ ಸ್ವೀಕಾರ ಮಾಡಿದ್ದರಿಂದ ಸಾಂಬಾರಿನ ರುಚಿಯನ್ನು ಸವಿದರು, ನೀಡುವ ಸಮಸ್ಯೆಯೂ ಕಡಿಮೆ ಯಾಯಿತು. 29-10-1991 ರಂದು ತಟ್ಟೆ ಸಂಗ್ರಹಿಸುವ ನಿರ್ಧಾರ ಮಾಡಿದ ಮೇಲೆ ಈ ಅವಧಿಯಲ್ಲಿ ಸುಮಾರು 900 ತಟ್ಟೆ ಬಂದಿವೆ. ಮತ್ತಷ್ಟು ಬಾಡಿಗೆಗೆ ತಂದೆವು. ಎಲೆಗಳನ್ನು ಉಪಯೋಗಿಸಲಾಯಿತು. ಇನ್ನಷ್ಟು ತಟ್ಟೆ ಸಂಗ್ರಹಿಸಿದರೆ ಬಾಡಿಗೆಗೆ ತೆಗೆದುಕೊಳ್ಳುವುದು ತಪ್ಪುತ್ತದೆ. ಎಲೆಯ ಉಪಯೋಗವನ್ನು ನಿಲ್ಲಿಸಬಹುದು. ಆದ್ದರಿಂದ ಶರಣರು ಹೆಚ್ಚು ಹೆಚ್ಚು ತಟ್ಟೆಗಳನ್ನು ದೇಣಿಗೆ ಕೊಡುವ ಮನಸ್ಸು ಮಾಡಬೇಕು. ಅಥವಾ ಹಣ ರೂಪದಲ್ಲಿ ಕಾಣಿಕೆ ಕೊಟ್ಟರೂ ಅವರು [illegible]

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ.

ಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ "ಬಸವ ಗಂಗೋತ್ರಿ"ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೆರಿಯ ಆರೋವಿಲ್ಲೆ ತರಹ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12 ನೆಯ ಶತಮಾನದ ಶರಣರ ಸಾಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳುಳ್ಳ ನಿವೇಶನಗಳು ಲಭ್ಯವಾಗಲಿವೆ.

   ವರ್ಗ 'ಎ'–40'×60'-ವಿಸ್ತೀರ್ಣ 2400 ಚ. ಅಡಿಗಳು.

   ವರ್ಗ 'ಬಿ'–30'×40'-ವಿಸ್ತೀರ್ಣ 1200 ಚ. ಅಡಿಗಳು.

   ನಿವೇಶನಗಳಲ್ಲಿ ಬೆಳೆದ ತೆಂಗಿನ ಮರಗಳು ಬರುವಂತೆ ಯೋಜಿಸಲಾಗುವುದರಿಂದ [illegible] ಆಗಬಹುದು

ಭೂಮಿಯ ಆಕಾರಕ್ಕನುಗುಣವಾಗಿ ನಿವೇಶನಗಳು ಇನ್ನೂ ಕಡಿಮೆ ಅಳತೆಯುಳ್ಳವುಗಳೂ ಆಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ಅಭಿವೃದ್ಧಿಪಡಿಸಿದ ಸ್ಥಿತಿಯಲ್ಲಿರುವ ನಿವೇಶನಗಳನ್ನು ವಿತರಿಸಲಾಗುವುದು.

3. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ 1000-00 (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

4. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವ ಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 100-00 (ಒಂದು ನೂರು) ರೂಗಳನ್ನು ಎಂ. ಓ. ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :

ಸೋದರಿ ಕಸ್ತೂರಿ, ವಿಶ್ವಕಲ್ಯಾಣ ಮಿಷನ್,
ಬಸವ ಗಂಗೋತ್ರಿ ನಗರ, ಕುಂಬಳಗೋಡು-560074
ಬೆಂಗಳೂರು ದಕ್ಷಿಣ ತಾಲ್ಲೋಕು, ಬೆಂಗಳೂರು ಜಿಲ್ಲೆ.

ಶರಣ ಮೇಳ ಪ್ರಚಾರದ ಸ್ಲೈಡ್ ಕುರಿತು ಸೂಚನೆ

ಶರಣ ಮೇಳ ಪ್ರಚಾರದ ಸಲುವಾಗಿ ಸಿನಿಮಾ ಸ್ಲೈಡು ಮಾಡಿಸಿ ಕೊಡಲಾಗಿತ್ತಷ್ಟೆ. ಪ್ರತಿ ವರ್ಷವೂ ಒಂದೇ ಸ್ಥಳದಲ್ಲಿ ಅದೇ ದಿನಾಂಕಗಳಲ್ಲಿ ಶರಣ ಮೇಳ ನಡೆಯುವುದರಿಂದ ಅನವಶ್ಯಕ ಖರ್ಚು ತಪ್ಪಿಸಲು ಈ ಬಾರಿ ಸ್ಲೈಡುಗಳನ್ನು ಇಸವಿ ಕಾಣಿಸದೆ ಪ್ರತಿವರ್ಷದ ಜನವರಿ 12, 13, 14, 15, ರಂದು ಶರಣ ಮೇಳ ಎಂದು ಮಾಡಿಸಲಾಗಿದೆ. ಇವು ಪ್ರತಿವರ್ಷವೂ ಉಪಯೋಗಕ್ಕೆ ಬರುವವು. ಆದ್ದರಿಂದ ಕಾರ್ಯಕರ್ತರು ಈ ಸ್ಲೈಡುಗಳನ್ನು ಸಿನೆಮಾ ಮಂದಿರಗಳಿಂದ ವಾಪಸ್ಸು ಪಡೆದು ತಮ್ಮ ಬಳಿ ಇಟ್ಟುಕೊಂಡು, ಪುನಃ ಅಕ್ಟೋಬರ ನಂತರ ಚಿತ್ರಮಂದಿರಗಳಿಗೆ ಪ್ರದರ್ಶನಕ್ಕೆ ಕೊಡಬೇಕು, ವ್ಯರ್ಥ ಮಾಡಬಾರದು.

ಬಸವ ಧರ್ಮಪೀಠಕ್ಕೆ ದೇಣಿಗೆ ನೀಡಿದ ಸದಸ್ಯರು ಕಟ್ಟಡ ನಿಧಿಗೆ.

(ನವಂಬರ 1992 ರ ಸಂಚಿಕೆಯಿಂದ ಮುಂದುವರಿದುದು)

ಶರಣರುಗಳಾದ :

1. ಅಧ್ಯಕ್ಷರು ಮತ್ತು ಸದಸ್ಯರು, ಶಿವಯೋಗಿ ಮುರುಗೇಂದ್ರ ಅರ್ಬನ್ ಕೋಆಪರೇಟಿವ್ ಬ್ಯಾಂಕ್, ಅಥಣಿ. 60001-00
2. ಪ್ರಕಾಶ ರಾಜಶೇಖರ ಮಹಾಜನ, ಅಥಣಿ 40001-00
3. ಸದ್ಭಕ್ತ ಮಂಡಳಿ, ನದಿ ಇಂಗಳಗಾಂವ, ತಾ-ಅಥಣಿ 40001-00
4. ಮಲ್ಲಪ್ಪ ಶಿವಲಿಂಗಪ್ಪ ಬಾಗೇವಾಡಿ, ಹಾರೂಗೇರಿ. 40001-00
5. ಶಂಕರಪ್ಪ ಮಲ್ಲಪ್ಪ ಪಡಶೆಟ್ಟಿ, ಗುಲಬರ್ಗಾ 40001-00
6. ದರಿಯಪ್ಪ ಗಿರಿಯಪ್ಪ ಚೌಗಲಿ, ಖವಟಕೊಪ್ಪ 30001-00
7. ರಾಮಪ್ಪ ಪರಪ್ಪ ದೇಸ್ಯೊಟಿ, ತೇರದಾಳ 10001-00
8, ಬಸಪ್ಪಣ್ಣ ವೀರಪ್ಪ ಯಾದವಾಡ, ತೇರದಾಳ 10001-00
9. ಡಾ|| ರೇವಣೇಶ ಬಾಳಪ್ಪ ಕಾಲತಿಪ್ಪಿ, ತೇರದಾಳ 10001-00
10. ಅಲ್ಲಪ್ಪ ಸಾತಪ್ಪ ಮುಕುಂದ, ತೇರದಾಳ 10001-00
11. ದಾಕ್ಷಾಯಿಣಿ ಲಕ್ಷ್ಮಣ ಐಗಳಿ, ಅಥಣಿ 5001-00
12. ಈರಪ್ಪ ಸಂಗಪ್ಪ ಗೋಟಕಂಡಿ, ಅಥಣಿ 5001-00
13. ಸದಾಶಿವಪ್ಪ ಬೆಳಗರಹಳ್ಳಿ, ಅಥಣಿ 5001-00
14. ಗುಪ್ತಕಾಣಿಕೆ. 5001-00
15. ಸುನಂದಾ ಭೂಪಾಲ ಮಾಳಿ, ಅಥಣಿ 5001-00
16. ಡಾ|| ಪ್ರಭಾಕರ ರುದ್ರಪ್ಪಣ್ಣ ಅವರಾದಿ, ತೇರದಾಳ 5011-00
17. ರಮೇಶ್ ರುದ್ರಪ್ಪಣ್ಣ ಅವರಾದಿ, ತೇರದಾಳ 2011-00
18. ಚನ್ನಮಲ್ಲಪ್ಪ ಪರಪ್ಪಾ ಹಂಜಿ, ತೇರದಾಳ 2500-00
19. ಜಿ. ವಿ. ಪ್ರಸಾದರಾವ, ಜಾಲಿಹಾಳ ಕ್ಯಾಂಪ್ 6000-00
20. ಶರಣಪ್ಪ ಸಂಗಪ್ಪ ಕೊಕಟನೂರು, ತೇರದಾಳ 2500-00

ಶರಣ ಮೇಳದ ದಾಸೋಹನಿಧಿಗೆ ಕೊಟ್ಟವರು

1. ಶರಣೆ. ಮಹಾದೇವಮ್ಮ ಚನ್ನಬಸಯ್ಯ ಗೊಗ್ಗಾ, ಹೊಸಪೇಟೆ. 5001
2. ಶರಣೆ. ಲಲಿತಮ್ಮ ಮತ್ತು ಎಸ್. ಗಂಗಾಧರ, ಬೆಂಗಳೂರು 5001
3. ಶರಣ. ಪುಂಡಲೀಪ್ಪ ಮಲ್ಲಶೆಪ್ಪಟ್ಟೆ ಗುಮ್ಮ, ಬೀದರ 5001

ದಾಸೋಹ ನಿಧಿಗೆ 1111-00 ರೂ. ಸಲ್ಲಿಸಿದವರು.

ಕ್ರ. ಸಂ.	ಹೆಸರು	ಊರು
	ಶರಣರುಗಳಾದ :	
1276.	ಆರ್, ಆರ್. ರುದ್ರಪ್ಪ	ವಿಜಯಪುರ
1277,	ಆರ್. ಬಸವರಾಜ ಮತ್ತು ಮಕ್ಕಳು	ಬೆಂಗಳೂರು
1278,	ಪಿ. ಶಿವಣ್ಣ	ಮೈಸೂರು
1279,	ಬಾಬಣ್ಣ ನಾಗಪ್ಪ ಶಿವಮೂರ್ತಿ	ಹಳ್ಯಾಳ
1280,	ಬಾಲಚಂದ್ರ ಬಸವಪರಪ್ಪ ಮಂಗಸೂಳಿ	ತೇರದಾಳ
1281,	ಮಲ್ಲಪ್ಪ ಬಸವಲಿಂಗಪ್ಪ ಕಡಕೋಳ	ತೇರದಾಳ
1282,	ಶಂಕ್ರಪ್ಪ ಅಂದಾನಪ್ಪ ಉಪ್ಪಿನ	ತೇರದಾಳ
1283,	ಮುರಿಗೆಪ್ಪಾ ಬಸಪ್ಪಾ ಪುರಾಣಿಕ	”
1284,	ರಾಚಪ್ಪಾ ಮುಕರಿ	”
1285,	ಎನ್. ಟಿ. ಪಾಟೀಲ	”
1286,	ಮುತ್ತಪ್ಪ ಕಲ್ಲಪ್ಪ ಮಿರ್ಜಿ	”
1287.	ಡಾ॥ ಸದಾನಂದ ಸ್ವಾಮಿ	ಬೆಂಗಳೂರು
1288,	ಶರಣಪ್ಪಾ ಸಂಗಪ್ಪಾ ಕೊಕಟನೂರು	ಬಿಜಾಪುರ
1289.	ಗುರುಪಾದಪ್ಪ ಬಾಬು ಮನ್ನಿ	ತೇರದಾಳ
1290.	ಅಪ್ಪಾರಾವ್ ಬಾಬುರಾವ್ ಹಜಾಕಿ	ತೇರದಾಳ
1291,	ಸುರೇಶ ಸುಭಾಷ್ ರೇಣಕೆ	ತೇರದಾಳ
1292,	ಮುರಿಗೆಪ್ಪ ವಿರುಪಾಕ್ಷಪ್ಪ ಪಂಚಾಕ್ಷರಿ	ತೇರದಾಳ
1293,	ಚಂದ್ರಕಾಂತ ಗಂಗಾಧರ ಮಹಾಬಲಶೆಟ್ಟಿ	ತೇರದಾಳ
1294,	ಪರಪ್ಪಾ ಆಲಗೊಂಡಪ್ಪಾ ಕಾಲತಿಪ್ಪಿ	”
1295,	ಪರಪ್ಪ ಭೀಮಪ್ಪ ಕಾಲತಿಪ್ಪಿ	ತೇರದಾಳ
1296,	ಮಲಕಪ್ಪಾ ರಾಯಪ್ಪಾ ಕಾಲತಿಪ್ಪಿ	ತೇರದಾಳ
1297.	ಚನ್ನಮಲ್ಲಪ್ಪ ಪರಪ್ಪಾ ಹಂಜಿ	”
1298,	ಮಹಾದೇವಮ್ಮಾ ಚನ್ನಬಸಯ್ಯಾ ಗೊಗ್ಗ	ಹೊಸಪೇಟ
1299,	ಸುರೇಂದ್ರ ಗುರುಸಿದ್ದಪ್ಪಾ ಹುತ್ತಾದರ	ತೇರದಾಳ
1300.	ಶಿವಗಂಗವ್ವಾ ಈಶ್ವರಪ್ಪಾ ಯಾದವಾಡ	ತೇರದಾಳ
1301.	ಈಶ್ವರಪ್ಪ ಅಲ್ಲಪ್ಪಾ ಕರ್ಲಟ್ಟಿ	ಸಸಾಲಟ್ಟಿ
1302.	ಮುರಿಗೆಪ್ಪಾ ಮಲಕಾಜಪ್ಪಾ ಯಾದವಾಡ	ತೇರದಾಳ

ಕ್ರ. ಸಂ.	ಹೆಸರು	ಊರು
1303.	ವಿ. ಎಂ. ನ್ಯಾಮಗೌಡರ, ಪ್ರಿನ್ಸಿಪಾಲರು	ತೇರದಾಳ
1304.	ಪರಪ್ಪ ಮಲ್ಲಪ್ಪಾ ಜಡೀ	”
1305.	ದುಂಡಪ್ಪಾ ಫಕೀರಪ್ಪಾ ಸುಬೇದಾರ	”
1306.	ರಾಮಪ್ಪ ಗಂಗಪ್ಪಾ ಅಮ್ಮಣಗೀ	”
1307.	ನಿಂಗಪ್ಪ ಕೇದಾರಿ ಮಾಲಗಾಂವಿ	”
1308.	ಆರ್. ಬಿ. ಹೆಬ್ಬಳ್ಳಿ	ಬಾಂಬೆ
1309.	ಹೆಚ್. ನಂಜಪ್ಪ	ಭದ್ರಾವತಿ
1310.	ಬಿ. ಆರ್. ವೆಂಕಟರೆಡ್ಡಿ	ಬಿಜಾಪುರ
1311.	ಬಿ. ಎಸ್. ರುದ್ರಪ್ಪ	ಬಿದರೆ
1312.	ಎ. ಮಲ್ಲಿಕಾರ್ಜುನರಾವ್	ಶಿವಮೊಗ್ಗ
1313.	ತೋಟಪ್ಪ ದೇವೆಂದ್ರಪ್ಪ ಮುಮ್ಮಿಗಟ್ಟಿ	ಧಾರವಾಡ
1314.	ಕಾಶೀನಾಥರಾವ್ ಪಂಚಪ್ಪ ಶಿವಣಕಾರ	ಕಮಲನಗರ
1315.	ಬಸವಣ್ಣೆಮ್ಮ ರುದ್ರಪ್ಪ ದೊಡ್ಮನಿ	ಧಾರವಾಡ
1316.	ಮಾನಸಿಂಗ್ ವಸಂತರಾವ್ ನಿಂಬಾಳಕರ್	ಮುಧೋಳ
1317.	ಜಂಬಣ್ಣಾ ಗಂಗಾಧರಪ್ಪಾ ರಾಜಮಲ್ಲಿಗಿ	ಹುಬ್ಬಳ್ಳಿ
1318.	ಮಲ್ಲಪ್ಪ ಬಸಲಿಂಗಪ್ಪ ಕಡಕೋಳ	ತೇರದಾಳ
1319.	ಈಶ್ವರಪ್ಪ ಅಲ್ಲಪ್ಪ ಕರ್ಲಟ್ಟಿ.	ಸಾಸಲಟ್ಟಿ
1320.	ಶೇಖರಪ್ಪ ಶಿವಲಿಂಗಪ್ಪ ಕಚವಿ	ಹಿರೇಕೆರೂರು
1321.	ಶೈಲಜಾ ಚಂದ್ರಪ್ಪ ಖಂಡಿಬಾಗೂರು	”
1322.	ಜಬರ ಗಿರಿಕೇರ, ಗಿರಿಜೆ ಸ್ವಾಮಿ	”
1323.	ಸಿ. ಸತೀಶ	ಬೆಂಗಳೂರು
1324.	ಹನುಮಯ್ಯ	ಮೈಸೂರು
1325.	ಮಲ್ಲಿಕಾರ್ಜುನ ಮಾಳಜಿ,	ಬೆಂಗಳೂರು
1326.	ಗಂಗಮ್ಮ ತಾಯಿಯವರು	ಮೈಸೂರು
1327.	ಲಿಂಗನಗೌಡ ಈರನಗೌಡ ಬಿರಾದಾರ,	ಮುಳವಾಡ

ಈ ಎಲ್ಲ ಶರಣ ಬಂಧುಗಳಿಗೆ ವಿಶ್ವಗುರು ಮಂತ್ರ ಪುರುಷ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದ ನೀಡಲೆಂದು ಹಾರೈಸುವೆವು.

ವಿ. ಸೂ. ಕಾಣಿಕೆ ಕೊಟ್ಟಿದ್ದು, ಹೆಸರು ಪ್ರಕಟವಾಗದಿದ್ದರೆ ಮರೆಯದೆ ನೆನಪಿನ ಓಲೆ ಬರೆಯಬೇಕು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಹುಣ್ಣಿಮೆಯಂದು ಜ್ಞಾನದಾಸೋಹ ಕಾರ್ಯಕ್ರಮ

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠದ ಆಶ್ರಯದಲ್ಲಿ ಮಾಸಿಕ ಜ್ಞಾನದಾಸೋಹ ಕಾರ್ಯಕ್ರಮವನ್ನು ಆರಂಭಿಸಲಾಗುತ್ತಿದೆ.

ಸುತ್ತಲಿನ ಗ್ರಾಮ ಮತ್ತು ಪಟ್ಟಣಗಳ ಜನರಿಗೆ ಜ್ಞಾನ ದಾಸೋಹ ಲಭ್ಯವಾಗಲೆಂದು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಪ್ರತಿ ಹುಣ್ಣಿಮೆಯಂದು ಸಂಜೆ 7 ರಿಂದ ರಾತ್ರಿ 10-30 ರ ವರೆಗೆ ಪ್ರಾರ್ಥನೆ, ಪ್ರವಚನ, ವಚನ ಚಿಂತನ ಮತ್ತು ಭಜನೆ ಮಹಾಮನೆ ಮಹಾಮಠದಲ್ಲಿ ನಡೆಯಲಿವೆ.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು, ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿಯವರು, ಪೂಜ್ಯಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು, ಶರಣ. ಚನ್ನಬಸವಾನಂದರು, ಶರಣೆ. ಜಯಮ್ಮನವರು ಸಮಯಾವಕಾಶ ನೋಡಿಕೊಂಡು ಕಾರ್ಯಕ್ರಮವನ್ನು ನಡೆಸಿಕೊಡುವರು.

ರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಭಕ್ತಾದಿಗಳು ತಮ್ಮ ಸ್ವಂತ ವಾಹನ ವ್ಯವಸ್ಥೆಯಿದ್ದರೆ ಪ್ರಸಾದಾನಂತರ ಮರಳಿ ಹೋಗಬಹುದು. ಉಳಿಯುವವರಿಗೆ ಊಟ-ವಸತಿಗಳ ವ್ಯವಸ್ಥೆ ಇರುತ್ತದೆ. ಹುಣ್ಣಿಮೆಯ ರಾತ್ರಿಯಂದು ಪ್ರವಚನ ಮಂಗಲವಾದ ನಂತರ ಅನ್ನದಾಸೋಹ ಏರ್ಪಡಿಸಲಾಗುತ್ತದೆ.

ಈ ದಾಸೋಹಕ್ಕೆ ಜೋಳ, ಅಕ್ಕಿ ಮುಂತಾದ ಧಾನ್ಯಗಳನ್ನು ಕೊಡುವವರು ಕೊಡಬಹುದು. ಹಣದ ರೂಪದಲ್ಲಿ ಕೊಡುವವರೂ ಕೊಡಬಹುದು. ಒಂದು ದಿವಸದ ಸಂಪೂರ್ಣ ವೆಚ್ಚವನ್ನು ಭರಿಸುವ ದಾನಿಗಳಿಗೂ ಅವಕಾಶ ಉಂಟು. ಅಥವಾ ಇಬ್ಬರು ಮೂವರು ದಾನಿಗಳು ಸೇರಿಯೂ ಖರ್ಚನ್ನು ಭರಿಸಬಹುದು. ಆಸಕ್ತರು ಮೊದಲೇ ಸಂಪರ್ಕಿಸಬೇಕು.

ದವನದ ಹುಣ್ಣಿಮೆಯಂದು ಪ್ರಾರಂಭೋತ್ಸವ

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯಸನ್ನಿಧಿಯಲ್ಲಿ ಜಗನ್ಮಾತಾ ಅಕ್ಕಮಹಾದೇವಿಯ ಜಯಂತಿ ಇರುವ ದವನದ ಹುಣ್ಣಿಮೆಯಂದು, 6-4-1993 ರಂದು ಪ್ರಥಮ 'ಜ್ಞಾನ ದಾಸೋಹ' ಆರಂಭವಾಗುತ್ತದೆ.

ಕೂಡಲ ಸಂಗಮದ ಸುತ್ತಲಿನ ಗ್ರಾಮ-ಪಟ್ಟಣಗಳ ಜನರಿಗಾಗಿ ಪ್ರತಿ ಹುಣ್ಣಿಮೆಯಂದು ಇಡಲಾಗಿರುವ ಈ ಜ್ಞಾನ ದಾಸೋಹದಲ್ಲಿ ಭಾಗಿಗಳಾಗಿ ಸಮಸ್ತ ಜನರೂ ಜ್ಞಾನ ಪ್ರಸಾದವನ್ನುಂಡು ಧನ್ಯರಾಗಬೇಕೆಂದು ಕೋರುತ್ತೇವೆ.

ಸೋದರಿ ಜಯಮ್ಮ
ಮೇನೇಜರ್, ಬಸವ ಧರ್ಮ ಪೀಠ(ರಿ), ಮಹಾಮನೆ ಮಹಾಮಠ

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ,

ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ನಡೆದ ಆರನೆಯ ಶರಣ ಮೇಳದ ಸಮಾರೋಪ ಸಮಾರಂಭದಲ್ಲಿ ದಿ. 15-1-93 ರಂದು ಕೈಗೊಂಡ ನಿರ್ಣಯಗಳು.

೧. ಕುಟುಂಬ ನಿಯಂತ್ರಣ ಸಲ್ಲದು.

ಧಾರ್ಮಿಕ ಹಿನ್ನೆಲೆಯಿಂದ ನೋಡಿದರೆ ಯಾವ ಸೇಶ್ವರವಾದೀ ಧರ್ಮವೂ ಕುಟುಂಬ ನಿಯಂತ್ರಣಕ್ಕೆ ಒಪ್ಪಿಗೆ ನೀಡದು. ಏಕೆಂದರೆ ದೇವರ ಅಸ್ತಿತ್ವದಲ್ಲಿ ನಂಬಿಕೆ ಇಟ್ಟವರು, ಅವನ ಸೃಷ್ಟಿಗೆ ವಿರುದ್ಧವಾಗಿ ಹೋಗರು. ಗೃಹಸ್ಥ ಜೀವನದ ಮುಖ್ಯ ಗುರಿ ಮತ್ತು ಕರ್ತವ್ಯ ಸಂತಾನಾಭಿವೃದ್ಧಿ ಮತ್ತು ಉತ್ತಮ, ಸುಸಂಸ್ಕೃತ ಜನಾಂಗ ನಿರ್ಮಾಣ. ಆದ್ದರಿಂದ ದೇವರ ಇಚ್ಛೆಯಂತೆ ಮಕ್ಕಳು ಆಗುವವೆಂದೇ ಧಾರ್ಮಿಕ ನಂಬಿಕೆ. ಹೀಗಿದ್ದೂ ಸಹ ಇಲ್ಲಿಯವರೆಗೆ ಒಟ್ಟಾರೆ ಹಿಂದೂಗಳು ರಾಷ್ಟ್ರದ ಹಿತದೃಷ್ಟಿಯಿಂದ ಕುಟುಂಬ ನಿಯಂತ್ರಣಕ್ಕೆ ಒಪ್ಪಿಗೆ ನೀಡಿದ್ದಾರೆ. ಮಿತಿ ಮೀರಿದ ಜನ ಸಂಖ್ಯಾ ಸ್ಫೋಟದಿಂದ ನಿಸರ್ಗ ಸಂಪತ್ತಿಗೆ ಧಕ್ಕೆ ಬಂದು ಆಹಾರದಲ್ಲಿ ಕೊರತೆ ಸಂಭವಿಸಬಹುದೆಂದು, ಸಂತಾನೋತ್ಪತ್ತಿಗೆ ಮಿತಿಯನ್ನು ಹಾಕಿಕೊಳ್ಳುತ್ತಿದ್ದಾರೆ.

ಆದರೆ ಸರ್ಕಾರಗಳ ವಿಲಕ್ಷಣ ಧೋರಣೆಗಳಿಂದ, ಇಲ್ಲಿ ಒಂದೇ ಬಗೆಯ ಕಾಯಿದೆ–ಕಾನೂನು ಇಲ್ಲದೆ ಹಿಂದೂ ಸಂಸ್ಕೃತಿಗೆ ಮಾತ್ರವಲ್ಲದೆ ಪ್ರಜಾಪ್ರಭುತ್ವಕ್ಕೆ ವಿಪತ್ತು ಬರುವ ಸಂಭವವಿದೆ. ಕೆಲವು ಧರ್ಮೀಯರು ಬಹುಪತ್ನಿತ್ವ, ಅನಿಯಂತ್ರಿತ ಸಂತಾನಕ್ರಮ ಅನುಸರಿಸುತ್ತಿರುವುದರಿಂದ ಸ್ವಾಭಾವಿಕವಾಗಿ ಅವರುಗಳ ಜನಸಂಖ್ಯೆ ಮಿತಿ ಮೀರಿ, ಹಿಂದೂ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದಿರುವ ಧರ್ಮಾನುಯಾಯಿಗಳು ಅಲ್ಪಸಂಖ್ಯಾತರಾಗುವರು ಮಾತ್ರವಲ್ಲದೆ, ಭಾರತೀಯ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಒದಗುವುದು. ಆದ್ದರಿಂದ ಇಂದು ರಾಷ್ಟ್ರಪ್ರೇಮಿ ಹಿಂದೂಗಳು ಕುಟುಂಬ ನಿಯಂತ್ರಣ ಮಾಡಿಕೊಳ್ಳಬಾರದು. ಸರ್ಕಾರವು ಎಲ್ಲ ಧರ್ಮೀಯರಿಗೂ ಒಂದೇ ಕಾನೂನು ತರುವವರೆಗೂ ಹಿಂದೂ ಕಕ್ಷೆಯಲ್ಲಿ ಬರುವ ಶೈವ, ವೈದಿಕ, ಜೈನ, ಬೌದ್ಧ, ಲಿಂಗಾಯತ, ಸಿಖ್ ಮತೀಯರು ಕುಟುಂಬ ನಿಯಂತ್ರಣ ಯೋಜನೆಗೆ ಬದ್ಧರಾಗಬಾರದು. ಸರ್ಕಾರವು ಒಡ್ಡುವ ಬಡ್ತಿ, ನೌಕರಿ, ರಾಜಕೀಯ ಅಧಿಕಾರದಂತಹ ಪ್ರಲೋಭನೆಗಳಿಗಾಗಲಿ ಹಿಂಬಡ್ತಿ, ರಾಜಕೀಯ ಅವಕಾಶ ಕಳೆಯುವ ಬೆದರಿಕೆಗಳಿಗಾಗಲೀ ಬಲಿಯಾಗದೆ ಈ ನಿರ್ಣಯಕ್ಕೆ ಬದ್ಧರಾಗಬೇಕು. ದೂರದೃಷ್ಟಿಯಿಲ್ಲದ ತಾತ್ಕಾಲಿಕ ರಾಜಕೀಯ ಮೋಹಕ್ಕೆ ಒಳಗಾಗುವ ಸರ್ಕಾರಗಳ ವಿವೇಚನಾ ರಹಿತ ಕಾಯಿದೆ, ಯೋಜನೆಗಳನ್ನು ದೂರಾಲೋಚನೆಯ ರಾಷ್ಟ್ರಪ್ರೇಮಿಗಳು ಒಪ್ಪಿಕೊಳ್ಳಬಾರದು.

ಭಾರತೀಯರೆಲ್ಲರಿಗೂ ಸಮಾನ ಕಾಯಿದೆಗಳನ್ನು ಮಾಡಿದಾಗ ಮಾತ್ರ ಬಸವ ಧರ್ಮೀಯರು ಮತ್ತು ಹಿಂದೂ ಜನಾಂಗದವರು ಕುಟುಂಬ ನಿಯಂತ್ರಣ ಸೂತ್ರಕ್ಕೆ ಬದ್ಧರಾಗಬೇಕು. ಎಲ್ಲರಿಗೂ ಒಂದೇ ಸಂವಿಧಾನಬದ್ಧ ಕಾಯ್ದೆ ತರಬೇಕೆಂದು ಸರ್ಕಾರವನ್ನು ಬಸವ ಧರ್ಮ ಸಂಸತ್ ಸದಸ್ಯರು ಒತ್ತಾಯ ಪಡಿಸಬೇಕು.

ಕೇಂದ್ರ ಸರ್ಕಾರವು, ಎರಡಕ್ಕಿಂತಲೂ ಹೆಚ್ಚು ಮಕ್ಕಳಿದ್ದವರು ಎಂ. ಪಿ, ಎಂ. ಎಲ್. ಎ ಚುನಾವಣೆಗೆ ಸ್ಪರ್ಧಿಗಳಾಗಲು ಬರದು ಎಂದು ಮಸೂದೆಯನ್ನು ಇತ್ತೀಚೆಗೆ ಮಾಡಿದೆ. ಇದು ಬಹಳ ಅಪಾಯಕಾರಿ. ಇದನ್ನು ಎಲ್ಲರೂ ವಿರೋಧಿಸಬೇಕು. ಇದು ದೂರದೃಷ್ಟಿಯಿಂದ ಪರಿಶೀಲಿಸಿದಾಗ ಅಪಾಯಕಾರಿ ಎನ್ನಿಸದಿರದು; ಆದ್ದರಿಂದ ಶರಣ ಮೇಳದಲ್ಲಿ ಭಾಗಿಗಳಾದ ಶರಣ ಬಂಧುಗಳು ಇದನ್ನು ವಿರೋಧಿಸಲು ನಿರ್ಣಯಿಸಲಾಗಿದೆ.

೨. ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯಾನವನ

ರಾಮಜನ್ಮ ಭೂಮಿ - ಬಾಬರಿ ಮಸೀದಿ ವಿವಾದದಿಂದಾಗಿ ರಾಷ್ಟ್ರದಾದ್ಯಂತ ಹಿಂಸೆ, ಅಶಾಂತಿ ತಾಂಡವವಾಡಿತು. ಧರ್ಮಮಂದಿರಗಳು ದೇವರನ್ನೊಲಿಸುವ ಮತ್ತು ಧಾರ್ಮಿಕ ಸಂಘಟನೆ ಮಾಡುವ ಶ್ರದ್ಧಾಕೇಂದ್ರಗಳು. ಇವು ಉನ್ನತ ಗುರಿಗೆ ಸಾಧನಗಳೇ ವಿನಾ ಸಿದ್ಧಿಯಲ್ಲ ಅಂದಾಗ ಬದುಕಿನ ಇನ್ನಿತರ ಸಮಸ್ಯೆಗಳನ್ನು ಕಡೆಗಣಿಸಿ ಕೇವಲ ಮಂದಿರ-ಮಸೀದಿ ನಿರ್ಮಾಣಗಳಿಗಾಗಿ ಎಲ್ಲರ ಮತ್ತು ಸರ್ಕಾರದ ಗಮನ, ಶಕ್ತಿ, ಹಣ ವ್ಯಯಿಸುವುದು ಸರಿಯಲ್ಲ.

ಭಾರತವು ಹಲವಾರು ಧರ್ಮಗಳ ಉಗಮಸ್ಥಾನವೂ ಆಹುದು, ಭಾರತದ ಹೊರಗೆ ಹುಟ್ಟಿರುವ ಮತಧರ್ಮಗಳ ತೊಟ್ಟಿಲೂ ಅಹುದು. ಅಂದಾಗ ಇಲ್ಲಿರುವ ಎಲ್ಲರೂ ಸಾಮರಸ್ಯದಿಂದ ಕೂಡಿಬದುಕಬೇಕಾದುದು ಅನಿವಾರ್ಯ. ಎಲ್ಲ ಋಷಿಮುನಿ ಶರಣ-ಪ್ರವಾದಿಗಳ ಗುರಿಯೂ ಶಾಂತಿ ಸ್ಥಾಪನೆ. ಧರ್ಮದ ಗುರಿಯೇ ಕಲ್ಯಾಣ ಸಾಧನೆ. ಅಂದಾಗ ಎಲ್ಲರೂ ಮಂದಿರ–ಮಸೀದಿ ವಿವಾದವನ್ನು ಬದಿಗೊತ್ತಿ ಜನ ಕಲ್ಯಾಣ, ರಾಷ್ಟ್ರ ಕಲ್ಯಾಣದ ಬಗ್ಗೆ ಚಿಂತಿಸುವುದು ಅಗತ್ಯ.

ಡಿಸೆಂಬರ ೬ರಂದು ಅನಿರೀಕ್ಷಿತ ದುರ್ಘಟನೆ ನಡೆಯಿತು. ಇದು ಎಲ್ಲರಿಗೂ ಸಮ್ಮತವಾಗಿರುವ ಸಂಗತಿಯಲ್ಲ; ಕೇಂದ್ರ ಸರ್ಕಾರವು ಸೂಕ್ತ ಕ್ರಮ ತೆಗೆದುಕೊಳ್ಳದೆ ಈಗಾಗಲೇ ಒಂದು ತಪ್ಪಿಗೆ ಅವಕಾಶ ಮಾಡಿಕೊಟ್ಟಿರುವುದು ಸರ್ವವಿದಿತ. ಈಗ ಪುನಃ ಮಸೀದಿಯನ್ನು ಕಟ್ಟಿಸುತ್ತೇನೆಂದು ಹೇಳುವ ಮೂಲಕ ಇನ್ನೊಂದು ಪ್ರಮಾದಕ್ಕೆ ಅವಕಾಶ ಮಾಡಿಕೊಡುತ್ತಿದೆ. ಅದೇ ಸ್ಥಳದಲ್ಲಿ ಮಂದಿರ-ಮಸೀದಿ ಎರಡೂ ನಿರ್ಮಾಣ ಮಾಡಲು ಅವಕಾಶ ನೀಡುತ್ತೇನೆಂದು ಹೇಳುವ ಮೂಲಕ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಯನ್ನು ಶಾಶ್ವತವಾಗಿ ಇಡಲು ದಾರಿ ಮಾಡುತ್ತಿದೆ. ಆ ಸ್ಥಳದಲ್ಲಿ ಮಂದಿರವೂ ಬೇಡ-ಮಸೀದಿಯೂ ಬೇಡ. **ಅದು ಶಾಂತಿ ಸ್ಥಾಪನೆಯ ಸ್ಥಾನವಾಗಬೇಕಾದರೆ ಮಹಾತ್ಮಾಗಾಂಧೀಜಿಯವರ ಹೆಸರಿನಲ್ಲಿ ಈ ವಿವಾದಾಸ್ಪದ ಸ್ಥಳದಲ್ಲಿ ಒಂದು ರಾಷ್ಟ್ರೀಯ ಉದ್ಯಾನ ವನವನ್ನು ನಿರ್ಮಾಣ ಮಾಡಲಿ.** ಆಗ ಆ ಸ್ಥಾನವು ಶಾಂತಿಯ ಸಂದೇಶವನ್ನು ಸಾರಲು ಸಮರ್ಥವಾಗುತ್ತದೆ. ಜನ ಸಾಮಾನ್ಯ ಭಾರತೀಯನ ಜೀವನ ಕ್ಷಣಕ್ಷಣಕ್ಕೂ ದುಃಖಮಯ ಹೊರೆಯಾಗುತ್ತಿರುವ ಸನ್ನಿವೇಶದಲ್ಲಿ ಸರ್ಕಾರಗಳು ಮಂದಿರ, ಮಸೀದಿ, ದೇಗುಲಗಳ ನಿರ್ಮಾಣಕ್ಕೆ ಹಣ ವ್ಯಯಿಸುವ ಉಸಾಬರಿ ಬಿಟ್ಟು ಜನಜೀವನವನ್ನು ಸುಧಾರಿಸುವ ವಿದ್ಯಾಲಯಗಳು, ಆಸ್ಪತ್ರೆಗಳು ಮುಂತಾದುವಕ್ಕೆ ಹಣ ವ್ಯಯಿಸಲಿ. ಉಭಯ ಕೋಮುಗಳವರಿಗೆ ದೂರದೂರದಲ್ಲಿ ನಿವೇಶನಗಳನ್ನು ಕೊಟ್ಟು ಆಯಾ ಧರ್ಮಾನುಯಾಯಿಗಳು ತಮ್ಮ ಶ್ರದ್ಧಾ ಕೇಂದ್ರಗಳನ್ನು ಕಟ್ಟಿಕೊಳ್ಳುವಂತೆ ಮಾಡಲಿ. ವ್ಯಕ್ತಿಯ ವೈಯಕ್ತಿಕ ಧರ್ಮಾಚರಣೆಗಾಗಿ ಸಾರ್ವಜನಿಕ ಹಣವನ್ನು ವ್ಯರ್ಥಮಾಡುವುದು ಬೇಡ. ಉಭಯ ಕೋಮುಗಳ ರಾಜಕಾರಣಿಗಳಿಗೆ ಮಂದಿರವೂ ಬೇಕಿಲ್ಲ, ಮಸೀದಿಯೂ ಬೇಕಿಲ್ಲ. ಏಕೆಂದರೆ ಮಂದಿರ-ಮಸೀದಿಯ ಮೂಲಕ ದೇವರನ್ನೊಲಿಸಿಕೊಳ್ಳುವವನಿಗೆ ಜಗಳವೇ ಬೇಕಿರದು. ರಾಜಕೀಯ ಲಾಭ ಬೇಕಾದವರಿಗೆ ಸರ್ಕಾರದ ಕ್ರಮ ಸಹ್ಯವಾಗದು. ಆದ್ದರಿಂದ ಸರ್ಕಾರ ಜನಪರ ಯೋಜನೆಗಳತ್ತ ಗಮನ ಹರಿಸಿದರೆ ಸಾಕು.

ಬಸವ ತತ್ತ್ವ ಆಧಾರಿತ ರಾಜಕೀಯ ಪಕ್ಷದ ಅಗತ್ಯ

ಭಾರತ ದೇಶಕ್ಕೆ ಒಂದು ಉನ್ನತವಾದ ಆಧ್ಯಾತ್ಮಿಕ, ಸಾಂಸ್ಕೃತಿಕ ಪರಂಪರೆಯಿದೆ. ಆದರೆ ಇಂದಿನ ಪರಿಸ್ಥಿತಿ ಅತ್ಯಂತ ವಿಕೃತಗೊಂಡಿದೆ. ಯಾವುದೇ ಆದರ್ಶ, ರಾಷ್ಟ್ರೀಯ ಪ್ರೇಮ, ಹಿಂದಿನ ಸ್ವಾತಂತ್ರ್ಯ ಹೋರಾಟಗಾರರು ಮಾಡಿದ ತ್ಯಾಗದ ಅರಿವು, ಸಮರ್ಪಣೆ ಇಲ್ಲದ ಜನಾಂಗ ನಿರ್ಮಾಣವಾಗುತ್ತಿದೆ. ವಿವಿಧ ರಾಜಕೀಯ ಪಕ್ಷಗಳು ಕೇವಲ ಅಧಿಕಾರಕ್ಕೆ ಬರುವ ಹವಣಿಕೆಯಲ್ಲಿವೆ. ಅಧಿಕಾರಕ್ಕೆ ಬಂದ ನಂತರ ಅದನ್ನು ಹೇಗಾದರೂ ಉಳಿಸಿಕೊಳ್ಳುವ ಹಂಬಲದಲ್ಲಿ ಇರುತ್ತವೆ. ಬೆರಣಿಯನಾಯುವುದರಲ್ಲೇ ಸಮಯ ಹೋದರೆ ಅಡಿಗೆ ಮಾಡುಕೊಂಡು ಉಣ್ಣುವುದು ಯಾವಾಗ ? ಎನ್ನುವಂತೆ ಅಧಿಕಾರಕ್ಕೆ ಬರುವುದರಲ್ಲೇ, ಬಂದ ನಂತರ ಅದನ್ನು ಉಳಿಸಿಕೊಳ್ಳುವುದರಲ್ಲೇ ಸಮಯ ವ್ಯಯವಾದರೆ ಇನ್ನು ದೇಶವನ್ನು ಕಟ್ಟುವುದು ಯಾವಾಗ ಎನ್ನುವಂತಾಗಿದೆ.

ಕಾಂಗ್ರೆಸ ಪಕ್ಷವು ಯಾವ ತತ್ತ್ವ ಸಿದ್ಧಾಂತಗಳಿಲ್ಲದೆ, ಗಾಂಧೀಜಿ-ವಲ್ಲಭಭಾಯಿ ಪಟೇಲ, ಟಿಳಕ ಮುಂತಾದವರ ಆದರ್ಶಗಳನ್ನು ಮರೆತು, ಖಚಿತ ಗುರಿಯೇ ಇಲ್ಲದೆ ಸಾಗುತ್ತಿದೆ. ಜನತಾದಳ ಒಂದು ಭರವಸೆಯೊಡನೆ ಹುಟ್ಟಿದರೂ, ವ್ಯಕ್ತಿ ಪ್ರತಿಷ್ಠೆ, ಒಳಜಗಳದ ಪರಿಣಾಮವಾಗಿ ಸೋರುವ ಮನೆಯಾಗಿದೆ. ಕಮ್ಯುನಿಸ್ಟ ಪಕ್ಷವು ಸೈದ್ಧಾಂತಿಕ ತಳಹದಿ ಹೊಂದಿದ್ದರೂ, ದೇವರನ್ನು ನಂಬದೆ, ಧಾರ್ಮಿಕ ಮೌಲ್ಯ ಒಪ್ಪದೆ ಭಾರತೀಯರ ಮನಸ್ಸನ್ನು ಆಕರ್ಷಿಸಲಾರದಾಗಿದೆ ಮತ್ತು ಹಲವಾರು ರಾಷ್ಟ್ರಗಳಲ್ಲಿ ತನ್ನ ಬುನಾದಿಯನ್ನು ನಾಶಪಡಿಸಿಕೊಂಡು ಕುಸಿಯುತ್ತಿದೆ. ಭಾರತೀಯ ಜನತಾಪಕ್ಷವು ರಾಷ್ಟ್ರೀಯ ಪ್ರೇಮದ ನೆಪದಲ್ಲಿ ಹಲವರು ಧರ್ಮೀಯರನ್ನು ಎತ್ತಿಕಟ್ಟಿ, ಜನಾಂಗೀಯ ದ್ವೇಷಕ್ಕೆ ಪರಸ್ಪರ ವೈಷಮ್ಯಕ್ಕೆ ಕಾರಣೀಭೂತವಾಗುತ್ತಿದೆ. ಯಾವುದೋ ಕಾಲದಲ್ಲಿ ಬೋಧಿಸಲ್ಪಟ್ಟ, ಮೌಲ್ಯ ಕಳೆದುಕೊಂಡ ವಿಚಾರಗಳನ್ನು ಪುನಃ ಪ್ರತಿಷ್ಠಾಪಿಸಲು ಯತ್ನಿಸುತ್ತಿದೆ. ಅವೈಜ್ಞಾನಿಕ ಮೂಢ ನಂಬಿಕೆ,ವ್ಯಕ್ತಿ ಪೂಜೆಗಳನ್ನು ಭಕ್ತಿಯ

ಹೆಸರಿನಲ್ಲಿ ಬೆಳೆಸುತ್ತಿದೆ. ಇನ್ನು ಇತರ ಸಣ್ಣ ಪುಟ್ಟ ಪಕ್ಷಗಳಿಗೆ ಸಮ್ಯಕ್ ದೃಷ್ಟಿ, ದೂರಾಲೋಚನೆ ಇಲ್ಲವೇ ಇಲ್ಲ.

ಈ ಎಲ್ಲವುಗಳ ಹಿನ್ನೆಲೆಯಲ್ಲಿ ಜಾತಿವರ್ಣವರ್ಗ ರಹಿತ, ಧರ್ಮಸಹಿತ ಕಲ್ಯಾಣ ರಾಜ್ಯವನ್ನು ನಿರ್ಮಾಣ ಮಾಡುವ ಕಳಕಳಿಯುಳ್ಳ ಬಸವಾಯಿಸಂ (ಬಸವ ಸಿದ್ಧಾಂತ)ದ ತಳಹದಿಯ ಮೇಲೆ ರಾಜಕೀಯ ಪಕ್ಷವೊಂದು ಇಂದಿನ ಅಗತ್ಯವಾಗಿದೆ. ಇದು ಕಮ್ಯುನಿಸಮ್‌ದ ನಾಸ್ತಿಕವಾದದ ದೋಷವನ್ನು ಭಾರತೀಯ ಜನತಾ ಪಕ್ಷದ ಮತಾಂಧತೆಯ ದೋಷವನ್ನು ನಿವಾರಿಸಬಲ್ಲುದಾಗಿದೆ. ಕಮ್ಯುನಿಸಮ್ ಅನ್ಯಧಾರ್ಮಿಕರು ನಂಬರು; ಭಾಜಪವನ್ನು ವಿಚಾರವಾದಿಗಳು ನಂಬರು. ಕಾಂಗ್ರೆ ಜನತಾದಳಗಳವರಲ್ಲಿ ಬಾಬಾಗಳು, ಸಾಧುಗಳ ಮಂತ್ರಶಕ್ತಿಯ ಬೆನ್ನು ಹತ್ತಿದ ಮುಖಂಡರೇ ಬಹಳ. ಎಲ್ಲ ವಿಚಾರಧಾರೆಗಳನ್ನು ಸಮತೋಲನಿಕವಾಗಿ ಹೊಂದಿ, ಸುಸಂಸ್ಕೃತ ಜನಾಂಗವನ್ನು ನಿರ್ಮಾಣ ಮಾಡುವ ಶಕ್ತಿ ಬಸವಣ್ಣನವರ ತತ್ತ್ವ-ಸಿದ್ಧಾಂತಗಳಲ್ಲಿ ಇದೆ. ಆದ್ದರಿಂದ ಈ ದೇಶಕ್ಕೆ ಸೂಕ್ತಮಾರ್ಗದರ್ಶನಮಾಡಬಲ್ಲ ರಾಜಕೀಯ ಪಕ್ಷದ ಸಂಘಟನೆ ಇಂದಿನ ಅಗತ್ಯವಾಗಿದೆ. ಸುಸಂಸ್ಕೃತರೂ, ತ್ಯಾಗಿಗಳು, ಚಿಂತನ ಶೀಲರು ಆದ ಜನಾಂಗ ನಿರ್ಮಾಣವಾಗಬೇಕೆಂದರೆ, ಸಮಯ ಕಳೆಯದೆ ಇಂಥ ಪಕ್ಷವೊಂದರ ಸಂಘಟನೆ ಅತ್ಯಗತ್ಯ. ನಮಗೆ ರಾಜಕೀಯದಲ್ಲಿ ನೇರವಾಗಿ ಇಳಿಯುವ ಹವ್ಯಾಸವೂ ಇಲ್ಲ, ಅಪೇಕ್ಷೆಯೂ ಇಲ್ಲ. ಈ ದೇಶದ ಭವಿತವ್ಯದ ದೃಷ್ಟಿಯಿಂದ ಉದಾತ್ತ ತತ್ತ್ವ ಸಿದ್ಧಾಂತಗಳಿಂದ ಕೂಡಿದ ಪಕ್ಷ ರಚನೆಗೆ ಕರೆ ಕೊಡುತ್ತಿದ್ದೇವೆ ಅಷ್ಟೆ. ಭೌತಿಕ ಸಮೃದ್ಧಿ, ನೈತಿಕ ಸಂತೃಪ್ತಿ, ಆಧ್ಯಾತ್ಮಿಕ ಸುವಿಧಾನಗಳನ್ನು ಸಾಧಿಸುವ ಬಸವ ತತ್ತ್ವದ ಅವಶ್ಯಕತೆಯನ್ನರಿತು ಪ್ರಾಜ್ಞರಾದ ನೀವೆಲ್ಲ ಅಂಥ ಪಕ್ಷವೊಂದರ ಸಂಸ್ಥಾಪನೆಗೆ ಶ್ರಮಿಸಬೇಕು.

ಹೆಸರು : ವ್ಯಕ್ತಿ- ರಾಷ್ಟ್ರ- ವಿಶ್ವಕಲ್ಯಾಣವನ್ನೇ ಗುರಿಯಾಗಿಟ್ಟುಕೊಂಡಿದೆ ಬಸವಣ್ಣನವರ ಸಿದ್ಧಾಂತ. ಆದ್ದರಿಂದ ಪಕ್ಷದ ಹೆಸರಿನಲ್ಲಿ 'ಕಲ್ಯಾಣ' ಪದ ಇರಲೇಬೇಕು. 'ರಾಷ್ಟ್ರ-ಕಲ್ಯಾಣ ಪಕ್ಷ', ಎಂದು ಕರೆದರೆ ಬಹಳ ಸೂಕ್ತವಾಗಬಹುದು.

4. ಶರಣ ಮೇಳ ಸಂಚಾಲಕ ಸಮಿತಿ

ಶರಣ ಮೇಳವು ಇಂದು ಬಸವ ತತ್ತ್ವಾನುಯಾಯಿಗಳನ್ನು ಅದ್ಭುತವಾಗಿ ಸಂಘಟಿಸುತ್ತಿದ್ದು, ಧರ್ಮಕ್ಷೇತ್ರ ಸಂಗಮಕ್ಕೆ ಎಲ್ಲರನ್ನೂ ಬರಮಾಡಿಕೊಳ್ಳುತ್ತಿದೆ. ವರ್ಷದಿಂದ ವರ್ಷಕ್ಕೆ ಭಾಗವಹಿಸುವವರ ಸಂಖ್ಯೆ ವೃದ್ಧಿಯಾಗುತ್ತಿದೆ. ಪರಿಣಾಮವಾಗಿ ಸಂಸ್ಕಾರ - ಸಂಘಟನೆ ಸಾಧ್ಯವಾಗುತ್ತಿದೆ. ಇದು ಸುವ್ಯವಸ್ಥಿತವಾಗಿ ಸಾಗಬೇಕಾದರೆ ಶರಣ ಮೇಳ ಉತ್ಸವ ನಿಧಿಯ ರಚನೆ ಮಾಡಿ, ಆ ನಿಧಿಯನ್ನು ಕಡ್ಡಾಯ ಠೇವಣಿಯನ್ನಾಗಿ ಇಟ್ಟು, ಅದರ ಬಡ್ಡಿಯನ್ನು ಉತ್ಸವ ನಿರ್ವಹಣೆಗೆ ಬಳಸುವುದು ಒಂದು ಸೂಕ್ತವಿಧಾನ. ಇದು ಅಲ್ಲದೆ, ಪ್ರತಿಯೊಬ್ಬರೂ ಮನ ಮುಟ್ಟಿ ದುಡಿಯುವಲ್ಲಿ ಪ್ರೇರಣೆ ನೀಡಲು ಸಂಚಾಲಕ ಸಮಿತಿಯನ್ನು ಮಾಡುವುದು ಇನ್ನೊಂದು ಸಶಕ್ತವಿಧಾನ. ರಾಷ್ಟ್ರೀಯ ಬಸವ ದಳಗಳವರು ತಮ್ಮ ಶಕ್ತ್ಯಾನು

ಸಾರ ಸಂಗ್ರಹಿಸುವುದು ಆದ್ಯ ಕರ್ತವ್ಯ. ಜೊತೆಗೆ ಕೆಲವು ಶರಣ ಬಂಧುಗಳು ಸ್ವಯಂ ಪ್ರೇರಣೆಯಿಂದ ಪ್ರತಿವರ್ಷವೂ 2000 ರೂಗಳನ್ನು ಕನಿಷ್ಟಪಕ್ಷ ಸಂಗ್ರಹಿಸಿಕೊಡುವ ಸಂಕಲ್ಪ ತೊಡಬೇಕು. ಇವರು ತಾವೊಬ್ಬರೇ ವೈಯಕ್ತಿಕವಾಗಿ ಕೊಡಬಹುದು ಅಥವಾ ತಮ್ಮ ಬಂಧುಮಿತ್ರರಿಂದ ಸಂಗ್ರಹಿಸಿಕೊಡಬಹುದು. ಇಂಥ 500 ಜನರು ಸಿಕ್ಕರೂ 10 ಲಕ್ಷರೂಪಾಯಿ ಸಂಗ್ರಹವಾಗುವುದು. ಆದ್ದರಿಂದ ಹೆಚ್ಚುಜನ ಶರಣ ಬಂಧುಗಳು, ಈ ಸಮಿತಿಯಲ್ಲಿ ತಮ್ಮ ಹೆಸರು ನೋಂದಾಯಿಸಬೇಕು. ಇವರಿಗೆ 2–3 ತಿಂಗಳ ಮೊದಲು ಸೂಚನಾ ಪತ್ರ ಕಳಿಸಿ, ಪ್ರಚಾರ ಸಾಮಗ್ರಿ ಕಳಿಸಲಾಗುವುದು. ಕಳಕಳಿ-ಶಕ್ತಿಯಿದ್ದವರು ಇನ್ನೂ ಹೆಚ್ಚು ಸಂಗ್ರಹಿಸಬಲ್ಲರಾದರೂ ಸಾಮಾನ್ಯರಿಗೆ ಪ್ರತಿ ವರ್ಷ 2000 ರೂ. ಸಂಗ್ರಹಿಸುವುದು ಕಷ್ಟವಾಗಲಿಕ್ಕಿಲ್ಲ. ಈ ಸಮಿತಿಯಲ್ಲಿ ತಂತಮ್ಮ ಹೆಸರು ಬರೆಸಬೇಕೆಂದು ಸೂಚಿಸುತ್ತೇವೆ.

5. ಮುಡಿಪು

ಕೆಲವು ಜನರಿಗೆ ತಮ್ಮ ಆರ್ಥಿಕ ಸ್ಥಿತಿಗೆ ಅನುಸಾರವಾಗಿ ಒಮ್ಮೆಗೇ ದೇಣಿಗೆ ಕೊಡಲು ಸಾಧ್ಯವಾಗಲಿಕ್ಕಿಲ್ಲ. ಅಂಥವರಿಗೆ ಮುಡಿಪು ತೆಗೆದಿಡುವುದು ಸುಲಭಸಾಧ್ಯ. ವರ್ಷವಿಡೀ ತಮಗೆ ಅನುಕೂಲವಾದಷ್ಟನ್ನು ಕಾಣಿಕೆಯ ಡಬ್ಬಿಯಲ್ಲಿ ಹಾಕಿಟ್ಟು, ವರ್ಷಕ್ಕೊಮ್ಮೆಯಾಗಲೀ, ಅನುಕೂಲವಾದಾಗಲಾಗಲೀ ಸಲ್ಲಿಸಬಹುದು. ಶರಣ ಮೇಳ ಉತ್ಸವ ನಿರ್ವಹಣೆಗೆ ಕೊಡಬಹುದು ಅಥವಾ ಬಸವ ಧರ್ಮ ಪೀಠಕ್ಕೆ ಸಲ್ಲಿಸಬಹುದು. ಇಂತಹ ಉದ್ದೇಶ ಸಾಧನೆಗೆ ಹರಕೆ/ಮುಡಿಪಿನ ಡಬ್ಬಿಗಳನ್ನು ಇಟ್ಟುಕೊಳ್ಳಬೇಕು.

6. ಆತ್ಮ ರಕ್ಷಣಾ ತರಬೇತಿ

ಇಂದಿನ ಯುವಪೀಳಿಗೆ ದುಷ್ಟಮಾರ್ಗದಲ್ಲಿ ಸಾಗಿದ್ದಾರೆ. ರಾಷ್ಟ್ರನಿರ್ಮಾಣದಲ್ಲಿ ತೊಡಗಬೇಕಾದ ಯುವ ಜನಾಂಗದ ಶಕ್ತಿ ಚಲನಚಿತ್ರ ಮಂದಿರಗಳ ಮುಂದೆ ಸಾಲುಗಟ್ಟಲು, ಹುಡುಗಿಯರನ್ನು ಚುಡಾಯಿಸಲು, ಸೆರೆಯ ಅಂಗಡಿಗಳಲ್ಲಿ ಮತ್ತೇರಿ ಬೀಳಲು ವ್ಯಯವಾಗುತ್ತಿದೆ. ಹಿಂದಿನ ಕಾಲದಲ್ಲಿ ಹಳ್ಳಿಹಳ್ಳಿಗಳಲ್ಲಿ ವ್ಯಾಯಾಮ ಶಾಲೆಗಳು ಇರುತ್ತಿದ್ದವು. ಈಗ ಹೆಜ್ಜೆ ಇಟ್ಟಲ್ಲಿ ಹೆಂಡದ ಅಂಗಡಿಗಳು. ಇದೇ ರೀತಿ ಮುಂದುವರಿದರೆ ಮುಂದಿನ ಪೀಳಿಗೆಯ ಗತಿ ಏನು? ಗೂಂಡಾಗಿರಿ, ಹಿಂಸಾಪ್ರವೃತ್ತಿ ಒಂದು ಕಡೆ, ಅದನ್ನು ಎದುರಿಸಲಾರದ ದುರ್ಬಲ ಜನ ಇನ್ನೊಂದು ಕಡೆ. ಅದಕ್ಕಾಗಿ ಇಂದು ಜನರಲ್ಲಿ ಧೀರೋದಾತ್ತ ನಿಲುವು ಬೆಳೆಸುವುದು ಅತ್ಯಗತ್ಯವಾಗಿದೆ. ಅಂಥ ಜನರು ತಯಾರಾದರೆ ದರೋಡೆ ಮುಂತಾದ ಹಿಂಸಾವೃತ್ತಿಗಳನ್ನೂ ನಿಯಂತ್ರಿಸಲು ಸಾಧ್ಯವಾಗುವುದು. ಈ ದೃಷ್ಟಿಯಿಂದ ರಾಷ್ಟ್ರೀಯ ಬಸವ ದಳಗಳು ಆತ್ಮ ರಕ್ಷಣಾ ತರಬೇತಿ ಹೊಂದುವುದು ಅತ್ಯಂತ ಅವಶ್ಯಕ. ದೊಡ್ಡ ದೊಡ್ಡ ನಗರಗಳಲ್ಲಿ ಹೆಣ್ಣು ಮಕ್ಕಳೇಕೆ ಗಂಡು ಮಕ್ಕಳು ತಮ್ಮ ಹೆಂಡತಿಯ ಜೊತೆಗೆ ಹೋದರೂ ಉಭಯತರಿಗೆ ರಕ್ಷಣೆ ಇಲ್ಲ. ಏಕೆಂದರೆ ಅವರುಗಳಿಗೆ ಶಾರೀರಿಕ ಶಿಕ್ಷಣ, ಆತ್ಮರಕ್ಷಣಾ ತರಬೇತಿ ಇಲ್ಲ. ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ಮನೀಷೆ ತಾಯಿತಂದೆಯರಿಗೆ ಇದ್ದರೂ, ಮಾಡುವ ಮನಸ್ಸು ಅವರಿಗೆ ಇದ್ದರೂ ಸುರಕ್ಷಿತತೆ ಇಲ್ಲದ್ದರಿಂದ ವಿದ್ಯಾಭ್ಯಾಸ ಮಾಡಲು ಆಗುತ್ತಿಲ್ಲ.

ಆದ್ದರಿಂದ ಇಂದು ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಉಭಯತರೂ ಯೋಗ, ಪ್ರಾಣಾಯಾಮ, ಶಾರೀರಿಕ ಶಿಕ್ಷಣ ಮುಂತಾದ ಚಟುವಟಿಕೆಗಳೊಡನೆ ಕರಾಟೆ, ಎನ್. ಸಿ. ಸಿ. ಮುಂತಾದ ಆತ್ಮ ರಕ್ಷಣಾ ತರಬೇತಿ ಹೊಂದುವುದು ಆಗತ್ಯವಿರುವ ಕಾರಣ, ರಾಷ್ಟ್ರೀಯ ಬಸವ ದಳಗಳು ಆ ದಿಶೆಯಲ್ಲಿ ಪ್ರಯತ್ನಿಸುವುದು ಒಳ್ಳೆಯದು.

7. ಪಾನ ನಿಷೇಧ ಕಾರ್ಯಕ್ರಮ

ಕುಡಿತ ಅನ್ನುವುದು ಬಹುದೊಡ್ಡ ಪಿಡುಗಾಗಿದೆ. ಶಾರೀರಿಕವಾದ ರೋಗಗಳಾದ ಪೋಲಿಯೋ, ಸಿಡುಬು, ಮುಂತಾದ ರೋಗಗಳನ್ನು ಆಧುನಿಕ ವಿಜ್ಞಾನದ ನೆರವಿನಿಂದ ಮಾನವ ನಿಯಂತ್ರಿಸಿದ್ದಾನೆ. ಆದರೆ ದುಶ್ಚಟ-ದುರ್ಗುಣಗಳು ಅಧಿಕಧಿಕವಾಗಿ ಮಾನವ ಸಮಾಜವು ಹಿಂಸೆ, ಕೊಲೆ, ಸುಲಿಗೆಗಳ ಆಗರವಾಗುತ್ತಿದೆ. ರಸ್ತೆ ದರೋಡೆ, ಅತ್ಯಾಚಾರ, ವಾಹನ ಅಪಘಾತ, ಚುನಾವಣೆಯ ಪಾತಕಗಳು, ಬಡತನ, ಕೌಟುಂಬಿಕ ವಿರಸ, ಕೋಮು ಗಲಭೆ- ಈ ಎಲ್ಲವುಗಳ ಮೂಲ ಸುರಾಪಾನವೇ ಆಗಿದೆ. ಬಡತನದ ಕರಾಳ ಹಸ್ತದಿಂದ ನೊಂದು ನಲುಗುವ ಕುಟುಂಬಗಳ ಹಿನ್ನೆಲೆಯಲ್ಲಿ ಸುರಾಪಾನವನ್ನು ಕಾಣಬಹುದು. ಹೆಣ್ಣು ಮಕ್ಕಳ ಜೀವನವಂತೂ ಗಂಡಂದಿರ ಸುರಾಪಾನದಿಂದ ಅತ್ಯಂತ ದುರ್ಧರವಾಗುತ್ತಿದೆ. ಮಕ್ಕಳ ಭವಿಷ್ಯ ಕರಾಳವಾಗಿದೆ. ಆದ್ದರಿಂದ ಸರ್ಕಾರ ಸುರಾಪಾನವೆಂಬ ಈ ರಾಕ್ಷಸಿ ಪಿಡುಗಿಗೆ ತಡೆ ಹಾಕಬೇಕು.

ಸರ್ಕಾರಕ್ಕೆ ಹೆಚ್ಚಿನ ಆದಾಯ ತರುವ ಬಾಬತ್ತು ಇದಾಗಿರಬಹುದಾದರೂ ಜನರ ಜೀವನ, ಕುಟುಂಬಗಳ ಹಿತ ದೃಷ್ಟಿಯಿಂದ, ಆಗುವ ಜೀವ ಹಾನಿ, ವಿತ್ತ ಹಾನಿಗಳ ದೃಷ್ಟಿಯಿಂದ ಸರ್ಕಾರವು ಬೇಗನೇ ಮುತುವರ್ಜಿ ವಹಿಸಿ ಪಾನ ನಿಷೇಧವನ್ನು ಜಾರಿಗೆ ತರಬೇಕು ಎಂದು ಶರಣ ಮೇಳದ ಮಹಾಶರಣರ ಸಭೆಯು ನಿರ್ಣಯಿಸುತ್ತದೆ.

ಒಂದು ವೇಳೆ ಸರ್ಕಾರಗಳು ಈ ದಿಶೆಯಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ, ಕುಟುಂಬಗಳ ಸ್ವಾಸ್ಥ್ಯದ ದೃಷ್ಟಿಯಿಂದ ಜಾಗೃತಗೊಂಡ ಮಹಿಳೆಯರು ಚಳುವಳಿಯ ಮಾರ್ಗವನ್ನು ಹಿಡಿದರೂ ಹಿಡಿಯಬಹುದು ಎಂಬುದನ್ನು ಸರ್ಕಾರವು ಮನಗಂಡರೆ ಒಳ್ಳೆಯದು.

8. ಬಾಗಿಲುಕೋಟೆ ವೃತ್ತದಲ್ಲಿ ಬಸವೇಶ್ವರ ಪುತ್ಥಳಿ

ಬಾಗಲುಕೋಟೆಯ ಬಸವೇಶ್ವರ ವೃತ್ತದಲ್ಲಿ ನಿಲ್ಲಿಸಿದ್ದ ವಿಶ್ವಗುರು ಬಸವಣ್ಣನವರ ಪುತ್ಥಳಿಯನ್ನು ದುಷ್ಕರ್ಮಿಗಳು ಗಲಭೆಯ ಸಂದರ್ಭದಲ್ಲಿ ಭಗ್ನಗೊಳಿಸಿದ್ದು ತಿಳಿಯಿತು. ಆಗ ಬಾಗಲಕೋಟೆಯ ಬಸವ ತತ್ತ್ವಾನುಯಾಯಿಗಳು ಕೋಪದ ಕೈಗೆ ಬುದ್ಧಿಕೊಟ್ಟು ದುಡುಕಿಲ್ಲ, ವದಂತಿಗಳನ್ನು ನಂಬಿ ಹಿಂಸೆಗೆ ಇಳಿದಿಲ್ಲ. ಇದರಿಂದ ಅವರು ಗುರು ಬಸವ ತಂದೆಗೆ ಕೀರ್ತಿ ತಂದಿದ್ದಾರೆ. ಕಾಯಿದೆಯನ್ನು ಉಲ್ಲಂಘಿಸುಸುವುದು ಸಲ್ಲದು. ಸಂವಿಧಾನಕ್ಕೆ ಅಪಚಾರ ಬೇಡ. ಸಭ್ಯತೆ-ಸಂಸ್ಕೃತಿಗಳ ನಡತೆ ಅವರದಾಗಿದೆ. ಸರಕಾರವು ಈ ಸಭ್ಯತೆ-ಸಂಸ್ಕೃತಿಗಳನ್ನು ಗಮನಕ್ಕೆ ತಂದುಕೊಂಡು, ಆದಷ್ಟು ತೀವ್ರವಾಗಿ ಭಗ್ನಗೊಂಡ ಮೂರ್ತಿಯನ್ನು ತೆಗೆದು, ಶಾಶ್ವತವಾದ ಕಂಚಿನ ಪುತ್ಥಳಿಯನ್ನು ನಿಲ್ಲಿಸಿ, ಈ ದೇಶದಲ್ಲಿ ತಾಳ್ಮೆಗೆ, ಸುಸಂಸ್ಕೃತಿಗೆ ಬೆಲೆ ಇದೆ ಎಂಬುದನ್ನು ದೃಢೀಕರಿಸಲಿ.

ರಾಜಕೀಯ ಪಕ್ಷ ಸ್ಥಾಪನೆ ಕುರಿತು ಚಿಂತನೆ

ಬಸವ ಕ್ರಾಂತಿ ದಿನ, ದಿ. 14-1-1993 ರಂದು ಸಂಜೆಯ ಗೋಷ್ಠಿ ನಡೆದಾಗ ಅಂತರಂಗದಿಂದ ಉಕ್ಕಿದ ಕೆಲವು ಆಲೋಚನೆಗಳನ್ನು ಶರಣರ ಸಭೆಯ ಮುಂದಿಟ್ಟು, ಚಿಂತನೆ ಮಾಡಲು ಗ್ರಾಸವನ್ನು ಒದಗಿಸಿದೆ. ನನ್ನ ಆಲೋಚನಾ ಸರಣಿಯನ್ನು ಅರ್ಥ ಮಾಡಿಕೊಂಡವರೆಷ್ಟೋ, ಬಿಟ್ಟವರೆಷ್ಟೋ. ಕೆಲವರು, "ಇದು ತುಂಬಾ ಅಭಿನಂದನೀಯ, ನಾವು ಪಾರ್ಟಿಯ ಸಕ್ರಿಯ ಕಾರ್ಯಕರ್ತರಾಗುತ್ತೇವೆ. ಪಾರ್ಟಿ ಆಫೀಸು ತೆರೆಯುತ್ತೇವೆ. " ಎಂದು ಪತ್ರ ಬರೆದರು. ಮತ್ತೆ ಕೆಲವರು, ನೀವು ರಾಜಕೀಯಕ್ಕೆ ಇಳಿಯಬಾರದಿತ್ತು. ಇದರಿಂದ ಬಸವ ತತ್ತ್ವಕ್ಕೆ ಚ್ಯುತಿ ಬರುವುದು ಎಂದು ಬರೆದರು. ಇನ್ನು ಕೆಲವರು ಇಂದಿನ ರಾಜಕೀಯ ಎಂದರೆ ಗೂಂಡಾ ಆಳಿಕ್ವೆ ಎಂದೇ ಅರ್ಥ : ಧರ್ಮವಂತರು ಇದರಲ್ಲಿ ಪ್ರವೇಶಿಸಬಾರದು ಎಂದು ಬರೆದರು. ಬಹುಶಃ ಯಾರದರೂ ಕೆಲವರು ನನ್ನ ಮಾತಿನ ಹಿಂದಿರುವ ಅಂತರಾರ್ಥವನ್ನು ಅರಿತಿರಬಹುದು.

ವೈಯಕ್ತಿಕ ವಿಚಾರ

ಈ ಬಗ್ಗೆ ನನ್ನ ಮಾತುಗಳು ವೈಯಕ್ತಿಕ ವಿಚಾರ ಮಾತ್ರ. ಇದು ಬಸವ ಧರ್ಮಪೀಠದ ಉದ್ದೇಶವೂ ಅಲ್ಲ, ಶರಣ ಮೇಳ ಉತ್ಸವ ಸಮಿತಿಯ ತೀರ್ಮಾನವೂ ಅಲ್ಲ. ಬಸವ ಧರ್ಮದ ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಗಳಿಂದ ಹಿಡಿದು ನಮ್ಮ ಶಿಷ್ಯರಿಗೆಲ್ಲ ಈ ವಿಚಾರ ಧಾರೆ ಅನಿರೀಕ್ಷಿತವಾಗಿತ್ತು. ಅಂದಿನ ಸಭೆಗೆ ಪೂಜ್ಯರು ಬರಲಾಗದಷ್ಟು ದರ್ಶನಾಕಾಂಕ್ಷಿ ಭಕ್ತರು ಸುತ್ತುವರಿದುದರಿಂದ,ಸಭಿಕರಿಂದ ವಿಷಯ ತಿಳಿದು ಪೂಜ್ಯರು ನಂತರ ವಿವರಗಳನ್ನು ಕೇಳಿದರು. ಜನರನ್ನು ಚಿಂತನೆಗೆ ತೊಡಗಿಸಲೆಂದು ಅತಿ ಹೆಚ್ಚಿನ ಜನ ಸೇರುವ ಆ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದೆ. ಹಿಬ್ಬ ಶರಣ ಬಂಧುಗಳು ಐಗಳಿಯ ಆರ್. ಬಿ. ಹಿರೇಮಠ ಎಂಬುವವರು ಸಭೆಗೆ ಮಂತ್ರಿಗಳು ಬರಲಿಲ್ಲವಾದ ಕಾರಣ ಈ ರೀತಿ ಘೋಷಿಸಲಾಯಿತೆಂದು ತಿಳಿದು ಬರೆದಿದ್ದರೆ, ಮತ್ತೆ ಕೆಲವರು ಪಕ್ಷವನ್ನು ಪ್ರಾರಂಭಿಸಿಯೇ ಬಿಟ್ಟೆವೆಂದು ತಿಳಿದಿದ್ದಾರೆ.

ಮೊಟ್ಟ ಮೊದಲನೆಯ ನಿಲುವೆಂದರೆ ನಾವು ಸಕ್ರಿಯ ರಾಜಕಾರಣದಲ್ಲಿ ಆಸಕ್ತರಲ್ಲ. ಧರ್ಮ ಪ್ರಚಾರ, ವಚನ ವಾಙ್ಮಯ ಪ್ರಸಾರವನ್ನು ಎಷ್ಟು ವ್ಯಾಪಕವಾಗಿ ಮಾಡಲು ಸಾಧ್ಯವೋ ಅಷ್ಟು ಮಾಡಬೇಕೆಂದು ನಿರ್ಧರಿಸಿ, ಈ ಜೀವನ ವಿಧಾನಕ್ಕೆ ಆತಂಕಕಾರಿಯಾದ–ಎಂಥದ್ದೇ ಆದಾಯ ತರುವ ಚಟುವಟಿಕೆ ಇದ್ದರೂ ಆದರತ್ತ ನಾವು ಗಮನ ಹರಿಸಿಲ್ಲ. ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ತೆಗೆಯಬೇಕೆಂದು ನಮ್ಮ ಆತ್ಮೀಯ ಭಕ್ತರಿಂದ

ಸಲಹೆ, ಒತ್ತಡ ಬರುತ್ತಿದ್ದರೂ ಅದರತ್ತ ಲಕ್ಷ್ಯವಹಿಸುತ್ತಿಲ್ಲ. ಇನ್ನು ಸಕ್ರಿಯ ರಾಜಕಾರಣದತ್ತ ಆಸಕ್ತಿ ತೋರುವುದು ಸಾಧ್ಯವೆ ? ಹಾಗಾದರೆ ನಮ್ಮ ಚಿಂತನೆಯ ಸಾರ ಏನು ? ಇಂದು ಈ ರಾಜ್ಯ, ದೇಶಗಳು ವಿಚಿತ್ರ ಪರಿಸ್ಥಿತಿಯಲ್ಲಿ ತೊಳಲುತ್ತಲಿವೆ. ತನ್ನ ಸೀರೆಯ ಬಗ್ಗೆ ಜನರ ಗಮನ ಸೆಳೆಯಲು ಊರ ಹಿತ್ತಿಲಿಗೆ ಬೆಂಕಿ ಹಚ್ಚಿದ ಮಂಗಮ್ಮಜ್ಜಿಯಂತೆ ರಾಜಕಾರಣಿಗಳು ವರ್ತಿಸುತ್ತಿದ್ದಾರೆ. ಇವರಿಗೆ ದೇಶದ ಬಗ್ಗೆ ಜನರ ಹಿತದ ಬಗ್ಗೆ ಚಿಂತಿಸಲು ಪುರುಷೊತ್ತು ಎಲ್ಲಿದೆ ? ಇನ್ನು ಕೆಲವರು ಸಾತ್ವಿಕರು, ಬುದ್ಧಿಜೀವಿಗಳು ರಾಜಕಾರಣ ಎಂದರೆ ಗೂಂಡಾ ಆಳ್ವಿಕೆ ಎಂದು ನಿರ್ಧರಿಸಿ ಕೈಚೆಲ್ಲಿ ಕುಳಿತು ಬಿಟ್ಟಿದ್ದಾರೆ. ಈ ವಿಷವೃತ್ತದಿಂದ ಪಾರಾಗಲು ಏನು ಮಾಡಬೇಕೆಂದಾಗಲೀ ಇದರಲ್ಲಿ ತಮ್ಮ ಕರ್ತವ್ಯವೇನೆಂದಾಗಲೀ ಚಿಂತನೆಯನ್ನೇ ಮಾಡುತ್ತಲಿಲ್ಲ.

ಯಾವುದೂ ಅಸಾಧ್ಯವಲ್ಲ. ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವ ದಿಶೆಯಲ್ಲಿ ಅನೇಕರು ಪ್ರಯತ್ನ ಮಾಡುವಾಗ ಈ ದೇಶದ ಜನ ಇನ್ನೂ ಮೂಢರಾಗಿರಲಿಕ್ಕೂ ಸಾಕು. ಆಗ ಸಮೂಹ ಮಾಧ್ಯಮಗಳೂ ಇಷ್ಟು ಸುಲಭವಾಗಿ ಲಭ್ಯವಿರಲಿಲ್ಲ. ಜೊತೆಗೆ ಆಳರಸರ ಕೆಂಗಣ್ಣಿನಡಿಯಲ್ಲೇ ಕೆಲಸ ಮಾಡಬೇಕಾದ ಪರಿಸ್ಥಿತಿ. ಆದರೆ ಒಂದು ಅವಧಿಯ ಜನ ತನು-ಮನ-ಧನ-ಪ್ರಾಣ ಎಲ್ಲವನ್ನೂ ಪಣಕ್ಕಿಟ್ಟು ಸ್ವಾತಂತ್ರ್ಯಗಳಿಕೆಗೆ ಸಿದ್ಧರಾದರು. ಆ ತ್ಯಾಗ-ಸಮರ್ಪಣೆಗಳೇ ಬ್ರಿಟಿಷರನ್ನು ನಡುಗಿಸಿದವು. ಜಪಾನ್ ದೇಶದ ಮೇಲೆ ಅಮೆರಿಕಾ ಬಾಂಬ್ ಹಾಕಿದಾಗ ಎರಡು ದೊಡ್ಡ ಪಟ್ಟಣಗಳು ನಾಶವಾದವು. ಹುಲ್ಲೂ ಬೆಳೆಯದ ಪರಿಸ್ಥಿತಿ ನಿರ್ಮಾಣವಾಯಿತು ; ಆದರೆ ಆ ಜನ ಛಲವಂತರು, ದೇಶ ಪ್ರೇಮಿಗಳು. ದೇಶವನ್ನು ಪುನರ್ನಿರ್ಮಾಣ ಮಾಡುವ ಛಲ ತೊಟ್ಟರು. ಇಂದು ಅಮೆರಿಕಾ ಸಹಿತ ಹೆದರುವಂತಹ ಶಕ್ತಿಯಾಗಿ ಆ ಪುಟಾಣಿ ದೇಶ ಬೆಳೆದಿದೆ. ತಮ್ಮ ದೇಶವು ತಲೆಎತ್ತಿ ನಿಲ್ಲುವಂತೆ ಮಾಡಲು ಆ ಜನರು ಅಗತ್ಯಕ್ಕಿಂತಲೂ ಹೆಚ್ಚು ದುಡಿದರು. ಸುತ್ತಲೂ ಶತ್ರುದೇಶಗಳನ್ನಿಟ್ಟುಕೊಂಡು ಇಸ್ರೇಲ್ ಬೆಳೆದಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಭಾರತ ದೇಶ ಇವೆಲ್ಲ ದೇಶಗಳಿಂದ ಕಲಿಯಬೇಕಾದ ಆದರ್ಶ ಬಹಳ ಇವೆ.

ಯಾರು ಹಿತವರು ನಿಮಗೆ ಈ ನಾಲ್ವರೊಳಗೆ ? ಎಂದು ಕಾಂಗ್ರೆ, ಜನತಾದಳ, ಭಾಜಪ ಮತ್ತು ಕಮ್ಯುನಿಸ್ಟ ಪಕ್ಷಗಳ ಬಗ್ಗೆ ಕೇಳಿದರೆ ಎಲ್ಲರ ಬಗ್ಗೆ ಸಂದೇಹ ಪಡುತ್ತಾರೆ ವಿಚಾರ ಶೀಲರಾದ ಜನ. ಕಮ್ಯುನಿಸಮ್ ಒಂದು ಸೈದ್ಧಾಂತಿಕ ನೆಲೆಯ ಮೇಲೆ ಇದ್ದರೂ, ದೇವರು-ಧರ್ಮ-ಆತ್ಮ ಪಾಪಪುಣ್ಯ ಒಪ್ಪದ ಅದು ಶ್ರೀಸಾಮಾನ್ಯ ಭಾರತೀಯನನ್ನು ಆಕರ್ಷಿಸಲಾರದು. ಜ್ಯೋತಿಬಸು ಅವರಂಥ ಉನ್ನತ ರಾಜಕಾರಣಿಗಳ ವ್ಯಕ್ತಿತ್ವಬಲದಿಂದ ಭಾರತದಲ್ಲಿ ಉಳಿದಿದ್ದರೂ, ತನ್ನ ಗಂಡುಮೆಟ್ಟಿನ ನೆಲಗಳಲ್ಲಿಯೇ ಕಮ್ಯುನಿಸಮ್ ಕುಸಿಯುತ್ತಲಿದೆ.

ಕಾಂಗ್ರೆಗೆ ತನ್ನದೇ ಆದ ಪರಂಪರೆ ಸಹಿತ ಸಿದ್ಧಾಂತದ ಅಡಿಪಾಯವಿಲ್ಲ. ಈಗ ಅದು ಪೂಜ್ಯ ಬಾಪೂಜಿಯವರಂಥ ಆದರ್ಶ ಚಿಂತಕರ ವಿಚಾರಧಾರೆಯಿಂದ ಬಹುದೂರ ಸರಿದಿದೆ. ಇನ್ನು ಆ ಆದರ್ಶದ ಬಳಿ ಸಾಗಲಾರದಂತಹ ಜನರನ್ನು ತನ್ನ ಅನುಯಾಯಿಗಳನ್ನಾಗಿ ಹೊಂದಿದೆ. ಅಧಿಕಾರಕ್ಕಾಗಿ ಕಚ್ಚಾಡುವ ಜನರನ್ನು ಕಂಡು, ಅಧಿಕಾರಕ್ಕೆ ಬರುತ್ತಲೇ ಮದಾಂಧರಾಗಿ ವರ್ತಿಸುವ ಜನರನ್ನು ಕಂಡು ಜನರು ಅಸಹ್ಯ ಪಡುವಂತಾಗಿದೆ. ಬ್ರಿಟಿಷರು ಇದ್ದ ಕಾಲದಲ್ಲಿ ಜಾತಿಜಾತಿಗಳಲ್ಲಿ ಈ ವೈಷಮ್ಯ ಇತ್ತೊ ಇಲ್ಲವೋ. ಕಾಂಗ್ರೆಸ್ ರಾಜಕಾರಣದಲ್ಲಿ ಮಾತ್ರ ಎಷ್ಟು ಬೆಳೆಯಬೇಕೋ ಅಷ್ಟು ಬೆಳೆದಿದೆ. ತಾವು ಅಧಿಕಾರಕ್ಕೆ ಬರಲು, ಅದಕ್ಕಂಟಿ ಊರಲು ಗುಂಪುಗಳನ್ನು ಕಟ್ಟಿ ವೈಷಮ್ಯ ಬೆಳೆಸಿ ರಾಜಕಾರಣಿಗಳು ತಮ್ಮ ಹಿಡಿತ ಬಲಪಡಿಸಿಕೊಳ್ಳುತ್ತಿದ್ದಾರೆ. ಗಡ್ಡಕ್ಕೆ ಬೆಂಕಿ ಹಚ್ಚಿ ಆ ಬೆಂಕಿಯಿಂದ ಸಿಗರೇಟು ಹಚ್ಚಿಕೊಳ್ಳಬೇಕೆನ್ನುವ ವಿಕೃತ ಮನೋಭಾವವನ್ನು ಕಾಣುತ್ತೇವೆ. ಈ ನೇತಾರರು ತೋರಿಸುವ ಪರಿಹಾರ ಕ್ರಮ ನೋಡಿದರೆ ಇವರೆಷ್ಟು ಚಿಂತನಶೀಲರು ಎಂದು ಸಂದೇಹ ಬರದೆ ಇರದು.

"ಕನ್ನಡವನ್ನು ಆಡಳಿತ ಭಾಷೆಯಾಗಿ ಕಡ್ಡಾಯವಾಗಿ ಜಾರಿಗೆ ತರುವ ಸರಕಾರದ ಪ್ರಥಮ ಕಾರ್ಯಕ್ರಮದ ಅಂಗವಾಗಿ ವಿಧಾನ ಸೌಧದಲ್ಲಿರುವ ಎಲ್ಲ ಇಂಗ್ಲೀಷ್ ನಾಮಫಲಕಗಳಿಗೆ ಕೆಲವೇ ದಿನಗಳಲ್ಲಿ ಕಪ್ಪು ಬಣ್ಣ ಬಳಿಯುವುದಾಗಿ" ಕನ್ನಡ ಸಂಸ್ಕೃತಿ ಖಾತೆ ಸಹಾಯಕ ಸಚಿವ ವಿಶ್ವನಾಥ ಹೇಳಿದುದಾಗಿ ದಿ. 8-2-93 ರಂದು ಪ್ರಕಟವಾದ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಬಂದಿದೆ.

ಇದು ಸೂಕ್ತಪರಿಹಾರವೆ ? ಬೇರೆ ರಾಜ್ಯಗಳಿಂದ ಜನರು ಕಾರ್ಯ ನಿಮಿತ್ತ ಬರಬಹುದು. ಅಂಥ ಸ್ಥಳದಲ್ಲಿ ಕೇವಲ ಇಂಗ್ಲೀಷ್ ಬೋರ್ಡ ಇದ್ದರೆ ಜೊತೆಗೆ ಕಡ್ಡಾಯವಾಗಿ ಕನ್ನಡ ಬೋರ್ಡ್ ಹಾಕುವುದು ವಿವೇಕವೇ ವಿನಾ ಇಂಗ್ಲೀಷ್ ಬೋರ್ಡಿಗೆ ಕಪ್ಪು ಬಳಿಯುವುದಲ್ಲ.

ಅಮೆರಿಕಾ, ಇಂಗ್ಲಂಡ್‌ಗಳಲ್ಲಿಯೂ ಮುಸ್ಲಿಮ್ ಧರ್ಮಾನುಯಾಯಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ ಭಾರತದಲ್ಲಿ ನಡೆಯುವ ಹಿಂಸಾಕಾಂಡಗಳು ಅಲ್ಲೆಲ್ಲೂ ನಡೆಯುತ್ತಲಿಲ್ಲ. ಅಮೆರಿಕಾ ಸಹಾ ಮುಕ್ತದೇಶ. ಅವರ ಧರ್ಮಪಾಲನೆಗೆ ಆಯಾ ಅನುಯಾಯಿಗಳಿಗೆ ಅವಕಾಶ ನೀಡುತ್ತದೆ. 'ಆದರೂ' ಅಲ್ಲಿ ಕ್ರೈಸ್ತ-ಮುಸ್ಲಿಂ ಗಲಭೆ ಸಂಭವಿಸುವುದಿಲ್ಲ. ಯಾವ ರೀತಿ ಅಲ್ಲಿ ನಿಯಂತ್ರಣ ಸಾಧ್ಯವಾಗಿರಬಹುದು ಎಂಬ ಬಗ್ಗೆ ಅಧ್ಯಯನ ಮಾಡುವ ರಾಜಕಾರಣ ಮುತ್ಸದ್ದಿಗಳು ಎಷ್ಟು ಜನರಿದ್ದಾರೆ ?.

ಕೋಮು ಸೌಹಾರ್ದತೆಗಾಗಿ ಓಟ, ಅದಕ್ಕಾಗಿ ಸರ್ಕಾರದ ಪ್ರಚಾರ ! ಕೋಮು ಸೌಹಾರ್ದತೆಗಾಗಿ ಮಾನವ ಸರಪಳಿ; ಅದೂ ಸರ್ಕಾರಿ ಅಧಿಕಾರಿಗಳಿಂದ, ಶಾಲೆಯ ಪುಟ್ಟಮಕ್ಕಳಿಂದ! ಮಂತ್ರಿಗಳ ಸ್ವಾಗತದಿಂದ ಹಿಡಿದು ಎಲ್ಲ ಸರ್ಕಾರಿ ಕಾರ್ಯಕ್ರಮಕ್ಕೆ ಸಿಗುವವು ಶಾಲಾಮಕ್ಕಳು ತಾನೆ ? ಇಂತಹ ತಮಾಷೆಯ ಆಟಗಳಿಂದ ಪೇಪರ್ ಪ್ರಚಾರ ಸಿಗುವುದಷ್ಟೆ ಅಷ್ಟೆ. ಯಾವ ವಿಧಾಯಕ ಪರಿಹಾರವೂ ಲಭ್ಯವಾಗದು,

ಹುಬ್ಬಳ್ಳಿಯ ಈದಗಾ ಮೈದಾನದಲ್ಲಿ ಜನವರಿ 26, ಗಣರಾಜ್ಯೋತ್ಸವದಂದು ಧ್ವಜಾರೋಹಣ ಮಾಡುತ್ತೇನೆಂದು ಬಿ. ಜೆ. ಪಿ. ಇದಕ್ಕೆ ಬಿಡುವುದಿಲ್ಲವೆಂದು ಕಾಂಗ್ರೈ ಸರ್ಕಾರ. ಒಳ್ಳೆಯ ಕಬಡ್ಡಿ ಆಟದಂತೆ ಇಬ್ಬರ ಚಟುವಟಿಕೆ. ಒಮ್ಮೊಮ್ಮೆ ಅನ್ನಿಸುತ್ತೆ. ಇವರಿಬ್ಬರೂ ಒಂದೇ, "ನೀ ಸತ್ತಾಂಗ ಮಾಡು ನಾನು ಅತ್ತಾಂಗ ಮಾಡ್ತೇನೆ" ಎಂಬ ಧೋರಣೆ ಇಬ್ಬರದು. ಇಬ್ಬರಿಗೂ ಈ ಪ್ರಸಂಗಗಳು ವಿರಸಗಳು ಜೀವಂತವಾಗಿರಬೇಕು. ನಾನು ರಾಷ್ಟ್ರಪ್ರೇಮಿ ಎಂದು ತೋರಿಸಿಕೊಳ್ಳುವ ಪ್ರವೃತ್ತಿ ಭಾ. ಜ. ಪ. ದ್ದು ನಾನು ಮುಸ್ಲಿಂ ಹಿತಚಿಂತಕ ಎಂದು ತೋರಿಸಿಕೊಳ್ಳುವ ಬೂಟಾಟಿಕೆ ಕಾಂಗ್ರೈ ಸರ್ಕಾರದ್ದು: ಇದಕ್ಕಾಗಿ ಸೈನ್ಯ, ಪೋಲೀಸ್, ಎಲ್ಲವೂ ತುದಿಗಾಲ ಮೇಲೆ! ಮುಸ್ಲೀಂ ಧುರೀಣರನ್ನು ಸಭೆ ಸೇರಿಸಿ "ನೀವು ದೇಶನಿಷ್ಠರಲ್ಲ ಎಂದು ಭಾ. ಜ. ಪ. [ಅಪ] ಪ್ರಚಾರ ಮಾಡುತ್ತಿದೆ. ಇದನ್ನು ಸುಳ್ಳು ಎಂದು ತೋರಿಸಿರಿ. ಹುಬ್ಬಳ್ಳಿಯ ಈದಗಾ ಮೈದಾನದಲ್ಲಿ ವರ್ಷಕ್ಕೊಂದು ದಿನ ಪ್ರಾರ್ಥನೆ ಬಿಟ್ಟರೆ, ಅಲ್ಲಿ ಕತ್ತೆಗಳು-ಹಂದಿಗಳು ಮಲಗಿರುತ್ತವೆ. ಕುಂಚಿಕೊರವರು, ಅಲೆಮಾರಿಗಳು ಟೆಂಟ್ ಹಾಕಿರುತ್ತಾರೆ. ಇದಕ್ಕಿಂತಲೂ ರಾಷ್ಟ್ರಧ್ವಜಾರೋಹಣ ಕೀಳೆ ? " ಎಂದು ಮುಸ್ಲೀಮರಿಗೆ ಸರ್ಕಾರ ಬುದ್ಧಿ ಹೇಳಬಾರದಿತ್ತೇ ? ಈದಗಾ ಮೈದಾನದಲ್ಲಿ ರಾಷ್ಟ್ರಧ್ವಜಾರೋಹಣ ಬೇಡ ಎಂದು ಯಾವ ಮುಸ್ಲೀಮರಾದರೂ ಧ್ವನಿ ಎತ್ತಿದ್ದಾರೆಯೇ ? ಕಾಂಗ್ರೈ-ಭಾಜಪ ಇಬ್ಬರೂ ಸೇರಿಕೊಂಡು ಮುಸ್ಲೀಮರು ಧ್ವಜಾರೋಹಣಕ್ಕೆ ವಿರೋಧಿಗಳೆಂಬಂತೆ ಭಾವನೆ ಬೆಳೆಸುತ್ತಿರುವರಲ್ಲವೆ ? ಇದರಿಂದಾಗಿ ಸೌಮ್ಯವಾದಿ ಹಿಂದೂಗಳು ಸಹ ಮುಸ್ಲೀಮ್ ವಿರೋಧಿಗಳಾಗರೇ ? ಈ ದೇಶದ ಹಿತಚಿಂತಕರಾದವರು ಈ ರೀತಿ ವರ್ತಿಸಬಲ್ಲರೆ ?

ಯಾವ ಸಮಸ್ಯೆಯ ಬಗ್ಗೆಯೂ ಗಹನವಾಗಿ ಚಿಂತಿಸದೆ ಸಮಸ್ಯೆಗಳನ್ನು ಮುಂದೆ ತಳ್ಳಿಕೊಂಡೇ ಹೋಗುವ ಪ್ರವೃತ್ತಿ, ಆದದ್ದಾಗಲೀ ಎಂಬ ಉದಾಸೀನ ಮನೋಭಾವ ಕಾಂಗ್ರೈದಲ್ಲಿ ಕಾಣುತ್ತೇವೆ." ಇವೆಲ್ಲ ಸಮಸ್ಯೆ ಪರಿಹಾರವಾಗುವವಲ್ಲ. ಆದ್ದರಿಂದ ಅಧಿಕಾರದಲ್ಲಿರುವ ಸುಸಂದರ್ಭದಲ್ಲೇ ನಮ್ಮ, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಸುಖವಾಗಿ ಬದುಕಲು ಬೇಕಾದ ಆಸ್ತಿ ಪಾಸ್ತಿ ಮಾಡಿಕೊಳ್ಳೋಣ ಎಂಬ ಭಾವ ಬಹುಪಾಲು ರಾಜಕಾರಣಿಗಳಲ್ಲಿ ಬಲಿಯುತ್ತಿದೆ.

ಹೀಗಾಗಿ ಯಾವ ಸೈದ್ಧಾಂತಿಕ ಹಿನ್ನೆಲೆ, ಖಚಿತ ಧ್ಯೇಯವಿಲ್ಲದ ಕಾಂಗ್ರೈ ದಿಕ್ಸೂಚಿಯಿಲ್ಲದ ಹಡಗಿನಂತಾಗಿದೆ.

ಜನತಾದಳವಂತೂ ಸೋರುವ ಮನೆಯಾಗಿ, ನಗೆಪಾಟಲಿಗೆ ಗುರಿಯಾಗಿದೆ. ಕೊಂಚಕಾಲ ನಿರಾಸೆಯ ಕಾರ್ಮೋಡದ ಹಿಂದೆ ಹೊಂಗಿರಣಗಳನ್ನು ತೂರಿಸಿ ಆಶಾಭಾವ ಹುಟ್ಟಿಸಿದ್ದ ಜನತಾ ದಳ ಈಗ ಆತ್ಮ ವಿಶ್ವಾಸವಿಲ್ಲದೆ ಹತಚೇತನಗೊಂಡಿದೆ. ತೋರಿಕೆಗಾಗಿ ಜನತಾ ದಳದ ನಾಯಕರು ಆತ್ಮವಿಶ್ವಾಸದ ಮಾತುಗಳನ್ನಾಡಿದರೂ ಅದು ಪೊಳ್ಳೆಂಬುದು ಹೇಳಿಕೆ ಕೊಡುವವರಿಗೂ ಗೊತ್ತು; ಪತ್ರಿಕೆಗಳಲ್ಲಿ ಪ್ರಕಟಿಸುವವರಿಗೂ ಗೊತ್ತು ಓದುವ ಜನರಿಗೂ ಗೊತ್ತು. ಜನತಾ ದಳ ನಾಯಕರ ಸರಸ-ವಿರಸಗಳು ಎಲಿಜಬೆತ್ ಟೇಲರ ಎಂಬ ಸಿನಿಮಾ ನಟಿಯ ವಿವಾಹ ಮತ್ತು ವಿಚ್ಛೇದನಗಳಂತೆ, "ಸಿಟಿ ಟುಡೇ" ಕಾಲಮ್‌ದಲ್ಲಿ ಬರುವಷ್ಟೇ ಆಯುಷ್ಯ ಉಳ್ಳವು ಎಂದೂ ಜನ ತಿಳಿಯುತ್ತಿದ್ದಾರೆ.

ಇನ್ನು, ಸದ್ಯದಲ್ಲಿ ಗರ್ಜಿಸುತ್ತಿರುವ ಹುಲಿ ಭಾ. ಜ. ಪ. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ವಿಶ್ವಮಾನ್ಯ ಸತ್ಯವನ್ನು ಬೋಧಿಸಿದ, ಜಡ ದೇವಾಲಯ ನಿರ್ಮಾಣದಲ್ಲಿ ಆಸಕ್ತರಾಗಬೇಡಿ, ಜಂಗಮ ದೇವಾಲಯವಾದ ಮಾನವ ಸಮಾಜ, ಜ್ಞಾನ ದೇಗುಲದ ಹಿತಾಸಕ್ತಿಯ ಬಗ್ಗೆ ಚಿಂತಿಸಿರಿ ಎಂದು ಸಾರಿದ ಕ್ರಾಂತಿ ಪುರುಷ ಬಸವಣ್ಣನವರ ಧರ್ಮದಲ್ಲಿ ಹುಟ್ಟಿ, ಧರ್ಮಗುರುವಿನ ಆದೇಶಕ್ಕೆ ವಿರುದ್ಧವಾಗಿ ಮಸೀದಿ ಕೆಡವಲು ಹೋದ ಎಡೆಯೂರಪ್ಪನಂಥವರ ಮೇಲೆ ನಿಂತಿದೆ. ಭಾ.ಜ.ಪ. ದವರಿಗೆ ವಿಧಾಯಕ ಆಲೋಚನೆಗಳೇ ಇಲ್ಲ, ಗುಡಿಯ ನಿರ್ಮಾಣವೇ ಬಹುದೊಡ್ಡ ಗುರಿ. ಈ ದೇಶದಲ್ಲಿ ಅನಿವಾರ್ಯವಾಗಿ ಮತೀಯ ಸಾಮರಸ್ಯ ಅಗತ್ಯವಿದೆ. ಆದ್ದರಿಂದ ಪರಸ್ಪರರಲ್ಲಿ ನಂಬಿಕೆ, ಪ್ರೀತಿ, ವಿಶ್ವಾಸ ಹುಟ್ಟಿಸುವುದಕ್ಕೆ ಬದಲಾಗಿ ದ್ವೇಷ, ಸಂಶಯಗಳನ್ನು ಭಾ. ಜ. ಪ. ಬಿತ್ತಿ ಹಾವು ಹೊಕ್ಕ ಮನೆಯಲ್ಲಿ ವಾಸಮಾಡುವವ ನಿದ್ದೆಯಿಲ್ಲದೆ ರಾತ್ರಿ ಕಳೆಯುವ ಪರಿಸ್ಥಿತಿಯನ್ನೂ ಉಭಯತರಲ್ಲೂ ತಂದೊಡ್ಡಿದೆ. ಜನರಲ್ಲಿ ಧರ್ಮದತ್ತ ಒಲವು ಜಾಸ್ತಿಯಾಗಿ, ಧರ್ಮಾಧಾರಿತ ರಾಜಕೀಯ ಪಕ್ಷಕ್ಕೆ ಸಹಕಾರ ನೀಡಬೇಕೆಂಬ ಮನೋಭಾವ (ಕಾಂಗ್ರೆಸ್ಸಿನ ಪಕ್ಷಪಾತ ನೀತಿಯಿಂದಾಗಿ) ಬಲಿಯುತ್ತಿದ್ದರೂ, ಭಾಜಪರ ಡಿಸೆಂಬರ್ 6 ರ ವರ್ತನೆಯಿಂದಲೂ, ಆ ನಂತರ ನಡೆದ ಹಿಂಸಾಕೃತ್ಯಗಳಿಂದ ಇಡೀ ದೇಶವೇ ತಲ್ಲಣಿಸಿ ಹೋಗಿದೆ. ಕಾಂಗ್ರೆಸ್ಸಿನ ಧೋರಣೆಯಿಂದ ಬಹುಪಾಲು ಹಿಂದೂಗಳು ಬೇಸತ್ತಿದ್ದರೂ, ಭಾಜಪದ ಮಸೀದಿ ನಾಶದಂತಹ ಅಸಹ್ಯ ಕೃತ್ಯಕ್ಕೆ ಬೆಂಬಲ ನೀಡುವ ಮಂದಿ ಕಡಿಮೆ. ಇದರಿಂದಾಗಿ ಯಾರು ಹಿತವರು ನಿನಗೆ ಈ ನಾಲ್ವರೊಳಗೆ? ಎಂದು ಪ್ರಶ್ನಿಸಿದರೆ ತಟ್ಟನೆ ಉತ್ತರಿಸುವ ಸ್ಥಿತಿಯಲ್ಲಿ ಭಾರತೀಯನಿಲ್ಲ.

ಬಸವ ತತ್ತ್ವ ಆಧಾರಿತ ಪಕ್ಷ ರಚನೆ

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷವೊಂದರ ರಚನೆ ಅಗತ್ಯವಾಗಿದೆ. ಕೋಮು ಗಲಭೆ ಹಿಂಸಾಚಾರ ವಿಜೃಂಭಿಸುವಾಗ ಅಲ್ಲಲ್ಲೇ ಬಸವಣ್ಣನವರ ನುಡಿಮುತ್ತುಗಳು ಕೆಲವು ಕಾಣಿಸಿಕೊಂಡವು.

ದಯವಿಲ್ಲದ ಧರ್ಮವದೇವುದಯ್ಯಾ ?

ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಕುಲಜ ಎಂಬ ವಾಕ್ಯವುಳ್ಳ ಭಿತ್ತಿ ಪತ್ರಗಳು ಕನ್ನಡ-ಇಂಗ್ಲೀಷ್-ಉರ್ದು ಭಾಷೆಗಳಲ್ಲಿ ಕರ್ನಾಟಕದ ರಾಜಧಾನಿ ಬೆಂಗಳೂರಲ್ಲಿ ಕಾಣಿಸಿಕೊಂಡವು "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಮಹಾನ್

ಸೂತ್ರವನ್ನು ಅನೇಕರು ಉದಾಹರಿಸಿದರು. (ಸುಧಾ, ಜನವರಿ 3) ಬಸವಣ್ಣನವರ ತತ್ತ್ವವು ಇಂದಿನ ಕಲುಷಿತ ವಾತಾವರಣದಲ್ಲಿ ಏನಾದರೂ ದಿಗ್ದರ್ಶನ ಮಾಡಬಲ್ಲುದೆ? ಕೆಲವರು ಹೀಗೆ ಪತ್ರ ಬರೆದರು..:

"ಕರ್ನಾಟಕದಲ್ಲಿ ಲಿಂಗಾಯತರು ಎಷ್ಟು ಸಂಖ್ಯೆಯಲ್ಲಿದ್ದಾರೆ? ಇವರಿಗೇ ಒಂದು ಪಕ್ಷ ಕಟ್ಟಲು ಸಾಧ್ಯವೆ ?"

"ಈ ಕಾಲದಲ್ಲಿ ಲಿಂಗಕಟ್ಟಿರಿ, ರುದ್ರಾಕ್ಷಿ-ವಿಭೂತಿ ಧರಿಸಿರಿ ಎಂದರೆ ಯಾರು ಪಾಲಿಸುವರು ?"

ಈ ರೀತಿ ಆಲೋಚಿಸುವವರಿಗೆ ಸಮ್ಯಕ್ ದೃಷ್ಟಿ ಇಲ್ಲ ಎಂದು ಖಚಿತವಾಗಿ ಹೇಳಬಹುದು. ಏಕೆಂದರೆ ಯಾವುದೇ ರಾಜಕೀಯ ಪಕ್ಷ ಯಾವುದೇ ಜನಾಂಗ, ಜಾತಿ, ಸಮಾಜಕ್ಕೆ ಸೀಮಿತವಲ್ಲ. ವಾಸ್ತವಿಕವಾಗಿ ಹೇಳುವುದಾದರೆ ಜಾತಿವಾದಿ ಲಿಂಗಾಯತರು ಬಸವ ತತ್ತ್ವವನ್ನು, ಬಸವಣ್ಣನನ್ನು ನಖಶಿಖಾಂತವಾಗಿ ದ್ವೇಷಿಸಿದರೆ, ತತ್ತ್ವನಿಷ್ಠರೂ ಜಾತ್ಯತೀತ ಧೋರಣೆಯುಳ್ಳ ಲಿಂಗಾಯತೇತರರೇ ಬಸವ ತತ್ತ್ವವನ್ನು, ಬಸವಣ್ಣನನ್ನು ಹೆಚ್ಚು ಪ್ರೀತಿಸುವರು. 'ವೇದವೆಂಬುದು ನಿಮಗೆ ತಿಳಿಯದು' ಎಂದು ಬಸವಣ್ಣನವರು ಮಡಿವಂತ ವೈದಿಕರನ್ನು ಕುರಿತು ಹೇಳಿದಂತೆ, 'ಬಸವಣ್ಣನವರನ್ನು (ಅವರ ಉದಾತ್ತ ಕಳಕಳಿಯನ್ನು) ನೀವು ಅರಿಯಿರಿ' ಎಂದು ಜಾತಿವಾದಿ ವೀರಶೈವರಿಗೆ ಹೇಳುವ ಕಾಲ ಇಂದು ಬಂದಿದೆ.

ಧರ್ಮಾಧಾರಿತ ರಾಜಕಾರಣವೆಂದರೆ ಧರ್ಮಲಾಂಛನಗಳ ಮೇಲೆ ನಿಂತುದಲ್ಲ; ಧಾರ್ಮಿಕ ಮೌಲ್ಯಗಳಲ್ಲಿ ನಂಬಿಕೆಯುಳ್ಳದು ಎಂದರ್ಥ. ಧರ್ಮಾಚರಣೆ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ್ದು ; ನನಗಂತೂ ಅನ್ನಿಸುತ್ತಿದೆ. ಸರ್ಕಾರಗಳು ಯಾವುದೇ ಮಸೀದಿ, ಮಂದಿರ, ಗುರುದ್ವಾರ ಕಟ್ಟಲು ಹಣ ಕೊಡಕೂಡದು. ತಮಗೆ ಧರ್ಮದ ಆಗತ್ಯವಿದೆ ಎಂದು ಕಂಡುಕೊಂಡ ಜನ ತಾವು ಗಳಿಸಿದ್ದರಲ್ಲಿ ಒಂದು ಪಾಲನ್ನು ದೇಣಿಗೆಯಾಗಿ ಕೊಟ್ಟು, ಬೇಕಾದ ಧರ್ಮ ಮಂದಿರ ಕಟ್ಟಿಕೊಳ್ಳಲಿ. ಸರ್ಕಾರ ಕೇವಲ ವಿದ್ಯಾಲಯ, ಆಸ್ಪತ್ರೆ, ಅಣೆಕಟ್ಟು ಇತ್ಯಾದಿ ಸಾರ್ವಜನಿಕ ಉಪಯೋಗದ ಕೆಲಸಕ್ಕೆ ಮಾತ್ರ ಕೈಹಾಕಬೇಕು.

ಒಬ್ಬರಿಗೆ ಹೇಳಿದೆ. 'ನೀವು ಬಸವ ತತ್ತ್ವಾಧಾರಿತ ರಾಜಕೀಯ ಪಕ್ಷ ಎಂದ ತಕ್ಷಣ ಲಿಂಗ, ವಿಭೂತಿ, ರುದ್ರಾಕ್ಷಿ, ಎಂದು ಆಲೋಚಿಸುವುದು ಎಷ್ಟು ಹಾಸ್ಯಾಸ್ಪದ? ಬಸವ ತತ್ತ್ವದ ಸಾರವೇನು ? ಎಂದು ಮೊದಲು ನಾವು ಚಿಂತಿಸಬೇಕು. ಈಗ ನೀವು ಪೈನ್ ಆಪಲ್ ಎಸೆನ್ಸ್ ತೆಗೆಯುತ್ತೀರಿ ; ಕೇಸರಿಭಾತ್ ಮಾಡುವಾಗ ಹಾಕುತ್ತೀರಿ. ಅದರಲ್ಲಿ ಪೈನ್ ಆಪಲ್ ವಾಸನೆ ಬರುತ್ತೆ. ಮಲ್ಲಿಗೆ, ಸಂಪಿಗೆ ಹೂಗಳ ಎಸೆನ್ಸ್ ತೆಗೆದು ಬೆರೆಸುವುದು ಊದುಬತ್ತಿಗಳಿಗೆ, ಪೌಡರ್‌ಗಳಿಗೆ ಇತ್ಯಾದಿ. ಹಾಗೆಯೇ ಇದೂ ಸಹ.

1. ದೇವನು ಒಬ್ಬ.
2. ಮಾನವರೆಲ್ಲರೂ ಸಮಾನರು.
3. ದಯವೇ ಧರ್ಮದ ಮೂಲವಾಗಬೇಕು.
4. ಕಾಯಕವೇ ಕೈಲಾಸವೆಂದು ಎಲ್ಲರೂ ದುಡಿಯಬೇಕು.
5. ಯಾರು ಕುಲಜರು ? ಸಕಲ ಜೀವರಿಗೆ ಲೇಸು ಬಯಸುವವರು ಇತ್ಯಾದಿ.
6. ಸಮಾಜ ರಾಷ್ಟ್ರಗಳನ್ನು ದುಡಿತದ ಬಲದ ಮೇಲೆ ಕಟ್ಟಬೇಕು, ದುಡ್ಡಿನ ಮೇಲೆ ಅಲ್ಲ.

ಹೀಗೆ ಬಸವ ತತ್ತ್ವದ ಸಾರವನ್ನು ತೆಗೆದು ರಾಜಕೀಯ ಪಕ್ಷವೊಂದರ ಪ್ರಣಾಳಿಕೆ ಸಿದ್ಧಪಡಿಸಬೇಕು. ನನಗೆ ವಿಶ್ವಾಸವಿದೆ ಧರ್ಮವಾದಿ ಹಿಂದು, ಮುಸ್ಲಿಮ್, ಕ್ರೈಸ್ತ, ಎಲ್ಲರನ್ನೂ ಬಸವ ತತ್ತ್ವವು ಆಕರ್ಷಿಸಬಲ್ಲುದು. ನಾನೊಮ್ಮೆ ಆಲೋಚಿಸುತ್ತ, ಹುಡುಕಿದೆ ಬಸವಾದಿ ಪ್ರಮಥರು ಎಲ್ಲಿಯಾದರೂ ವೈಷ್ಣವ ದೇವಾಲಯಗಳನ್ನು ನಾಶ ಮಾಡಿದ್ದಾಗಲೀ, ಜೈನ ಬಸದಿಗಳನ್ನು ಹಾಳು ಮಾಡಿದ್ದಾಗಲೀ ಇದೆಯೆ ? ಇಲ್ಲ : ಎಲ್ಲಿಯೂ ಇಲ್ಲ. ಅವರು ಗುಡಿ–ಬಸದಿಗಳ ಎಲ್ಲೆ ದಾಟಿ ಬಯಲಿಗೆ ಬಂದರು; ಹೃದಯ–ಮನಸ್ಸುಗಳನ್ನು ಬಯಲಿನಷ್ಟು ವಿಶಾಲ ಮಾಡಿಕೊಂಡರು; ಆ ವೈಶಾಲ್ಯತೆಯ ಪ್ರತೀಕವಾಗಿ ಅನುಭವ ಮಂಟಪ ಕಟ್ಟಿದರು. ಕೆಲವು ಶಿವಭಕ್ತರು ಜೈನ ಬಸದಿಗಳನ್ನು ನಾಶ ಮಾಡಿ, ಶಿವ ಲಿಂಗಗಳನ್ನು ಸ್ಥಾಪಿಸಿದ್ದು ಉದಾಹರಣೆಗೆ ಏಕಾಂತದ ರಾಮಯ್ಯ, ಬೌದ್ಧಾಚಾರ್ಯರ ಶಿರ ಕತ್ತರಿಸಿದ್ದು. ಉದಾ: ಮಲ್ಲಿಕಾರ್ಜುನ ಪಂಡಿತಾರಾಧ್ಯ ಮುಂತಾದ್ದು ಕಾಣುತ್ತೇವೆ. ಬಸವಣ್ಣನವರೇ ಆದಿಯಾಗಿ, ಆ ಪರಂಪರೆಯ ಶರಣರು ಇಂಥ ಕೃತ್ಯಗಳನ್ನು ಮಾಡ ಹೋಗಲೇ ಇಲ್ಲ. ಏಕೆಂದರೆ ಇವರು ಶಿವಭಕ್ತರೂ ಅಲ್ಲ ವಿಷ್ಣುಭಕ್ತರೂ ಅಲ್ಲ ದೇವ ಭಕ್ತರು. ಅಭಿಪ್ರಾಯ ಭೇದ ಇದ್ದ ಮಾತ್ರಕ್ಕೆ ಅವರನ್ನು ನಾಶ ಮಾಡಬೇಕು ಎಂಬ ಕ್ರೌರ್ಯ ಶರಣರಲ್ಲಿಲ್ಲ ; ಹೃದಯ ಪರಿವರ್ತನೆಗೆ ಅವರು ಆದ್ಯತೆ ಕೊಟ್ಟರು. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ." ಎಂತಹ ಅದ್ಭುತ ಮಾತು ! ಸ್ಥಾವರಕ್ಕೆ ಜೋತು ಬಿದ್ದು ಜಂಗಮವನ್ನು ನೋಯಿಸುತ್ತಿರುವ ಎಲ್ಲ ಧರ್ಮಗಳ ಮತಾಂಧರಿಗೂ ಇದು ಅಮೂಲ್ಯ ಸಂದೇಶ.

ಭೌತಿಕ ಪ್ರಗತಿ, ನೈತಿಕ ಸಂತೃಪ್ತಿ, ಆಧ್ಯಾತ್ಮಿಕ ಸುಯಿಧಾನ ಮೂರೂ ಪ್ರಾಪ್ತಿಯಾಗಿ ವ್ಯಕ್ತಿ–ಸಮಾಜ–ರಾಷ್ಟ್ರಗಳು ಸಮಗ್ರವಾಗಿ, ಸುಂದರವಾಗಿ ಮೈದುಂಬಿಕೊಳ್ಳಬೇಕಾದರೆ **ಬಸವಾಯಿಸಮ್** ಖಂಡಿತ ಸಹಾಯಕವಾಗಬಲ್ಲದು. ಆದ್ದರಿಂದ ಈ ಬಗ್ಗೆ ಅಧ್ಯಯನ ಮಾಡಿ, ಯೋಜನೆ ರೂಪಿಸಲು ಪ್ರಜ್ಞಾವಂತರು ಮುಂದೆ ಬರಬೇಕು. ಎಷ್ಟೋ ಜನ ವಿಚಾರಶೀಲರಾದ ರಾಜಕಾರಣಿಗಳು ಇಂದಿನ ವಿಲಕ್ಷಣ ರಾಜಕೀಯದ ಕೊಳಚೆ ನೀರಿನಲ್ಲಿ ಕಾಲಿಡಲಾರದೆ, ತೆರೆಯ ಹಿಂದೆ ಸರಿದಿರಬಹುದು; ಅಂತರಂಗದಲ್ಲೇ ನೊಂದು ನಲುಗುತ್ತಿರಬಹುದು. ಅಂಥ ಹಿರಿಯರು, ಅನುಭವಿಗಳು ಆದರ್ಶ ಮತ್ತು

ಸಮೃದ್ಧ ರಾಷ್ಟ್ರವನ್ನು ಕಟ್ಟಬೇಕು ಎನ್ನುವ ಯುವ ಜನಾಂಗ ಒಂದಾಗಿ ಬಂದು ಹೊಸ ಆಂದೋಲನ ಆರಂಭಿಸಬೇಕು. ಅದಕ್ಕೀಗ ಕಾಲ ಮಾಗುತ್ತಿದೆ.

ಬಸವ—ಬಾಪು—ಬಾಬಾಸಾಹೇಬ್

ಬಸವಣ್ಣ ಮತ್ತು ಬಾಪೂಜಿಯವರ ವಿಚಾರಗಳಲ್ಲಿ ಬಹುಪಾಲು ಸಾಮ್ಯವಿದೆ. ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯವಿದೆ. ಆ ಚರ್ಚೆ ಇಲ್ಲಿ ಅಪ್ರಸ್ತುತ. ಬಸವಣ್ಣ ಮತ್ತು ಅಂಬೇಡ್ಕರರವರ ವಿಚಾರದಲ್ಲಿ ಇನ್ನೂ ಹೆಚ್ಚಿನ ಸಾಮ್ಯವಿದೆ. ಈ ಮೂವರ ವಿಚಾರಧಾರೆಗಳಲ್ಲಿರುವ ಸೈದ್ಧಾಂತಿಕ ಸಾರವನ್ನು ಸೇರಿಸಿ, ಇಂದಿನ ಭಾರತದ ಪರಿಸರಕ್ಕನುಗುಣವಾಗಿ ರಾಜಕೀಯ ಸಿದ್ಧಾಂತವನ್ನು ರೂಪಿಸಿ ದೇಶವನ್ನು ಕಟ್ಟುವ ಕಾರ್ಯಕ್ಕೆ ಯಾರಾದರೂ ಮುಂದಾಗಬೇಕಾಗಿದೆ. ಗಾಂಧೀಜಿಯವರ ವಿಚಾರಧಾರೆಯಲ್ಲಿ ಭಾರತದ ಪರಿಸರಕ್ಕೆ ಅನುಗುಣವಾದ ಕೆಲವು ಅಂಶಗಳಿವೆ. ಡಾ|| ಅಂಬೇಡ್ಕರರಲ್ಲಿ ಪ್ರಗತಿಪರ ವಿಚಾರ ಸರಣಿ ಇದೆ. ಈ ಇಬ್ಬರ ನಡುವೆ ವಿಚಾರಭೇದವಿದ್ದರೂ ಸಮತಾವಾದಿ ಬಸವಣ್ಣನವರ ಸಂದೇಶ ಪರಸ್ಪರರಲ್ಲಿ ಸಾಮರಸ್ಯ ಮೂಡಿಸಬಲ್ಲುದು. ಆದ್ದರಿಂದ ಈ ಮೂವರನ್ನು ಆದರ್ಶವಾಗಿಟ್ಟುಕೊಂಡು ರಾಜಕೀಯ ಪ್ರಣಾಳಿಕೆ ಸಿದ್ಧಪಡಿಸುವುದು ಬಲುಯೋಗ್ಯ. ಈ ಕಾರ್ಯಕ್ಕೆ ಪ್ರೇರಣೆ ನೀಡಲು ಈ ಕರೆ. ★

ಆರನೆಯ ಶರಣ ಮೇಳಕ್ಕೆ ಧನ ಸಹಾಯ ಗೈದವರು

1. ಪೂಜ್ಯ ಶ್ರೀಮನ್ ನಿರಂಜನ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಬಸವ ಧರ್ಮದ ಮಹಾ ಜಗದ್ಗುರು ಪೀಠ, ಕೂಡಲ ಸಂಗಮ 5001-00
2. ಪೂಜ್ಯಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮಿಗಳು ಮಂಗಲ ಮಠ, ಶಿರಗುಪ್ಪಿ. 5001-00

ಶರಣರುಗಳಾದ :

3. ಕೆ. ಆರ್. ಸೋಮಶೇಖರ, ಬೆಂಗಳೂರು (426)
4. ಮೃತ್ಯುಂಜಯ 3001-00
5. ಬನಹಟ್ಟಿ ನೂಲಿನ ಸಹಕಾರಿ ಗಿರಣಿ, ಬನಹಟ್ಟಿ 2001-00
6. ಪದ್ಮಶ್ರೀ RMB. ಆರಾಧ್ಯ ಚಾರಿಟಬಲ್ ಟ್ರಸ್ಟ್ 2500.00

ದಾರ್ಶನಿಕ ಬಸವ ವೃಂದ, ಮೇಲೂರು (51) 2001-00
ನಾಗರತ್ನಮ್ಮ ಈ. ಎಲ್. ಚನ್ನಬಸಪ್ಪ, ಬೀಚಗಾನಹಳ್ಳಿ (67) 1001-00
ಸರೋಜಮ್ಮ ಎಂ. ನಾಗರಾಜು, ಮೈಸೂರು (110) 1001-00
ಡಾ|| ಚಂಗಲಪ್ಪ ಪನರೂಟಿ, ತಮಿಳುನಾಡು (120) 1001-00
ಲಿಯೋನ್‌ಟೀನ್ ವೀರಮನ್, ಹಾಲೆಂಡ್ (117) 1001-00

ಹೆಚ್. ಚಂದ್ರಪ್ಪ, ಶಿಕಾರಿಪುರ (130) 1001-00
ಮಹಾದೇವಮ್ಮ ಗುರು ಸ್ವೀಟ್ ಮೈಸೂರು (131) 1001-00
ಜಿ. ಎನ್. ಬಸವರಾಜು, ಬೆಂಗಳೂರು (142) 1001-00
ಛಾಯಾ ಜಯರಾಜು, ಬೆಂಗಳೂರು (145) 1001-00
ಎಸ್. ಲೀಲಾವತಿ ಶಿವರುದ್ರೇಗೌಡರು, ಬೆಂಗಳೂರು (147) 1001-00
ಉಮಾ ವೀರಣ್ಣ, ಬೆಂಗಳೂರು. 30 Kg ಶೇಂಗಾಎಣ್ಣೆ
ಸುಲೋಚನ ಸಂಗಪ್ಪ ಕುಬುಸದ, ಬೆಂಗಳೂರು 30 Kg ಶೇಂಗಾಎಣ್ಣೆ
ಸೋಮಶೇಖರ ಸವಣೂರು 1 ಕ್ವಿಂಟಾಲ್ ಬಸುಮತಿ ಅಕ್ಕಿ
ಸೌಭಾಗ್ಯ ನಾಗರಾಜು, ಮೈಸೂರು 1001-00
ಅನ್ನಪೂರ್ಣ-ಗಂಗಮ್ಮಜ್ಜಿ, ಮೈಸೂರು (337) 1001.00
ಚೂಡಾಮಣಿ ನಾಗರಾಜು, ಮೈಸೂರು (235) 1001-00
ಸಿ. ಸೋಮಶೇಖರ, ಬೆಂಗಳೂರು (260) 1001-00
ಲಲಿತಮ್ಮ ಡಾ|| ಇಂದುಧರ, ಚಿತ್ರದುರ್ಗ (372) 1001-00
ಅಧ್ಯಕ್ಷರು, ವೀರಶೈವ ಸಂಘ, ಹಾಸನ (376) 1001-00
ಬಸವರಾಜ ನಾಡಗೌಡ, ಗಣಜಲಿ ಮುಂಡರಗಿ (983) 1001.00
ಹೆಚ್. ಎಸ್. ಚನ್ನಬಸವಣ್ಣ, ಬೆಂಗಳೂರು-79 (1065) 1300.00
ಹೆಚ್. ಎ. ಶರಣಪ್ಪ ಬೆಂಗಳೂರು-1 (1066) 1001-00
ಶಿವಗಂಗಾಧರ, ವಿಶ್ವಜ್ಯೋತಿ
ಬಸವ ಕೇಂದ್ರ, ಬೆಂಗಳೂರು (1075) 1111.00
H. S. ದೇವಿಕಾ, ಚನ್ನಬಸವಣ್ಣ (1096) 1001.00
ಟಿ. ಎಸ್. ಭಾಗ್ಯ. ಬೆಂಗಳೂರು (299) 501-00
ಎಸ್. ಎನ್. ಚಂದ್ರಣ್ಣ, ಚಿತ್ರದುರ್ಗ (349) 501-00
ಶ್ರೀ ಜಗದೀಶ ಎಮ್. ಸಿ. ತುಮಕೂರು(366A) 501-00
M. N. ರಾಜಶೇಖರಯ್ಯಾ ದೊಡ್ಡಉಳ್ಳರ್ಥಿ (392) 1 ಚೀಲ ಮೆಕ್ಕೆ ಜೋಳ
M. ಹನುಮಂತ ರೆಡ್ಡಿ, ದೊಡ್ಡ ಉಳ್ಳರ್ಥಿ (394) 1 ಚೀಲ ಸೇಂಗಾ
ರೂಪಕಲಾ ಸಿಲ್ಕ ಮತ್ತು ಸಾರೀಜ್, ಬೆಂಗಳೂರು (408) 501-00
ಚನ್ನಪಾರಮ್ಮಕ್ಕನವರು, ಬೆಂಗಳೂರು-2 (406) 501-00
K. Veerabhadrappa, ಚಳ್ಳಕೆರೆ (420) 501-00
ರತ್ನ B. G. ಚನ್ನಪ್ಪ (553) 501.00
M. ರಾಮರೆಡ್ಡಿ, ಯರಂಗಳಗಿ (570) 501-00
ಅಂಜನಪ್ಪ K. (571) 15 Kg. ಸೇಂಗಾಎಣ್ಣೆ
ವಿ. ಆರ್. ಮುದಡ್ಡಿ, ಹೆಬಸೂರು (691) 501-00

ಸಾನಾ ಅಶ್ವಥಯ್ಯ, (785)	501-00.
ಎಸ್. ಎಸ್. ರಮೇಶಬಾಬು ಗೂಳೂರು (801)	501.00
ಗ್ರಾಮಾಂತರ ವೀರಶೈವ ಸಂಘ, ಬಳ್ಳಾರಿ	501-00
ಶಕುಂತಲಾ ಪುಟ್ಟಸಿದ್ದಪ್ಪ ಬೆಂಗಳೂರು-(1086)	501-00
ರೇವಮ್ಮ ಈಶ್ವರಪ್ಪ ಬೆಂಗಳೂರು-10 (1098)	850-00
ಬಸವಂತಪ್ಪ ಕೊಪ್ಪದ - ಹುಬ್ಬಳ್ಳಿ (1110)	1 ಚೀಲ ಭತ್ತ
ಎಂ.ಎಂ. ಸಾದರಹಳ್ಳಿ, ಹುಬ್ಬಳ್ಳಿ (1110)	501-00
ಜೆ. ಎಸ್. ಎಸ್. ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯ	
ಮೈಸೂರು (1145)	501-00
ಗುರುಲಿಂಗಪ್ಪಾ ನಿಂಗಪ್ಪಾ ಕುಂಬಾರ. ಕೋಹಳ್ಳಿ (1159)	501-00
ಡಿ. ಕೆ. ಲಿಂಗಯ್ಯ, ಕಿಲ್ ಕೊತಗಿರಿ, ತಮಿಳುನಾಡು (1)	501-00
ಕೆ. ಪ್ರಭುರಾಜ, ಸಕಲಟ್ಟಿ, ತಮಿಳುನಾಡು (29)	501-00
ಬಿ. ಸುಬ್ರಮಣಿ, ಸಕಲಟ್ಟಿ, ತಮಿಳುನಾಡು (31)	601-00
ಪುಷ್ಪ ಗುರುಬಸಪ್ಪ, ಕಾಟೇರಿ, ತಮಿಳುನಾಡು (32)	501-00
ಎಲ್ಃ ರಾಜಬೆಟ್ಟನ್, ಸಕಲಟ್ಟಿ ,, (34)	501-00
ಆರ್. ಚಂದ್ರಶೇಖರನ್, ಸಕಲಟ್ಟಿ ತಮಿಳುನಾಡು (35)	501.00
ಶಿವಮಣಿ ಶಿವಪ್ಪ, ಕೂನೂರು, ತಮಿಳುನಾಡು (42)	501-00
ಷಣ್ಮುಖಪ್ಪ, ಜಂಗಮಕೋಟೆ (52)	501-00
ಎಲೆ ಬಸಪ್ಪ, ವಿಜಯಪುರ (56)	501-00
ಕೆ. ಆರ್. ವೀರಭದ್ರಪ್ಪ ,, (57)	501-00
ಪಿ. ಪುಟ್ಟಣ್ಣ ,, (58)	501-00
ಎಂ. ಮುನಿಯಪ್ಪ, ವಿಜಯಪುರ [59]	501.00
ಪಿ. ಸಿ. ರಾಜಣ್ಣ, ದೊಡ್ಡಬಳ್ಳಾಪುರ [61]	600-00
ಸಿ. ಕಂತಪ್ಪ, ವಿಜಯಪುರ [63]	501-00
ಪಿ. ಮೂಳಿಗೆಪ್ಪ, ವಿಜಯಪುರ [64]	501-00
ಬಿ. ಆರ್. ಚನ್ನಬಸಯ್ಯ, ರಾಮನಹಳ್ಳಿ [84]	501-00
ಸರೋಜಮ್ಮ ಕೆಂಪೇಗೌಡ, ಹೊಮ್ಮರಗಳ್ಳಿ [110]	501-00
ರತ್ನಮ್ಮ ಮಹಾಲಿಂಗಪ್ಪ, ಭದ್ರಾವತಿ [115]	501-00
ರತ್ನಮ್ಮ ಜಯದೇವಪ್ಪ, ಭದ್ರಾವತಿ [123]	501-00
ಪಾರ್ವತಮ್ಮ ಪರಮೇಶ್ವರಪ್ಪ [125]	501-00
ಪ್ರಶಾಂತ್ ಸಿಲಿಂಡರ್ಸ್, ಬೆಂಗಳೂರು [118]	501-00
	505-00

ವಿ. ಶ್ರೀನಿವಾಸರಾವ್, ಬೆಂಗಳೂರು [121]	500-00
ಶ್ರೀ ಸಿದ್ಧೇಶ್ವರ ಟ್ರೇಡಿಂಗ್ ಕಂ]126]	501.00
ವಿ. ಸಂಜಪ್ಪ, ಬೆಂಗಳೂರು [127]	501.00
ಸದಾಶಿವ ಮೂರ್ತಿ, ಮೈಸೂರು [338]	501.00
ಸಿ. ಪುಟ್ಟಸ್ವಾಮಿ, ಸೂಲೀಬೆಲೆ [140]	501-00
ಪಾರ್ವತಿ ಸುನಂದ ಮೂರ್ತಿ, [146]	501-00
ರಾಷ್ಟ್ರೀಯ ಬಸವದಳ, ಬೆಂಗಳೂರು [148]	501.00
ಪಾರ್ವತಿ ಡಾ॥ ಸಿ. ವಿ. ಶಿರೋಳ, ಬೆಂಗಳೂರು [149]	501-00
ಅನಿತಾ ಈಶ್ವರ ಪಾಟೀಲ, ಬೆಂಗಳೂರು [150]	501-00
ಸರೋಜಮ್ಮ ರಾಮಸಿಂಗಪ್ಪ ಮೈಸೂರು [207]	500-00
ಎಂ. ಸಿ. ಶಿವಣ್ಣ, ಕಲಾವಿದರು ತುಮಕೂರು [229]	501-00
ಶಕುಂತಲಾ ಕೇಶವರಾಜು, ಮೈಸೂರು [231]	501-00
ಕೆಂಪದೇವಮ್ಮ, ಮೈಸೂರು [232]	501.00
ಕೆ. ಆರ್. ಶಿವಾನಂದ, ಬೆಂಗಳೂರು [243]	501-00
ಜಿ. ವಿ. ರುದ್ರಪ್ಪ, ಬೆಂಗಳೂರು [263]	501-00
ಎಸ್. ನಳಂದ, ಬೆಂಗಳೂರು [274]	501-00
ಕುಮಾರಿ ರಾಜಶ್ರೀ ಈಶ್ವರ ಪಾಟೀಲ, ಬೆಂಗಳೂರು [275]	501-00
ಎಸ್. ಪರಮೇಶ್ವರಪ್ಪ, ಬೆಂಗಳೂರು [292]	501-00
ದೇವೀರಮ್ಮ ನಂಜುಂಡಪ್ಪ, ಬೆಂಗಳೂರು [298]	501-00
ಎಂ. ಎಸ್. ನಾಗೇಂದ್ರ, ಬೆಂಗಳೂರು [300]	301-00
ಎಂ. ಜಯದೇವ, ವಿಜಯಪುರ [60]	301-00
ಅನ್ನಪೂರ್ಣಮ್ಮ ಬಿ. ವಿ. ರಾಜಶೇಖರಪ್ಪ, ಭದ್ರಾವತಿ [60]	251-00
ಎನ್. ವಿ. ರಾಜು, ಭದ್ರಾವತಿ [62]	251-00
ಸಿ. ಪಿ. ಸರೋಜಾ ಕೆ. ಎಂ. ನಂಜಪ್ಪ [115]	251-00
ಮೆ॥ ವಿಜಯಾ ಟ್ರೇಡರ್ಸ್. ಯಶವಂತಪುರ, [123]	251-00
ಮೆ॥ ಹಾಸನಾಂ ಅಂಡ್ ಕೋ. ,, [124]	251-00
ಸುರೇಶ, ,, [125]	251-00
ಎಸ್. ಎಂ. ಪುಟ್ಟಪ್ಪ, ಬೆಂಗಳೂರು [127]	60 k.g. ಅಕ್ಕಿ
ಡಿ. ರೇವಣಸಿದ್ಧಪ್ಪ, ಬೆಂಗಳೂರು [132]	251-00
ಪಿ. ಚನ್ನವೀರಪ್ಪ, ಬೆಂಗಳೂರು [137]	251-00
ಎಂ. ಎಸ್. ಶರಭಣ್ಣ, ಬೆಂಗಳೂರು [259]	251-00

ಪುಟ್ಟಮ್ಮಕ್ಕನವರು, ಬೆಂಗಳೂರು [261]	251-00
ಬಸವೇಶ್ವರ ಫೈನಾನ್ಷಿಯರ್ಸ್, ಚಿತ್ರದುರ್ಗ [348]	251-00
ಗಂಗಮ್ಮ, w/o G. ಚನ್ನಪ್ಪ. ಚಿತ್ರದುರ್ಗ [365]	251-00
ಟಿ. ತಲುಮಪ್ಪ, ಚಳ್ಳಕರೆ [369]	251-00
ವೀರಶೈವರ ಗುಂಡಭಕ್ತರ ಕೈಲಾಸ- ಶಂಕರ ಭಜನಾ ಮಂದಿರ, ಹಾಸನ [373]	251-00
ವೀರಶೈವ ಕುಂಬಳೇಶ್ವರ ಸಹಕಾರ ಸಂಘ (374)	251-00
ಸಿದ್ಧಗಂಗಮ್ಮ ಸಿದ್ಧರಾಮಣ್ಣ, ತುಮಕೂರು [378]	251.00
ಜಯವಿಜಯ ಚಿಟ್ಸ [ಪ್ರೈ] ಲಿಮಿಟೆಡ್ [407]	251-00
ಎಂ. ಚಿಕ್ಕಪಿಳ್ಳಪ್ಪನವರು [423]	251-00
ಸಿ. ಸೋಮಶೇಖರ ಮತ್ತು ಸಹೋದರರು ಕೋಲಾರ, [473]	251-00
ಬಿ. ಎಂ. ಚನ್ನಪ್ಪನವರು, ಕೋಲಾರ [474]	251-00
ಚಲುಮಪ್ಪ ಮತ್ತು ಮಕ್ಕಳು [555]	251-00
ಲಿಂಗರಾಜು ಇಂಗಳಹಳ್ಳಿ, ಹುಬ್ಬಳ್ಳಿ [608]	251-00
ಪಿ. ಎಂ. ತಡಸ್, ಹುಬ್ಬಳ್ಳಿ [611]	251-00
ವೀರಣ್ಣ ದಾಟನಾಳ, ಹುಬ್ಬಳ್ಳಿ [614]	251-00
ಶೋಭಾದೇವಿ ಪರಮಾದಿ [616]	251-00
ಎಂ. ಕೆ. ಪಾಟೀಲ, ಹುಬ್ಬಳ್ಳಿ [617]	251-00
ಶ್ರೀನಿವಾಸಮೂರ್ತಿಯವರು, ಬೆಂಗಳೂರು-9 [646]	301-00
H. S. ರಾಜಣ್ಣನವರು, ಬೆಂಗಳೂರು-2 [650]	251-00
ಎಂ. ನಾಗರಾಜು, ಬಾಗೇಪಲ್ಲಿ [80[illegible]]	251-00
C. ರಾಮಚಂದ್ರರೆಡ್ಡಿ, ಚಿಂತಾಮಣಿ [827]	251-00
ಎನ್. ಮಾಳಿಗಪ್ಪ. ವಿಜಯಪುರ [883]	251-00
ಚಿಕ್ಕಮರಿಯಣ್ಣ, ಕನ್ನಮಂಗಲ [886]	301-00
ನಂಜಮ್ಮ, ನಾಗರಾಜ ಕನ್ನಮಂಗಲ [887]	251-00
ಹೆಚ್. ಬಿ. ಗುರುಸ್ವಾಮಿಯವರು, ಬೆಂಗಳೂರು-38	301-00
ಪಟೇಲ ಸಿದ್ಧಲಿಂಗಪ್ಪ ಕನ್ನಮಂಗಲ [902]	251.00
ಎಸ್. ಚನ್ನಪ್ಪನವರು. ಬಾಲೇಪುರ	50-kg ಅಕ್ಕಿ
ಮಲ್ಲಿಕೇಂದ್ರಯ ನಾಡಗೌಡ, ಗಣಜಲಿ, ಮುಂಡರಗಿ [974]	251-00
ಟಿ. ಎನ್. ಮಲ್ಲಿಕಾರ್ಜುನ, ಬೆಂಗಳೂರು-13 [1073]	251-00
[illegible] [1114]	251-00

ಅಖಿಲ ಭಾರತ ಬಸವ ಧರ್ಮ ಪ್ರಥಮ ಮಹಾಧಿವೇಶನ ಭಾಗವಹಿಸಲು ಕರೆ

–ಜಗದ್ಗುರು ಮಾತೆ ಮಹಾದೇವಿ

ರಾಷ್ಟ್ರೀಯ ಬಸವ ದಳವೊಂದು ಬಸವ ಧರ್ಮದ ಪ್ರಥಮ ಮಹಾಧಿವೇಶನವನ್ನು ನಡೆಸಲು ಮುಂದೆ ಬಂದಿರುವುದು ಅಭಿನಂದನೀಯ ಮತ್ತು ಅನುಕರಣೀಯ. ದಟ್ಟವಾದ ವನಸಂಪತ್ತು, ಪುಷ್ಟವಾದ ಚಹಾತೋಟಗಳ ಸುಂದರ ಪರಿಸರದ ಮಧ್ಯೆ ಈ ಮಹಾಧಿವೇಶನ ನಡೆಯುತ್ತಿರುವುದು ಮನಸ್ಸಿಗೆ ಮುದ ತಂದಿದೆ. ಅಲ್ಪ ಸಂಖ್ಯಾತರಾಗಿ ನೀಲಗಿರಿಯ ಗುಡ್ಡಗಳಲ್ಲಿ ನೆಲೆಸಿರುವ ಈ ಬಸವ ಭಕ್ತರು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಎಲ್ಲರೂ ತನುಮನ ಧನಗಳಿಂದ ಭಾಗಿಗಳಾಗಬೇಕು. ಧರ್ಮಪಿತರು ನಮಗೆ ಹೀಗೆ ಆದೇಶಿಸಿದ್ದಾರೆ:

ಲಕ್ಷಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲ ಸಂಗಮದೇವನು

— ಬ. ಷ. ವ. 246

ಮಾನಸಿಕವಾಗಿ ಹಾರ್ದಿಕವಾಗಿ, ಧಾರ್ಮಿಕ-ಸಾಂಸ್ಕೃತಿಕವಾಗಿ ನಾವು ಹತ್ತಿರವಾಗಬೇಕಾದರೆ ಲಕ್ಷ ಗಾವುದ ದೂರವಿರಲಿ, ಹೋಗಿ ಭಕ್ತರನ್ನು ಕಾಣಬೇಕು. ಅವರೊಡನೆ ಕೂಡಿ (ಒಡೆಯರಂತೆ, ಅತಿಥಿಗಳಂತೆ ಜಂಬದಿಂದ, ಬಿಗುಮಾನದಿಂದ ವರ್ತಿಸುವುದಲ್ಲ) ದಾಸೋಹವನ್ನು ಮಾಡಬೇಕಂತೆ. ಧರ್ಮಪಿತರ ಈ ಆದೇಶ ಪಾಲಿಸಲು ನಮಗೀಗ ಸುಸಂಧಿ ಒದಗಿದೆ.

ಕೊಡುಗೆ ನೀಡಿರಿ.

ಶರಣ ಮೇಳದ ಸಮಾರೋಪದಲ್ಲಿ ನೀಲಗಿರಿ ಜಿಲ್ಲೆಯ ಶರಣ ಬಂಧುಗಳು ಮಹಾಧಿವೇಶನದ ವಿಚಾರ ತಿಳಿಸಿ, ಆಹ್ವಾನ ನೀಡಿ ಎಲ್ಲರನ್ನೂ ಪುಳಕಿತಗೊಳಿಸಿದರು. ಜಗತ್ಪ್ರಸಿದ್ಧ ಬೇಸಿಗೆಯ ಗಿರಿಧಾಮ, ಸೌಂದರ್ಯದ ಖಣಿ, ಉದಕ ಮಂಡಲ [ಊಟಿ]ದ ಹೆಸರೇ ಅನೇಕರನ್ನು ಸ್ಫೂರ್ತಿ ಚೇತನರನ್ನಾಗಿ ಮಾಡಿತು. ಊಟಿಯ ಸುಪ್ರಸಿದ್ಧ ಬೊಟಾನಿಕಲ್ ಗಾರ್ಡನ್, ದೊಡ್ಡಬೆಟ್ಟ, ಸಮೀಪದಲ್ಲಿರುವ ಕೊಡೈಕೆನಾಲ್, ಕುನೂರುಗಳ ಹೆಸರನ್ನು ಕೇಳದವರಾರು ?

ನಾವೆಲ್ಲ ಮಹಾಧಿವೇಶನದ ವಿವರ ಚರ್ಚಿಸಿರಲಿಲ್ಲ. ಆಗಲೇ ಓರ್ವ ಅತ್ಯುತ್ಸಾಹಿ ಕಾರ್ಯಕರ್ತರು ಬಂದು ಉಚಿತ ವ್ಯವಸ್ಥೆ ಮಾಡುತ್ತೇವೆ ಎಂದು ಘೋಷಿಸಿ

ಹಾಗೆ ಹೇಳಿದರೂ ಬಸವ ಭಕ್ತರು ಉಚಿತ ಸೌಲಭ್ಯ ಬಯಸುವುದು ಸಾಧುವಲ್ಲ. ಇವರುಗಳು ಅಲ್ಲಿ ಅಲ್ಪ ಸಂಖ್ಯಾತರು. ಮತ್ತು ಪ್ರತಿಯೊಂದು ಸಣ್ಣವಸ್ತುವನ್ನು ಅವರು ಘಟ್ಟ ಪ್ರದೇಶದ ಕೆಳಗಿನಿಂದಲೇ ತರಬೇಕು. ಈಗಾಗಲೇ ನಮಗೆ ಬರುತ್ತಿರುವ ವಿವರಗಳಿಂದ ಜನರು ಹೆಚ್ಚು ಸಂಖ್ಯೆಯಲ್ಲಿ ಬರುವ ಉತ್ಸಾಹ ತೋರಿಸುತ್ತಿದ್ದಾರೆ. ಈ ಬಾರಿಯ ಶರಣ ಮೇಳದ ಯಶಸ್ಸೂ ಸಹ ಬಹಳ ಜನರನ್ನು ಅದೂ ಒಂದು ಮಿನಿ ಶರಣ ಮೇಳ ಆಗುವುದೆಂದು ಪ್ರೇರಣೆ ನೀಡಿದೆ. ಬೇಸಿಗೆ ರಜೆ ಬಂದಿರುವುದರಿಂದ ಸಂಖ್ಯೆ ದ್ವಿಗುಣಿಸುವ ಸಾಧ್ಯತೆಯಿದೆ.

ಹೀಗಾಗಿ ವಸತಿಗಾಗಿ ಶಾಮಿಯಾನಾ ಟೆಂಟ್ ಮಾಡುವುದು ಅನಿವಾರ್ಯವಾಗುತ್ತದೆ. ಮುಂಬರುವ ವರ್ಷಗಳಲ್ಲಿ ಬೇರೆ ಬೇರೆ ರಾಷ್ಟ್ರೀಯ ಬಸವ ದಳಗಳವರು ಈ ರೀತಿ ಅಧಿವೇಶನ ಕರೆಯಬೇಕಾಗುತ್ತದೆ. ಆದ್ದರಿಂದ ಭಾರವನ್ನು ಎಲ್ಲರೂ ಹಂಚಿಕೊಳ್ಳಬೇಕಾದ್ದು ಅನಿವಾರ್ಯ. ಈ ಅಧಿವೇಶನವು ಮುಂದೆ ಅಧಿವೇಶನ ನಡೆಸುವವರಿಗೆ ಮಾದರಿ ಆಗಬೇಕು, ಗಾಬರಿ ಉಂಟು ಮಾಡಬಾರದು. ಯಾವುದಾದರೊಂದು ರಾಷ್ಟ್ರೀಯ ಬಸವ ದಳದವರು ಆತಿಥೇಯರಾದಾಗ ಅವರ ಮೇಲೆ ಹೊಣೆ ಹಾಕಿ ಉಳಿದವರು ಕೈಚೆಲ್ಲಿ ಕೂರದೆ ತನು ಮನ ಧನದಿಂದ ಹೆಗಲು ಕೊಡುವರು ಎಂಬ ವಿಶ್ವಾಸ ಸಂಘಟಕರಲ್ಲಿ ಬಲಿಯಬೇಕು.

ಆದ್ದರಿಂದ ಕೇಂದ್ರ ರಾಷ್ಟ್ರೀಯ ಬಸವ ದಳದ ಪರವಾಗಿ ನಾನು ಈ ಆತ್ಮೀಯ ಕರೆ ಕೊಡುತ್ತಿದ್ದೇನೆ.

(1) ಯಾರಿಗೆ ನಿಜವಾಗಿಯೂ ಆರ್ಥಿಕ ಕಷ್ಟವಿದೆಯೋ ಅವರು ಕನಿಷ್ಟ ಪಕ್ಷ ಒಬ್ಬರಿಗೆ 75 ರೂ ಗಳಂತೆ ಪ್ರತಿನಿಧಿ ಶುಲ್ಕ ಕಟ್ಟಿರಿ. ಹೆಚ್ಚಿನ ಸಾಮರ್ಥ್ಯವಿದ್ದವರು ಇನ್ನೂ ಹೆಚ್ಚಿನ ದೇಣಿಗೆ ಸಲ್ಲಿಸಿರಿ.

(2) ಶರಣಮೇಳ ಬೃಹತ್ತಾದರೂ ಜನರು ಇದ್ದಕ್ಕಿದ್ದಂತೆಯೇ ಬಂದರೂ ಹೇಗಾದರೂ ನಾವು ಸಾಮಗ್ರಿಗಳನ್ನು ಹೊಂದಿಸಿಕೊಳ್ಳುತ್ತೇವೆ. ಅಲ್ಲಿ ಅವರದು ಹಾಗಲ್ಲ ಕೊಯಮತ್ತೂರು, ಇಲ್ಲವೇ ಮೈಸೂರಿನಿಂದ ಎಲ್ಲ ಹೊಂದಿಸಿಕೊಳ್ಳಬೇಕು. ಆದ್ದರಿಂದ ಸಾಧ್ಯವಾದಷ್ಟು ಬೇಗನೆ ನಿಮ್ಮ ಪ್ರತಿನಿಧಿ ಶುಲ್ಕ ಅಥವಾ ದೇಣಿಗೆ ಕಳಿಸಿ, ನಿಮ್ಮ ಸ್ಥಳಗಳನ್ನು ಕಾಯ್ದಿರಿಸಿರಿ. ನಿಧಾನ ಗತಿಯಲ್ಲಿ ವ್ಯವಹರಿಸಬೇಡಿರಿ.

(3) 1993 ರ ಶುಕ್ರವಾರ ರಾತ್ರಿಯೊಳಗೆ ಅಥವಾ ಶನಿವಾರ ಬೆಳಿಗ್ಗೆ ಬರುವಂತೆ ಸಮಯ ನಿಗದಿ ಮಾಡಿಕೊಳ್ಳಿರಿ. ಅವೇಳೆಯಲ್ಲಿ ಬಂದರೆ ಹುಡುಕಾಡುವುದು ಕಷ್ಟಸಾಧ್ಯ. ಊಟ ಮತ್ತು ಕೂನೂರ ಬಸ್ ನಿಲ್ದಾಣಗಳಲ್ಲಿ ಮಾಹಿತಿ ನೀಡಲು ಕಾರ್ಯಕರ್ತರನ್ನು ಇರಿಸಲಾಗುವುದು.

[4] ಶನಿವಾರ ಬೆಳಿಗ್ಗೆ 10-30 ಕ್ಕೆ ಉದ್ಘಾಟನೆ, ಸಂಜೆ 4-30 ರಿಂದ ಧರ್ಮ ಚಿಂತನಗೋಷ್ಠಿ, ಭಾನುವಾರ ಬೆಳಿಗ್ಗೆ 8ಕ್ಕೆ ಸಾಮೂಹಿಕ ಇಷ್ಟಲಿಂಗಪೂಜೆ, 11-30 ಕ್ಕೆ ಸಮುದಾಯ ಪ್ರಾರ್ಥನೆ, ಸಂಜೆ 5 ಕ್ಕೆ ಸಮಾರೋಪ ಸಮಾರಂಭ. ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳನ್ನು, ನಮ್ಮನ್ನು, ಪೂಜ್ಯ ಶ್ರೀ ಗಂಗಾ ಮಾತಾಜಿಯವರನ್ನು ಆಹ್ವಾನಿಸಿದ್ದಾರೆ. ಇನ್ನೂ ಅನೇಕರನ್ನು ಆಹ್ವಾನಿಸಲು ನಿಶ್ಚೈಸಿದ್ದಾರೆ.

[5] ಭಾನುವಾರ ಕಾರ್ಯಕ್ರಮ ಮುಗಿದ ಮೇಲೆ, ಸೋಮವಾರದಂದು ಬೆಳಿಗ್ಗೆ ಉಪಾಹಾರ ಮುಗಿಸಿ ಊಟಿಯನ್ನು ನೋಡಲು ಮತ್ತು ಅಲ್ಲಿಂದ ದೊಡ್ಡಬೆಟ್ಟ, ಕೊಡೈಕೆನಾಲ್, ಕೂನೂರು ಮುಂತಾಗಿ ನೋಡಲು ಆಯಾ ತಂಡಗಳವರು ಯೋಜನೆ ಹಾಕಿಕೊಳ್ಳಬಹುದು.

[6] ಬಸವ ಧರ್ಮಪೀಠದ ವತಿಯಿಂದ ಶ್ರೀ ನಿಜಗುಣಾನಂದರನ್ನು ಮತ್ತು ಶ್ರೀ ಚನ್ನಬಸವಾನಂದರನ್ನು ಒಂದು ಮೆಟಾಡೋರ್ ವಾಹನದೊಡನೆ ನೀಲಗಿರಿ ಜಿಲ್ಲೆ, ಭವಾನಿ, ಕೊಯಮತ್ತೂರು, ಮೈಸೂರು ಜಿಲ್ಲೆ – ಇಲ್ಲೆಲ್ಲ ಪ್ರಚಾರ ಮಾಡಲು ಕಳಿಸುತ್ತಿದ್ದೇವೆ. ಸ್ವಯಂ ಪ್ರೇರಣೆಯಿಂದ ದೇಣಿಗೆ ಸಂಗ್ರಹಿಸಿ ಕೊಡಬೇಕು ಎನ್ನುವವರು ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ಪತ್ರ ಬರೆದು ರಸೀತಿ ಪುಸ್ತಕ ತರಿಸಿಕೊಳ್ಳಿರಿ, ನೀವೂ ಬರುವ ಯೋಜನೆ ಹಾಕಿಕೊಳ್ಳಿರಿ. ★

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

॥ ಓಂ ಶ್ರೀಗುರುಬಸವಲಿಂಗಾಯ ನಮಃ ॥

ಅಖಿಲ ಭಾರತ ಪ್ರಥಮ ಬಸವ ಧರ್ಮ ಮಹಾಧಿವೇಶನ

1993 ರ ಮೇ 8 ಮತ್ತು 9 ರಂದು

ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಆಗಿ ಹೋದ ಕ್ರಾಂತಿ ಪುರುಷರು, ಶ್ರೇಷ್ಟ ಸಮತಾವಾದಿಗಳು, ರಾಜಕಾರಣ ಮುತ್ಸದ್ದಿಗಳು. ಜಾತಿ ವರ್ಣ ವರ್ಗ ರಹಿತವಾದ ಧರ್ಮ ಸಹಿತವಾದ ಕಲ್ಯಾಣ ರಾಜ್ಯವನ್ನು ಕಟ್ಟಿ ತೋರಿಸಿದ ಚಿಂತನ ಶೀಲರು. ಪರಮಾತ್ಮನ ದಿವ್ಯ ಕೃಪೆಯನ್ನು ಹೊತ್ತು ಮರ್ತ್ಯಲೋಕಕ್ಕೆ ಬಂದು, ವಿಶ್ವಾತ್ಮನ ಕುರುಹಾದ ಇಷ್ಟಲಿಂಗವನ್ನು ಸಾಕಾರಗೊಳಿಸಿ ಕೊಟ್ಟು ಸಮತಾವಾದವನ್ನು ನೆಲೆಗೊಳಿಸಿದರು. ಗಣ ಲಾಂಛನವನ್ನಾಗಿ ಇಷ್ಟಲಿಂಗವನ್ನು ಕೊಟ್ಟು ಪ್ರತಿಯೊಬ್ಬರ

ಅಂಗದ ಮೇಲೂ ಧರಿಸಿಕೊಳ್ಳುವ ಸದವಕಾಶ ನೀಡಿ ಉದಾತ್ತವಾದ ಶರಣ ಸಮಾಜವನ್ನು ಕಟ್ಟಿದ್ದರು. ಹೀಗೆ ಇಷ್ಟಲಿಂಗವೇ ಪ್ರಮುಖವಾದ ಲಾಂಛನವಾಗಿರುವ ಲಿಂಗಾಯತ (ಲಿಂಗವಂತ) ಸಮಾಜದ ಅಸ್ತಿತ್ವಕ್ಕೆ ಕಾರಣೀಭೂತರಾದರು. ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು, ಚಿನ್ಮಯ ಜ್ಞಾನಿ ಚನ್ನಬಸವಣ್ಣ, ಶಿವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಶರಣ ಮಡಿವಾಳ ಮಾಚಿದೇವರು ಮುಂತಾದ ಮಹಾನ್ ಶರಣರ ಪರಂಪರೆ ಲಿಂಗಾಯತ ಧರ್ಮಕ್ಕಿದೆ. ಇದೇ ಪರಂಪರೆಯು ಮಲೆಯ ಮಾದೇಶ್ವರ, ಎಡೆಯೂರು ಸಿದ್ಧಲಿಂಗೇಶ್ವರ, ಜೇವರ್ಗಿ ಷಣ್ಮುಖ ಶಿವಯೋಗಿ, ಮುಪ್ಪಿನ ಷಡಕ್ಷರ ದೇವರು, ಸುತ್ತೂರು ಘನಲಿಂಗದೇವರು, ದೇವಸೂರು ಗುರುಮಲ್ಲೇಶ್ವರರು ಮುಂತಾದ ಮಹಾನುಭಾವರನ್ನು ಕೊಟ್ಟಿತು. ಈ ಶರಣ ಪರಂಪರೆ ಧಾರ್ಮಿಕ ಇತಿಹಾಸದಲ್ಲಿಯೇ ವಿನೂತನ ಕೊಡುಗೆಯಾದ ವಚನ ವಾಙ್ಮಯ ನಿಧಿಯನ್ನೂ ನೀಡಿತು.

ವಿಶ್ವಗುರು ಬಸವಣ್ಣನವರ ಜೀವಿತಕಾಲದಲ್ಲಿ ಒಂದು ವಿಶೇಷ ವಿವಾಹ ನಡೆಯಿತು. ಹುಟ್ಟಿನಿಂದ ದಲಿತನಾದರೂ ಶರಣ ದೀಕ್ಷೆ ಪಡೆದ ಹರಳಯ್ಯನ ಮಗ ಶೀಲವಂತನಿಗೆ ಹುಟ್ಟಿನಿಂದ ಬ್ರಾಹ್ಮಣನಾಗಿದ್ದು ಲಿಂಗವಂತನಾದ ಮಧುವರಸನ ಮಗಳು ಲಾವಣ್ಯವತಿಯನ್ನು ಕೊಟ್ಟು ವಿವಾಹ ಮಾಡಲು ಬಸವಾದಿ ಪ್ರಮಥರು ಅನುಮತಿ ನೀಡಿದಾಗ ಜಡ ಸಂಪ್ರದಾಯವಾದಿಗಳು, ಜಾತಿವಾದಿಗಳು ಅಸಹನೆಯಿಂದ ಕುದಿದು ಚಾಲುಕ್ಯ ರಾಜ್ಯದ ಪ್ರಧಾನಿಯಾಗಿದ್ದ ಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ನೀಡಲು, ವಿವಾಹದಲ್ಲಿ ಭಾಗಿಯಾದ ಶರಣರಿಗೆ ಮರಣದಂಡನೆ ನೀಡಲು ರಾಜನನ್ನು ಪ್ರಚೋದಿಸಿದರು. ನಂತರ ವಚನ ಸಾಹಿತ್ಯವನ್ನು ನಾಶ ಮಾಡಲು ಜಾತಿವಾದಿಗಳು ಹಟ ತೊಟ್ಟಾಗ ಶರಣರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ವಚನ ಸಾಹಿತ್ಯವನ್ನು ಗವಿ-ಗುಡ್ಡಗಳಲ್ಲಿ ಇಟ್ಟು ರಕ್ಷಿಸಿದರು. ಅಸಂಖ್ಯಾತ ಶರಣರು ಕರ್ನಾಟಕದ ಕಲ್ಯಾಣದಿಂದ ಚದುರಿ ಹೋದರು, ಹೊರನಾಡುಗಳಲ್ಲಿಯೂ ನೆಲೆಸಿದರು.

ಕರ್ನಾಟಕದ ವಿವಿಧ ಜಿಲ್ಲೆ ಮತ್ತು ವಿವಿಧ ರಾಜ್ಯಗಳಲ್ಲಿ ನೆಲೆಸಿದ ಲಿಂಗವಂತ ಧರ್ಮೀಯರು ಶರಣ ಸಂಸ್ಕೃತಿಯ ಸೌರಭವನ್ನು ಹರಡಲು ನೆರವಾದರು. ಆದರೆ ಬಹುಪಾಲು ಜನರು ಮೂಲ ಧರ್ಮ, ಸಾಹಿತ್ಯ, ಸಂಸ್ಕೃತಿಯ ಸಂಪರ್ಕವನ್ನು ಕಳೆದುಕೊಂಡು ಅಸಂಘಟಿತ ಸ್ಥಿತಿಯಲ್ಲಿ ಇದ್ದಾರೆ. ಹೀಗಾಗಿ ಬಸವ ತತ್ತ್ವಾನುಯಾಯಿಗಳಲ್ಲಿ ಸಂಘಟನೆ ತರಲು, ಸಂಸ್ಕಾರ ನೀಡಲು, ಧಾರ್ಮಿಕ–ಸಾಹಿತ್ಯಿಕ–ಸಾಂಸ್ಕೃತಿಕ ಮೂಲ ಪ್ರವಾಹದೊಡನೆ ಬೆಸೆಯಲು ಅಖಿಲ ಭಾರತ ಪ್ರಥಮ ಬಸವ ಧರ್ಮ ಮಹಾಧಿವೇಶನವನ್ನು ಕರೆಯಲಾಗಿದೆ.

ಶನಿವಾರ ಮತ್ತು ಭಾನುವಾರ ಬರುವಂತೆ 1993 ರ ಮೇ 8 ಮತ್ತು 9 ರಂದು ಸಮ್ಮೇಳನ ನಡೆಯಲಿದೆ. ದಕ್ಷಿಣ ಭಾರತದ ಸುಪ್ರಸಿದ್ಧ ಗಿರಿಧಾಮವಿರುವ ಉದಕ ಮಂಡಲ [ಊಟಿ]ದ ಪರಿಸರದಲ್ಲಿರುವ ಪಾಲಾಡ್ ಎಂಬ ಕೇಂದ್ರ ಸ್ಥಳದಲ್ಲಿ ಈ ಮಹಾ

ಧಿವೇಶನ ನಡೆಯಲಿದೆ. ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದ ಮಹಾಜಗದ್ಗುರು ಪೀಠದ ಆಶ್ರಯದ ಕೇಂದ್ರ ರಾಷ್ಟ್ರೀಯ ಬಸವ ದಳದ ಮಾರ್ಗದರ್ಶನ, ಸಹಕಾರ–ಸಹಯೋಗದೊಡನೆ ಕರೆಯಲಾಗಿರುವ ಈ ಸಮ್ಮೇಳನಕ್ಕೆ ಅಧಿಕಧಿಕ ಸಂಖ್ಯೆಯಲ್ಲಿ ಬನ್ನಿರಿ.

ಧನ ಸಹಾಯಕ್ಕೆ ಮನವಿ

ಬಸವ ಧರ್ಮ ಮಹಾಧಿವೇಶನ ಮತ್ತು ಇದು ನಡೆಯುತ್ತಿರುವ ಸುಪ್ರಸಿದ್ಧ ಗಿರಿಧಾಮ ಉದಕ ಮಂಡಲ–ಇವು ಅಸಂಖ್ಯಾತ ಶರಣ ಬಂಧುಗಳನ್ನು ಆಕರ್ಷಿಸುತ್ತಿದ್ದು ಸಹಸ್ರ ಸಹಸ್ರಗಟ್ಟಳೆ ಸಂಖ್ಯೆಯಲ್ಲಿ ಬಸವ ಧರ್ಮೀಯರು ಸೇರುವ ಅಂದಾಜಿದೆ. ಉತ್ಸವವು ಯಶಸ್ವಿಯಾಗಬೇಕಾದರೆ ಮತ್ತು ವ್ಯವಸ್ಥಿತವಾಗಿ ಜರುಗಬೇಕಾದರೆ ಸ್ವಯಂ ಪ್ರೇರಣೆಯ ಕೊಡುಗೆ ನೀಡುವುದು ಅಗತ್ಯವಿದೆ.

1. ಮಹಾಪೋಷಕರು 10, 000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು 5000 ರೂ. " " "
3. ದಾನಿಗಳು 1000 ರೂ. " " "
4. ಹಿತೈಷಿಗಳು 500 ರೂ. " " "
5. ಸ್ವಾಗತಸಮಿತಿ ಸದಸ್ಯತ್ವ 100 ರೂ. [ಒಬ್ಬರಿಗೆ ಊಟ ವಸತಿ]
6. ಪ್ರತಿನಿಧಿ ಶುಲ್ಕ 100 ರೂ. [" "]

ಸಾಧ್ಯವಾದಷ್ಟೂ ಉದಾರವಾಗಿ ದೇಣಿಗೆ ನೀಡಬೇಕೆಂದು, ಮತ್ತು ಮೊದಲೇ ಹಣ ಕಳಿಸಿ ಹೆಸರು ನೋಂದಾಯಿಸಬೇಕೆಂದು ಕೋರುವೆವು.

All India First Basava Dharma Conference, Ooty ಎಂದು ಕೆನರಾ ಬ್ಯಾಂಕ್, ಎಲೇನಹಳ್ಳಿ (ತಾ–ಕೂನೂರು, ಜಿಲ್ಲೆ–ನೀಲಗಿರಿ, ತಮಿಳುನಾಡು) ಶಾಖೆಗೆ ಬ್ಯಾಂಕ್ ಡ್ರಾಫ್ಟ್ ತೆಗೆಸಿ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.

Sharana. R. Chandrashekhar.
secretary, Rashtreeya Basava Dala
Sakalatty-Village, Post-Sogatorai.
Dt-Nilgiris, State-Tamil Nadu.

ವ್ಯವಹಾರದ ಅನುಕೂಲತೆಗಾಗಿ ಕರ್ನಾಟಕದ ರಾಜಧಾನಿ ಬೆಂಗಳೂರಿನ ಕೆನರಾ ಬ್ಯಾಂಕ್‌ದಲ್ಲಿ ಖಾತೆಯನ್ನು ಮತ್ತು ಶಾಖೆ ಕಾರ್ಯಾಲಯವನ್ನೂ ತೆರೆಯಲಾಗಿದೆ. ಬೆಂಗಳೂರಿನ ಕೆನರಾ ಬ್ಯಾಂಕ್‌ದ D. D. ಯನ್ನು ತೆಗೆಸಿ ಕೆಳಕಂಡ ವಿಳಾಸಕ್ಕೆ ಕಳಿಸಬಹುದು.

All India First Basava Dharma Conference. Ooty
Basava Mantapa, 2035, 20th Main. II Block,
Rajajinagar, Bangalore-560010 Phone : 325335

ಅಭಿನಂದನೆಗಳು

—ಮಾತಾಜಿ

ಆರನೆಯ ಶರಣ ಮೇಳವನ್ನು ಯಶಸ್ವಿಗೊಳಿಸಿದ ಶರಣರಿಗೆ ಅಭಿನಂದನೆಗಳು. ಯಾರು ಯಾರಿಗೆ ?

1. ಅಗಾಧ ಸಂಖ್ಯೆಯಲ್ಲಿ ಶ್ರದ್ಧೆ–ಭಕ್ತಿ–ನಿಷ್ಠೆಯಿಂದ ಬಂದ ಮತ್ತು ಬಂದು ಅತ್ಯಂತ ಶಿಸ್ತಿನಿಂದ ವರ್ತಿಸಿದ ಶರಣ ಬಂಧುಗಳಿಗೆ.
2. ಶರೀರ ಶ್ರಮವನ್ನು ಲೆಕ್ಕಿಸದೆ ಬಂದ ಶರಣರನ್ನು ಹಗಲಿರುಳು ಗಮನಕೊಟ್ಟು ಉಪಚರಿಸಿ, ಕೀರ್ತಿತಂದ ಸ್ವಯಂ ಸೇವಕ ಕಾರ್ಯಕರ್ತರಿಗೆ !

ಸಮುದಾಯ ಪ್ರಾರ್ಥನೆಗೆ ಮುನ್ನ ಧ್ವಜಾರೋಹಣ, ಗುರುವಂದನ ಮಹಾಮನೆಯ ಮೇಲೆ ನಿಂತು ಗೌರವಾರ್ಪಣೆ ಸ್ವೀಕರಿಸಿದ ಪೂಜ್ಯರು ಪ್ರತಿಜ್ಞಾವಿಧಿಯನ್ನು ನಡೆಸಿಕೊಟ್ಟರು. ಅತ್ಯಂತ ಬೆಲೆಯುಳ್ಳ 4 ಮಾತುಗಳನ್ನು 5 ನಿಮಿಷ ಕಾಲದಲ್ಲಿ ಹೇಳಿದುದು ಎಲ್ಲರ ಮನಸ್ಸಿನಲ್ಲಿ ಅಚ್ಚೊತ್ತಿದೆ.

ಶರಣ ಬಂಧುಗಳೇ, ನೀವೆಲ್ಲ ಇಲ್ಲಿ ಬಸವಣ್ಣನ ಮಹಾಮನೆಯ ಮಕ್ಕಳಾಗಿ ಬಂದಿದೀರಿ. ಇಂದು ಧರ್ಮ–ಸಮಾಜಗಳನ್ನು ಕಟ್ಟಲು ರಾಷ್ಟ್ರವನ್ನು ನಿರ್ಮಾಣ ಮಾಡಲು 4 ತತ್ತ್ವಗಳು ಅತ್ಯಗತ್ಯ.

1. ಶ್ರದ್ಧೆ (Devotion)
2. ಶಿಸ್ತು (Discipline)
3. ಮಾರ್ಗದರ್ಶನ (Direction)
4. ಸಮರ್ಪಣೆ (Dedication)

ಯಾವುದೇ ತತ್ತ್ವದಲ್ಲಿ, ಮೌಲ್ಯದಲ್ಲಿ ನಮಗೆ ಶ್ರದ್ಧೆ–ಭಕ್ತಿ ಅಗತ್ಯ: ಅದಿಲ್ಲದ ಹೊರತು ಏನೂ ಮಾಡಲಾರೆವು. ಜೊತೆಗೆ ಶಿಸ್ತನ್ನು ಮೈಗೂಡಿಸಿಕೊಳ್ಳಬೇಕು. ಪ್ರತಿಯೊಂದು ಚಟುವಟಿಕೆಯಲ್ಲೂ ಶಿಸ್ತು ಮೂಡಿಬರುವುದು ಪ್ರಜ್ಞಾವಂತ ಜನರ ಲಕ್ಷಣ. ಸೂಕ್ತ ಮಾರ್ಗದರ್ಶನ ಅಷ್ಟೇ ಆವಶ್ಯಕ; ಇದು ನಮಗೆ ದೇವರ ಕೃಪೆಯಿಂದ ಲಭ್ಯವಿದೆ. ವಿಶ್ವಗುರು ಬಸವಣ್ಣನವರಂಥ ಮಾರ್ಗದರ್ಶಕರು ನಮಗಿದ್ದಾರೆ. ಆದರ್ಶಗಳನ್ನು ಅನುಷ್ಠಾನಕ್ಕೆ ತರುವ ಸಮರ್ಪಣ ಮನೋಭಾವ; ಉದಾತ್ತ ಮೌಲ್ಯಗಳ ಪ್ರತಿಷ್ಠಾಪನೆಗೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವ ಘನವಂತಿಕೆ ನಮಗಿಂದು ಅಗತ್ಯವಿದೆ. ಪ್ರತಿಯೊಂದು ಕಾರ್ಯವನ್ನೂ ನಾವು ತನು ಮುಟ್ಟಿ, ಮನ ಮುಟ್ಟಿ ಮಾಡಬೇಕು. ಶರಣ ಮೇಳಕ್ಕೆ ಬಂದ ನೀವು ಈ ನಾಲ್ಕು ಸೂತ್ರಗಳನ್ನು ಮನದಲ್ಲಿ ಅಚ್ಚೊತ್ತಿಸಿಕೊಳ್ಳಬೇಕು. ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಆಶೀರ್ವಚನ ಬೀರಿದ ಪ್ರಭಾವ ಅಗಾಧ. ಮತ್ತು ಅದನ್ನು ನಮ್ಮ ಶರಣ ಬಂಧುಗಳು ಪಾಲಿಸಿದರು.

ಡಿಸೆಂಬರ 27 ರಂದು ಕಾರ್ಯಕರ್ತರ ಒಂದು ಮೀಟಿಂಗ್ ಕರೆದಾಗ ನಮ್ಮ ಶರಣ ಬಂಧುಗಳು ಇಬ್ಬರು ಒಂದೆರಡು ಸೂಚನೆ ನೀಡಿದರು.

1. ಪ್ರತಿನಿಧಿ ಶುಲ್ಕ ಕೊಟ್ಟವರಿಗೆ ಮಾತ್ರ ಊಟ ಇಲ್ಲದಿದ್ದರೆ ವಿಪರೀತ ಜನರು ಉಚಿತ ಊಟಕ್ಕೆಂದು ಬರುತ್ತಾರೆ. ಇದರಿಂದ ಶರಣ ಮೇಳದ ಖರ್ಚು ಅಧಿಕಧಿಕವಾಗುತ್ತದೆ. ಸಂಗ್ರಹ ಮಾಡುವುದೂ ಕಷ್ಟ.
2. ತಿಂಡಿ–ಊಟಗಳ ಸಮಯ ನಿಗದಿಪಡಿಸುವುದು. ಆ ಸಮಯ ಮೀರಿದ ಮೇಲೆ ಬಂದವರಿಗೆ ಕೊಡದೆ ಇರುವುದು. ನಾನು ಈ ಎರಡೂ ಸೂಚನೆಗಳಿಗೂ ಅನುಮೋದನೆ ಕೊಡಲಿಲ್ಲ.

1. ಇಲ್ಲ.... ಈ ಎರಡೂ ಅನುಷ್ಠಾನ ಯೋಗ್ಯವಲ್ಲ. ಕೆಲವರು ಬಡವರಿದ್ದು ಬಸ್ ಚಾರ್ಜು ವ್ಯಯ ಮಾಡಿಕೊಂಡು ಬರಲೇ ಒದ್ದಾಡುತ್ತಾರೆ. ಆದ್ದರಿಂದ ಅಂಥವರು ಪ್ರತಿನಿಧಿ ಶುಲ್ಕ ಕಡ್ಡಾಯವಾದರೆ ತೊಂದರೆ ಪಡುವರು. ಬಸವಣ್ಣನವರು ಹೊಸಧರ್ಮ ಕೊಟ್ಟದ್ದೇ ದೇವರು–ಧರ್ಮ ಯಾವ ಶುಲ್ಕವಿಲ್ಲದೆ ಮುಕ್ತವಾಗಿರಬೇಕೆಂದು. ಅಪ್ಪನವರು ನಿತ್ಯವೂ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳಿಗೆ [ಇದು ಸಾಂಕೇತಿಕ] ಉಣ್ಣಿಸುತ್ತಿದ್ದರೆಂದು ಕೇಳುತ್ತೇವೆ. ನಾವು ವರ್ಷಕ್ಕೊಮ್ಮೆ ಉಣ್ಣಿಸುವುದು ಬೇಡವೆ ?
2. ಊಟಕ್ಕೆಂದು ಯಾರೂ ಬಸ್ ಛಾರ್ಜು ಖರ್ಚು ಮಾಡಿ ಬರುವುದಿಲ್ಲ. ಬಂದರೂ ಏನಂತೆ; ಊಟ ಕೊಟ್ಟರೆ ಸಂತೃಪ್ತಿಯಿಂದ ಹೋಗುತ್ತಾರೆ. ಅವರ ಹರಕೆಯಿಂದ ಒಳ್ಳೆಯದಾಗುತ್ತದೆ. ಕೊಡುವ ದಾನಿಗಳು ಉದಾರವಾಗಿ ಕೊಟ್ಟೇ ಕೊಡುತ್ತಾರೆ.
3. ಇಲ್ಲಿಯ ಗ್ರಾಮಗಳವರು ಸ್ವಾಭಿಮಾನಿಗಳು. ಬಿಜಾಪುರ ಜಿಲ್ಲೆಯಲ್ಲಿ ಬಡತನವಿದ್ದರೂ ಮೋಸಗಾರಿಕೆ ಇಲ್ಲ; ಸ್ವಾಭಿಮಾನಿ ಜನ. ಆದ್ದರಿಂದ ಯಾರೂ ಸುಮ್ಮನೆ ಬರುವುದಿಲ್ಲ. ಊಟ ಸಿಗುತ್ತದೆಂದು.
4. ಖರ್ಚು ಅಧಿಕವಾಗುತ್ತದೆ ? ಆಗಲಿ; ಕೊಡುವವನೂ ಆ ಬಸವಗುರು. ತನ್ನ ಮಕ್ಕಳ ಮೂಲಕ ಸ್ವೀಕರಿಸುವವನೂ ಅವನೆ ? ನೀವೆಲ್ಲ ಮನಃಪೂರ್ವಕವಾಗಿ ಸಂಗ್ರಹಿಸಿರಿ. ಸತ್ಯ ಶುದ್ಧ ಸಂಕಲ್ಪವಿದ್ದರೆ ಜನ ಹೆಚ್ಚು ಹೆಚ್ಚು ದೇಣಿಗೆ ಕೊಡುತ್ತಾರೆ. ಆಕಸ್ಮಾತ್ ಕಮ್ಮಿ ಬಂದರೆ ನಮ್ಮ ಸಂಸ್ಥೆಯ ಸಲುವಾಗಿ ಕೊಟ್ಟುದನ್ನೇ ಕೊಡೋಣ ಎಂದು ನಮ್ಮ ಕೈಲಿ ಆಗಲ್ಲ ಎನ್ನಿಸುವುದೋ ಅಂದು ಉಚಿತ ದಾಸೋಹ ನಿಲ್ಲಿಸೋಣ. ಆದರೆ ಆ ಭಯಬೇಡ. ಇದು ಹೆಚ್ಚು ಹೆಚ್ಚು ಹುಲುಸಾಗುತ್ತದೆ, ವೃದ್ಧಿಯಾಗುತ್ತದೆ. ನಿಮಗೆ ವಿಶ್ವಾಸವಿರಲಿ.

ಎರಡನೆಯ ಸಲಹೆ ಕುರಿತು ಹೇಳಿದೆ.

1] ಊಟ ತಿಂಡಿಗೆ ಸಮಯ ನಿಗದಿಯೇ ? ಇಲ್ಲಿಗೆ ಬರುವವರು ಮನೆ ಮಕ್ಕಳು. ತೌರಿಗೆ ಬರುತ್ತಾರೆ. ಅವರಿಗೆ ಏನೂ ಕೊರತೆಯಾಗಬಾರದು. ಶಕ್ತಿ ಮೀರಿ ಶ್ರಮಿಸೋಣ.

2] ಒಂದು ವೇಳೆ ನೀವು ಬೆಳಿಗ್ಗೆ 8 ರಿಂದ 10 ರ ವರೆಗೆ ತಿಂಡಿ ಎಂದು 10 ಕ್ಕೆ ನಿಲ್ಲಿಸುವಿರಿ ಎಂದುಕೊಳ್ಳೋಣ. ದಾರಿಯಲ್ಲಿ ಬಸ್ಸು ಕೆಟ್ಟು ನಿಮ್ಮೂರಿನವರೇ 11 ಗಂಟೆಗೆ ಬರುವವರು ಎಂದು ಭಾವಿಸೋಣ. ಅವರನ್ನು ಬರೀ ಹೊಟ್ಟೆ ಯಲ್ಲಿ ಒಂದು ಗಂಟೆಯವರೆಗೆ ಇರಿ ಎನ್ನುವುದು ಶರಣ ಧರ್ಮಕ್ಕೆ ಯೋಗ್ಯವೆ ? ರಾತ್ರಿ 10 ರ ವರೆಗೆ ಊಟ ಎಂದು 10 ಕ್ಕೆ ನಿಲ್ಲಿಸುವಿರಿ ಎಂದು ಕೊಳ್ಳೋಣ. ರಾತ್ರಿ 12ಕ್ಕೆ ಬಸ್ಸು ಬಂದಾಗ ಊಟ ಇಲ್ಲ ಎಂದರೆ ಅವರು ಏನು ಮಾಡ ಬೇಕು ? ಬೇಕಾದರೆ ಅರ್ಧಗಂಟೆ ತಡೆಯಿರಿ ಎನ್ನಿರಿ. ಅನ್ನಕ್ಕಾಗಿ ನೀರು ಸದಾ ಕುದಿಯುತ್ತಿರಲಿ. ಚಿತ್ರಾನ್ನದ ಕಾರ, ಪುಳಿಯೋಗರೆ ಕಾರ ಸಿದ್ಧವಿದ್ದರೆ ಸಾರು ಕಡಿಮೆಬಿದ್ದರೂ [ಸಾರು ಮಾಡಲು ಜಾಸ್ತಿ ಸಮಯ ಬೇಕಷ್ಟೆ ?] ಅನ್ನಕ್ಕೆ ಕಲಸಿ ಕೊಡಬಹುದು. ಅವರು ಹಸಿದ ಹೊಟ್ಟೆಯಲ್ಲಿ ಮಲಗಿದರೆ ನಮಗೆ ಒಳ್ಳೆಯದಾಗುವುದೆ ? ಅಷ್ಟು ಹೊತ್ತಿನಲ್ಲಿ ಈ ಹಳ್ಳಿಯಲ್ಲಿ ಹೋಟೆಲ್ ಹುಡುಕಬೇಕೆ ?

"ನಿಮಗೆ ಬಹಳ ಶ್ರಮವಾಗುವುದು. ನನಗೆ ಗೊತ್ತು. ಆದರೆ ನೀವು ಸಹಿಸಿ ಕೊಳ್ಳದಿದ್ದರೆ ಹೇಗೆ ?" ನಮ್ಮ ಕಾರ್ಯಕರ್ತರು ತಿರುಗಿ ಒಂದು ಮಾತನ್ನೂ ಆಡ- ಲಿಲ್ಲ. ಚಾಚೂ ತಪ್ಪದೆ ಪಾಲಿಸಿದ್ದರು, ಕೀರ್ತಿ ತಂದರು. ಬಸವ ತತ್ತ್ವಾನುಯಾ- ಯಿಗಳ ನಿಷ್ಠೆ ಏನೆಂಬುದನ್ನು ಮೆರೆದರು. ಈ ಮಾತನ್ನು ಪುನರಾವರ್ತನೆ ಮಾಡಿ ಬರೆಯುತ್ತಿದ್ದೇನೆ. ಏಕೆಂದರೆ ಕನ್ನಡ ಸಾಹಿತ್ಯ ಸಮ್ಮೇಳನದ ವರದಿಗಳನ್ನೋದಿ. ಕೊಪ್ಪಳಕ್ಕೆ ಪುಸ್ತಕ ಮಾರಲು ನಮ್ಮವರೂ ಹೋಗಿದ್ದರು. ಒಂದು ದಿವಸ ನಮ್ಮ ಒಬ್ಬ ಕಾರ್ಯಕರ್ತೆ ಊಟದ ಟಿಕೆಟುಗಳನ್ನು ತನ್ನ ಬಳಿ ಇಟ್ಟುಕೊಂಡು ಬೇರೆಕಡೆ ಹೋಗಿ ಬಿಟ್ಟು, ಬರದೆ ಇದ್ದಾಗ ಹೇಗಿದ್ದರೂ ಬಿಳಿ ಸೀರೆ, ರುದ್ರಾಕ್ಷಿ ಸರ, ವಿಭೂ ತಿಯ ಸಮವಸ್ತ್ರ ಇರುತ್ತದೆ ಎಂದು ಹೋದಾಗ ಭೋಜನ ಶಾಲೆಯ ಪ್ರವೇಶ ನಿಯಂತ್ರಿಸುತ್ತಿದ್ದವರು ಒಳಗೆ ಬಿಡಲೇ ಇಲ್ಲವಂತೆ. ಊಟದ ಟಿಕೆಟ್ಟು ಆ ಹೊತ್ತಿಗೆ ತಗೊಳ್ಳುವುದು ಎಂದರೆ ಕೌಂಟರು ಸಹ ಇರಲಿಲ್ಲವಂತೆ. ಇನ್ನು ಊಟಕ್ಕೆ ಹುಡು ಕುವುದು ಹೇಗೆ ಎಂದು ವಾಪಸ್ಸು ಬಂದು ಶಿವರಾತ್ರಿ ಉಪವಾಸ ಮಾಡಿದರಂತೆ.

ಸಂಯುಕ್ತ ಕರ್ನಾಟಕ, ದಿ 9-2-1993ರ ಸಂಚಿಕೆಯ ಜನಮನದಲ್ಲಿ ಪ್ರಕಟವಾದ

ಅವ್ಯವಸ್ಥೆಯ ಆಗರ

" ನೆಚ್ಚಿದ ಎಮ್ಮೆ ಕೋಣನ ಈಯಿತು" ಎಂಬಂತೆ ಆಯಿತು ಕೊಪ್ಪಳದ ಸಮ್ಮೇ
ಳನ. ಬಹಳಷ್ಟು ಪ್ರಚಾರವನ್ನು ಗಿಟ್ಟಿಸಿ ಎಲ್ಲ ಜನ ವರ್ಗದಲ್ಲೂ ಉತ್ಸುಕತೆ
ಯನ್ನು ಮೂಡಿಸಿದ ಸಮ್ಮೇಳನದಲ್ಲಾದ ಅನುಭವ ಅವಹೇಳನಕರ.
ಸುಮಾರು 80 ಲಕ್ಷ ರೂ. ಸಂಗ್ರಹಿಸಿ ಪ್ರತಿನಿಧಿಗಳಿಗೆ ನೀಡಿದ ಸೌಲಭ್ಯ
ಸೊನ್ನೆ. ಪತ್ರಿಕೆ, ಟಿ.ವಿ. ಮುಂತಾದ ಮಾಧ್ಯಮಗಳಲ್ಲಿ ಪ್ರಚಾರ ಪಡೆದ ಚಟ್ನಿ,
ರೊಟ್ಟಿ, ಕರದಂಟು, ಸಿಹಿ ತಿಂಡಿಗಳ ನೆನಪು ಸಮ್ಮೇಳನದಲ್ಲಿ ಆಯಾಸ, ಹಸಿವೆ
ಯಿಂದಾಗಿ ನೆನಪಾದಾಗ ಬಾಯಲ್ಲಿ ಬಂದದ್ದು ನೀರು ಮಾತ್ರ. ಯಾವುದೇ
ಐಟಮ್‌ಗಳು ಊಟದಲ್ಲಾಗಲಿ, ಉಪಹಾರದಲ್ಲಾಗಲಿ ಕಾಣಲಿಲ್ಲ. ತಂಗಳನ್ನೇ ವಗ್ಗ
ರಣೆ ಹಾಕಿ ರವಿವಾರ ಮುಂಜಾನೆಯ ಉಪಹಾರದಿಂದ ಹೊಟ್ಟೆ ಕೆಡಿಸಿಕೊಂಡವರಿಗೆ
ಲೆಕ್ಕವಿಲ್ಲ. ಬೆಲ್ಲ ಹಾಕಿದ ಸಜ್ಜಕವೇ ಇವರ ದೃಷ್ಟಿಯಲ್ಲಿ ಉತ್ತಮ ಸಿಹಿ ಊಟ.
ಊಟಕ್ಕೆ ಹೋಗುವಾಗ, ತಾಸುಗಟ್ಟಲೇ ಕಾಯ್ದು ಒಳಗೆ ಹೋದರೆ ಹೇರಳ
ವಾಗಿ ನೀರು ಕುಡಿಯುಬೇಕೆಂದರೆ ಅದರದೂ ಕೊರತೆ.
ಸರಿಯಾದ ಸ್ವಯಂ ಸೇವಕರೇ ಇರದ ವ್ಯವಸ್ಥೆಯನ್ನು ನೋಡಿದರೆ ಖಂಡಿತಾ
ಇನ್ನು ಮೇಲೆ ಸಾಹಿತ್ಯಸಮ್ಮೇಳನಕ್ಕೆ ಹೋಗಬಾರದು ಅಂತಾ ನಿಟ್ಟುಸಿರು ಬಿಟ್ಟವರೇ
ಬಹಳ ಜನ. ೭೫ ವರ್ಷದ ವೃದ್ಧರೊಬ್ಬರಂತು ನನ್ನ ಜೀವಮಾನದಲ್ಲಿ ೧೫ ಸಮ್ಮೇ
ಳನಕ್ಕೆ ಹಾಜರಾಗಿದ್ದೇನೆ. ಇಂಥ ಕೆಟ್ಟಸಮ್ಮೇಳನ ನಾನೂ ಎಂದಿಗೂ ನೋಡಿಲ್ಲ ಅಂತಾ
ನೊಂದು ನುಡಿದರು.
ಪ್ರತಿನಿಧಿಗಳಿಗೆ ಇರಲು ಕೇವಲ ನಾಲ್ಕು ಗೋಡೆಯ ಕಟ್ಟಡ ಮಾತ್ರ. ಶೌಚಾ
ಲಯ, ಸ್ನಾನದ ವ್ಯವಸ್ಥೆಯೇ ಇಲ್ಲ. ಇದು ಸಮ್ಮೇಳನದ ಎಲ್ಲರ ಅನಿಸಿಕೆ.

ಡಾ. ಆರ್ ಸಿ. ಅಗಡಿ, ಧಾರವಾಡ

ಹಿಡಿಶಾಪ

ಕೊಪ್ಪಳ ಸಾಹಿತ್ಯ ಸಮ್ಮೇಳನದಲ್ಲಿ ತೀರಾ ಅವ್ಯವಸ್ಥೆ. ವಸತಿ ಮತ್ತು ಊಟಕ್ಕೆ
ಹಣ ಪಡೆದಿದ್ದರೂ ಗಂಟೆಗಟ್ಟಲೆ ಕಾಯಬೇಕಾದ ಸ್ಥಿತಿ. ಮೊದಲು ಹೋದವರಿಗೆ
ಸಿಕ್ಕ ಊಟ ನಂತರ ಹೋದವರಿಗೆ ಇಲ್ಲ. ಚಹದ ವಿತರಣೆಯೂ ಅಷ್ಟೆ. ಬೇಕಾದ
ವರಿಗೆ ಬೇಕಾದಾಗ ಪ್ರವೇಶ. ಸಮೀಪ ಊಟ ಸಿಗದ ಸ್ಥಿತಿ. ದೂರ ಹೋದರೂ
ಸಿಗುವಂತಿಲ್ಲ. ದುಡ್ಡು ಕೊಟ್ಟು ಸಂಕಟಕ್ಕೆ ಉಪವಾಸ ತಿರುಗುವುದೇ ಲೇಸು. ಹಿಡಿ-
ಶಾಪ ಹಾಕಿ ಹೋಗುವುದೊಂದೇ ದಾರಿ.

ತನು ಮನ ಧನದೊಡನೆ ಸಮಯವನ್ನೂ ಸಹ ಧರ್ಮಕ್ಕಾಗಿ ಮೀಸಲಿಡಿ

—ಮಾತಾಜಿ

14 ನೆಯ ತಾರೀಖು ಸಮುದಾಯ ಪ್ರಾರ್ಥನೆ. ಅಥಣಿಯ ದಾನಿಗಳಾದ ಶರಣ. ಪ್ರಕಾಶ ಮಹಾಜನ ಅವರು ಬೆಳಗಿನ ಕಾರ್ಯಕ್ರಮ ಮುಗಿಸಿ ಕಾಣಿಕೆ ಸಲ್ಲಿಸಲು ಸಮಯ ಕೇಳಿ, ಭೇಟಿಯಾದರು. 'ಪ್ರಸಾದವಾಯ್ತೆ ?' ಎಂದು ವಿಚಾರಿಸಿ, "ಇಂದು ಇರಿ. ನಾಳೆ, ಬೆಳಿಗ್ಗೆ ಇಷ್ಟಲಿಂಗ ಪೂಜೆ. ಪೂರೈಸಿಕೊಂಡು ಹೋಗಿರಿ...." ಎಂದು ಹೇಳಿದೆ. "ಬಹಳ ಕೆಲಸ, ಬಿಡುವಿರದು." ಎಂದರು. "ಕೆಲಸ ಸದಾ ಇರುವುದು. ಅದರಲ್ಲೇ ಬಿಡುವು ಮಾಡಿಕೊಳ್ಳಬೇಕು." ಎಂದು ಕಾಣಿಕೆ ಪಡೆದು, ಮುಂದಿನ ಕಾರ್ಯಕ್ರಮಕ್ಕೆ ಅಣಿಯಾದೆ.

ಮರುದಿವಸ ಬೆಳಿಗ್ಗೆ ಇಷ್ಟಲಿಂಗ ಪೂಜೆ. ಎಂದಿನ ವರ್ಷಕ್ಕಿಂತಲೂ ಹೆಚ್ಚಿನ ಜನ ಪೂಜೆಗೆ ಕುಳಿತಿದ್ದರು. ಪೂಜೆ ಚೆನ್ನಾಗಿ ಆಯಿತು. ನಂತರ ಜಂಗಮಪೂಜೆ. ಪೂಜ್ಯ ಪೀಠಾಧೀಶರು ಆಗಮಿಸಿದರು. ಪಾದಪೂಜೆ ಮಾಡಲು ಯಾರನ್ನು ಕರೆಯೋಣ ಎಂದು ಕಣ್ಣು ಹಾಯಿಸಿದೆ. ಜನರ ಮಧ್ಯೆ ಪೂಜೆಯಲ್ಲಿ ಕುಳಿತಿದ್ದ ಮಹಾಜನ್ ಅವರನ್ನೇ ಆಯ್ಕೆ ಮಾಡಿ ಕರೆದೆ. ಪತ್ನಿ ಸಮೇತವಾಗಿ ಬಂದು ಪೂಜೆಯಲ್ಲಿ ಭಾಗಿಯಾದರು. ತೀರ್ಥ ಪ್ರಸಾದ ಎಲ್ಲಾ ಆದ ನಂತರ ಹೇಳಿದರು, "ದಯವಿಟ್ಟು ನನ್ನನ್ನು ಕ್ಷಮಾ ಮಾಡಿರಿ." ಏಕೆ ? ಎಂದು ಆಶ್ಚರ್ಯವಾಯಿತು.

"ತಾವು ಹೇಳಿದಿರಿ, ಇಂದು ಇರಿ, ನಾಳೆ ಪೂಜೆ ಮುಗಿಸಿಕೊಂಡು ಹೋಗಿರಿ ಎಂದು. ನಾನು ಕೆಲಸ ಬಹಳ ಎಂದು ರಾತ್ರಿ ಹೊರಟೇ ಬಿಟ್ಟೆ. ಆದರೆ ದಾರಿಯಲ್ಲಿ ನಮ್ಮ ವಾಹನ ಭಯಂಕರ ಅಪಘಾತಕ್ಕೀಡಾಗಿ ನಜ್ಜುಗೊಜ್ಜಾಯಿತು. ನಾವು ಉಳಿದುದೇ ಒಂದು ಪವಾಡ; ಬೇರೆ ವಾಹನದ ಮೂಲಕ ಊರು ಸೇರಿದೆವು. ಮಾಡಿದ ತಪ್ಪಿಗೆ ಕ್ಷಮೆ ಕೇಳಿಕೊಳ್ಳಲು ಬೇರೊಂದು ಗಾಡಿ ತಗೊಂಡು ಬಂದೆ. ನಿನ್ನೆ ಹೆಂಡತಿ ಮಕ್ಕಳನ್ನು ಕರೆ ತಂದಿರಲಿಲ್ಲ. ಇಂದು ಅವರನ್ನೂ ಕರಕೊಂಡು ಬಂದೆ," ಘಟನೆ ಕೇಳಿ ರೋಮಾಂಚನವಾಯಿತು. "ಬಸವನ ಶಿಕ್ಷೆಯೆ ಶಿಕ್ಷೆ, ಬಸವಣ್ಣನ ರಕ್ಷೆಯೇ ರಕ್ಷೆ ಲೋಕದೊಳ್" ಎಂಬ ಹರಿಹರನ ಮಾತು ಮನದಲ್ಲಿ ಮೂಡಿತು. ತಕ್ಷಣವೆ ಜನರ ಮುಂದೆ ಹೇಳಿದಾಗ ಎಲ್ಲರಿಗೂ ಅಚ್ಚರಿಯುಂಟಾಯಿತು. ಶ್ರೀ ಪ್ರಕಾಶ ಮಹಾಜನರು ಹೋದದ್ದೂ ಗೊತ್ತಿರಲಿಲ್ಲ. ಮತ್ತು ಅಷ್ಟು ಜನರ ಮಧ್ಯದಿಂದ ಅವರನ್ನು ಶ್ರೀ ಗುರುಗಳ ಪಾದಪೂಜೆ ಮಾಡಲು ಕರೆದುದೂ ಆಕಸ್ಮಿಕವೆ. ಇದರಿಂದ ಕಲಿಯಬೇಕಾದುದು ಒಂದಿದೆ.

"ಎಷ್ಟೇ ಕೆಲಸದ ಒತ್ತಡವಿರಲಿ, ಅದಾಯ ಬರುವುದಿರಲಿ ದೇವರಿಗಾಗಿ, ಗುರುವಿಗಾಗಿ ಸಮಯವನ್ನು ಮೀಸಲಿಡಬೇಕು. ತನು-ಮನ-ಧನಗಳೊಡನೆ ಸಮಯವನ್ನೂ ದೇವನಿಗೆ ವಿನಿಯೋಗಿಸಬೇಕು. ಸಮಯವನ್ನು ಒಳ್ಳೆಯದಕ್ಕೆ ವಿನಿಯೋಗಿಸಿದರೆ ಆಗುವ ಲಾಭ ಸ್ವಲ್ಪ ಸಮಯದಲ್ಲೇ ಆಗುತ್ತದೆ."

ಭಾನುವಾರದ ಸಾಪ್ತಾಹಿಕ ಪುರವಣಿಯಲ್ಲಿ ಹೆನ್ನಾ ಚಿತ್ರದ ಸುಪ್ರಸಿದ್ಧ ಪಾಕಿಸ್ಥಾನಿ ನಟಿ ಹೇಳಿದ್ದಾಳೆ, "ನಾನು ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ಧರ್ಮವು ದೇವರು ನಮಗೆ ಅವನನ್ನು ಕೃತಜ್ಞತೆಯಿಂದ ಕೊಂಡಾಡಲು ಕೊಟ್ಟಿರುವ ಸದವಕಾಶ" ಮನನಾರ್ಹವಾದ ಮಾತಿದು.

ಫೆಬ್ರುವರಿ 2 ರಂದು ಚಿತ್ರದುರ್ಗದ ಬಸವ ಮಂಟಪವನ್ನು ಮಾರ್ಗಮಧ್ಯದಲ್ಲಿ ಬರುವಾಗ ಸಂದರ್ಶಿಸಿ, ನಡೆದಿರುವ ಕಾರ್ಯವನ್ನು ಕಂಡು ಸಂತೋಷ ವ್ಯಕ್ತಪಡಿಸಿ, ಸಂಗಮಕ್ಕೆ ಬಂದೆ. ಶರಣ ರಾಮಚಂದ್ರಪ್ಪನವರು ಶರಣು ಸಮರ್ಪಣೆ ಮಾಡುತ್ತ ಶರಣ ಮೇಳಕ್ಕೆ ಬಂದಾಗ ಅಲ್ಲಿ ಕಂಡ ಶಿಸ್ತನ್ನು, ಶಾಂತಿಯನ್ನು, ಭಕ್ತಿಯನ್ನು ಕೊಂಡಾಡಿದರು. ಸಹಸ್ರಾರು ಊಟದ ತಟ್ಟೆ-ಲೋಟಗಳನ್ನು ಜನರಿಗೆ ಕೊಡಲಾಗಿತ್ತು. ಎಲ್ಲರೂ ಶಾಂತವಾಗಿ ಪ್ರಸಾದ ಸ್ವೀಕರಿಸಿ ಹೋಗುತ್ತಿದ್ದರು. ಆದರೆ ಯಾರೂ ಅವನ್ನು ಕದಿಯಬೇಕೆಂದು ಪ್ರಯತ್ನಿಸಿದ್ದನ್ನಾಗಲೀ ಯಾವುದಕ್ಕಾದರೂ ಗಲಾಟೆ ಮಾಡಿದ್ದನ್ನಾಗಲೀ ನೋಡಲಿಲ್ಲ ಎಂದು ಹೃದಯ ತುಂಬಿ ಹೇಳಿದರು.

ಅವರ ಗುಂಪಿನಲ್ಲಿ ಬಂದಿದ್ದ ಓರ್ವ ಶರಣರ ಅನುಭವ ಕುರಿತು ಹೇಳಿದರು. ಬಡಗಿ ಹನುಮಂತಪ್ಪನವರು ಚಿತ್ರದುರ್ಗ ರಾಷ್ಟ್ರೀಯ ಬಸವ ದಳದ ಸಕ್ರಿಯ ಕಾರ್ಯಕರ್ತರು. ಎಲ್ಲರೂ ಲಗ್ಗೇಜಗಳನ್ನು ಶಾಮಿಯಾನಾ ಟೆಂಟಿನಲ್ಲೇ ಇಟ್ಟು ಹೋಗುತ್ತಿದ್ದರು. ಒಂದು ದಿನ ಬೆಳಿಗ್ಗೆ ಉಪಾಹಾರ ಮುಗಿಸಿ ಸಭೆಗೆ ಹೋಗಿ, ಊಟಕ್ಕೆ ಬಂದಾಗ ನೋಡಿದರೆ ಶಾಮಿಯಾನಾ ಟೆಂಟಿನಲ್ಲಿದ್ದ ಏರ್‌ಬ್ಯಾಗ್ ಮಗಳ ಬಟ್ಟೆಬರೆ ಇದ್ದುದು ಅಲ್ಲಿರಲೇ ಇಲ್ಲ. ಆದರೆ ಹನುಮಂತಪ್ಪ ಅವರು ಬಹಳ ಭಾವುಕ ಭಕ್ತಿವಂತರು, ಹೇಳಿದರಂತೆ, "ಈ ಬಗ್ಗೆ ಬಹಳ ಸುದ್ದಿ ಮಾಡಬೇಡಿರಿ. ಬಹುಶಃ ನಾವೇನೋ ತಪ್ಪು ಮಾಡಿರಬಹುದು. ಗುರುವು ಈ ಶಿಕ್ಷೆ ಕೊಟ್ಟಿದ್ದಾನೆ. ನಾನು ಪ್ರಾಮಾಣಿಕವಾಗಿ ಗಳಿಸಿದ್ದಿದ್ದರೆ ಸಿಗುತ್ತದೆ. ಇಲ್ಲದಿದ್ದರೆ ಬೇಡ." ಎಂದು ಮುಂದಿನ ಸಭೆಗೆ ಹೋದರಂತೆ. ಆದರೆ ಆಶ್ಚರ್ಯದ ಸಂಗತಿ. ಅವರು ಆ ಸಭೆ ಮುಗಿಸಿ ಬರುವುದರಲ್ಲಿ ಟೆಂಟಿನಲ್ಲಿ ಆ ಏರ್‌ಬ್ಯಾಗ್ ಮೊದಲ ಜಾಗದಲ್ಲಿ ಇತ್ತಂತೆ!

[ಈ ದೈವೀಭಯ, ಶರಣರ ಪ್ರಾಮಾಣಿಕತೆಗೆ ಮೆಚ್ಚಿಕೊಳ್ಳೋಣ. ಆದರೆ ಎಲ್ಲರಿಗೂ ಸೂಚಿಸುವುದೇನೆಂದರೇ ಭದ್ರತಾ ಕೋಣೆ ಮಾಡಲಾಗಿರುತ್ತದೆ. ಅಲ್ಲಿ ಸಾಮಾನು ಇಟ್ಟು ನಂಬರ್ ತಗೊಂಡು ಸಭೆಗೆ ಹೋಗುವುದು ಸುಕ್ಷೇಮ.

ಮತ್ತು ಯಾವುದೇ ಸಾಮಾನು ಕಳೆದಾಗ ಮತ್ತು ಸಿಕ್ಕಾಗ, ಮೈಮರೆತು ಎಲ್ಲೋ ಇಟ್ಟಾಗ ಮಹಾಮನೆಯ ಪ್ರವೇಶದ ಬಳಿ ಇರುವ " ಭದ್ರತಾ ಕಚೇರಿ " ಯಲ್ಲಿ ವಿಚಾರಿಸುವುದು. ಸೂಕ್ತ]

ಕಳೆದ ವರ್ಷ ಸಹ ಓರ್ವ ಶರಣರ ಪರ್ಸ್ ಸುಮಾರು 1200 ರೂ. ಕ್ಯಾಷ್ ಸಹಿತ ಕಳೆದಿತ್ತು, ಅದನ್ನು ಸಿಕ್ಕವರು [ಜಗದೀಶ್ ಹಾಗಲವಾಡಿ] ತಂದು ಕೊಟ್ಟಿದ್ದರು. ಸಂಬಂಧಪಟ್ಟವರಿಗೆ [ಶಿವಮೊಗ್ಗಾ ಜಯಮ್ಮನವರಿಗೆ] ವಿಳಾಸ ನೋಡಿ ತಲ್ಪಿಸಲಾಗಿತ್ತು. ಶರಣ ಬಂಧುಗಳ ಈ ಪ್ರಾಮಾಣಿಕತೆಗೆ ನಿಜಕ್ಕೂ ಹೆಮ್ಮೆ ಎನಿಸುತ್ತದೆ. ★

ಬರಲಿರುವ ಶರಣರ ಜಯಂತಿಗಳು

ಅಲ್ಲಮ ಪ್ರಭುದೇವರ ಜಯಂತಿ

ದಿನಾಂಕ 24-3-1993 ರಂದು

ಯುಗಾದಿ ಪ್ರತಿಪದೆಯಂದು ಶಿವಯೋಗ ಚಕ್ರವರ್ತಿ, ಬಯಲು ಕಾಯಸಿದ್ಧ ಅಲ್ಲಮ ಪ್ರಭುದೇವರ ಜಯಂತಿಯನ್ನು ಆಚರಿಸಬೇಕು. ಗುರು ಬಸವಣ್ಣನವರು ಸ್ಥಾಪಿಸಿದ ಶೂನ್ಯ ಪೀಠದ ಪ್ರಥಮ ಅಧಿಕಾರಿ ಅಲ್ಲಮ ಪ್ರಭು ದೇವರು. ಅವರು ಪೀಠಾರೋಹಣ ಮಾಡಿದುದು ಚೈತ್ರಶುದ್ಧ ಪಾಡ್ಯದಂದು.

ಆದ್ದರಿಂದ ಎಲ್ಲ ರಾಷ್ಟ್ರೀಯ ಬಸವ ದಳಗಳವರು ಪ್ರಭು ದೇವರ ಶೂನ್ಯ ಪೀಠಾರೋಹಣದ ದಿನವನ್ನು ಆಚರಿಸಬೇಕು. ಬೆಳಿಗ್ಗೆ ಶ್ರೀ ಬಸವೇಶ್ವರ ಪೂಜಾವ್ರತ-ಪ್ರಭು ದೇವರ ವಚನ ಪಾರಾಯಣವನ್ನು ಮಾಡಬೇಕು. ಸಂಜೆ ಉಪನ್ಯಾಸ ಕಾರ್ಯಕ್ರಮವನ್ನು ಇಡಬೇಕು.

ಅಕ್ಕಮಹಾದೇವಿ ಜಯಂತಿ

ದಿನಾಂಕ 6-4-1993 ರಂದು

ಚೈತ್ರ ಮಾಸದಲ್ಲಿ ಬರುವ ದವನದ ಹುಣ್ಣಿಮೆಯೇ ಅಕ್ಕನ ಹುಣ್ಣಿಮೆ. ಅಕ್ಕನ ಜಯಂತಿಯ ನಿಮಿತ್ತ ಉಪನ್ಯಾಸ ಮುಂತಾದ ಕಾರ್ಯಕ್ರಮಗಳನ್ನು ಉಪನ್ಯಾಸಕಾರರ ಸಲುವಾಗಿ ಬೇರೆ ದಿನಾಂಕಕ್ಕೆ ಇಟ್ಟುಕೊಂಡರೂ ಅಕ್ಕನ ಹುಣ್ಣಿಮೆಯಂದು ಬೆಳಿಗ್ಗೆ ಪೂಜೆ, ಮತ್ತು ತೊಟ್ಟಿಲು ಕಾರ್ಯಕ್ರಮ ಇಟ್ಟುಕೊಳ್ಳಲೇಬೇಕು. ಇನ್ನಿತರ ಎಲ್ಲ ಶರಣರ ಜಯಂತಿಗಳನ್ನು ಕೇವಲ ಸಾಮೂಹಿಕ ಪ್ರಾರ್ಥನೆ ಮತ್ತು ಉಪನ್ಯಾಸಗಳೊಡನೆ ಆಚರಿಸಿದರೂ, ಬಸವ ಜಯಂತಿ ಮತ್ತು ಅಕ್ಕನ ಜಯಂತಿಯಂದು ಮಾತ್ರ ಬೆಳಿಗ್ಗೆ ತೊಟ್ಟಿಲು ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕು, ಏಕೆಂದರೆ, ವಿಶ್ವಗುರು ಬಸವಣ್ಣನವರು ಧರ್ಮದ ದಿನಮಣಿಯಾದರೆ ಅಕ್ಕಮಹಾದೇವಿಯು ಶರಣರ ಕಣ್ಮಣಿಯು. ಬಸವ ಧರ್ಮವು ಅತ್ಯಂತ ಹೆಮ್ಮೆಯಿಂದ ಜಾಗತಿಕ ಮಟ್ಟದ ಪ್ರದರ್ಶಿಸಬಹುದಾದ ಅನುಭವ ರತ್ನ ಅಕ್ಕಮಹಾದೇವಿ. ಆದ್ದರಿಂದ ಅಕ್ಕನ ಜಯಂತಿಯಂದು ಬೆಳಿಗ್ಗೆ ಪೂಜಾವ್ರತ, ಸಾಮೂಹಿಕ ಪ್ರಾರ್ಥನೆ, ತೊಟ್ಟಿಲ ಕಾರ್ಯಕ್ರಮ ಇಡಬೇಕು. ಉಪನ್ಯಾಸ ಕಾರ್ಯಕ್ರಮವನ್ನು ಬೆಳಿಗ್ಗೆಯಾಗಲೀ, ರಾತ್ರಿಯಾಗಲೀ ಅನುಕೂಲತೆಗೆ ತಕ್ಕಂತೆ ಇಡಬಹುದು.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮಪೀಠ, ಕೂಡಲ ಸಂಗಮ.

ಅಕ್ಕನ ಹುಣ್ಣಿಮೆಯಿಂದ ಜ್ಞಾನ ದಾಸೋಹ

ಕೂಡಲಸಂಗಮ ಸುಕ್ಷೇತ್ರದಲ್ಲಿ, ಮಹಾಮನೆ ಮಹಾಮಠದಲ್ಲಿ ಪ್ರತಿ ಹುಣ್ಣಿಮೆಯಂದು ಜ್ಞಾನ ದಾಸೋಹ ನಡೆಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಪ್ರಥಮ ಜ್ಞಾನ ದಾಸೋಹವು 6-4-1993 ರಂದು ನಡೆಯಲಿದೆ. ಸಂಜೆ 7 ರಿಂದ ಸಾಮೂಹಿಕ ಪ್ರಾರ್ಥನೆ, ಪ್ರವಚನ, ಅನುಭವ ಗೋಷ್ಠಿ-ಪ್ರಶ್ನೋತ್ತರ ನಡೆಯುತ್ತವೆ. ಬಂದವರಿಗೆ ವಸತಿ-ಊಟದ ವ್ಯವಸ್ಥೆ ಮಾಡಲಾಗುವುದು. ಪ್ರಸಾದ ದಾಸೋಹದ ವ್ಯವಸ್ಥೆಗೆ ಹಣ, ಧಾನ್ಯ, ರೊಟ್ಟಿಗಳ ದೇಣಿಗೆ ನೀಡಲು ಅವಕಾಶವಿರುತ್ತದೆ.

—ಸೋದರಿ ಜಯಮ್ಮ, ಮೇನೇಜರ್

ಹುಣ್ಣಿಮೆಯಂದು ಜ್ಞಾನ ದಾಸೋಹ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಪ್ರತಿಹುಣ್ಣಿಮೆಗೆ ಜ್ಞಾನ ದಾಸೋಹ ಕಾರ್ಯಕ್ರಮ ಇಡಲಾಗುತ್ತಿದೆಯಷ್ಟೆ. ಈ ಹುಣ್ಣಿಮೆಗಳಿಗೆ ವಿಶೇಷವಾದ ಹೆಸರು ನೀಡಿ, ಆಯಾ ಶರಣರ ಬಗ್ಗೆ ವಿಶೇಷವಾಗಿ ಉಪನ್ಯಾಸ ಏರ್ಪಡಿಸಲಾಗುವುದು.

1. ಅಕ್ಕನ ಹುಣ್ಣಿಮೆ [ಚೈತ್ರ] ಅಕ್ಕನ ಜಯಂತಿ ನಿಮಿತ್ತ.
2. ಬಸವ ಪೌರ್ಣಿಮೆ [ವೈಶಾಖ] ಬಸವ ಜಯಂತಿ ನಿಮಿತ್ತ.
3. ಮಾಚಯ್ಯನ ಹುಣ್ಣಿಮೆ [ಜೇಷ್ಠ] ಕಾಯಕ ದಿನಾಚರಣೆ ನಿಮಿತ್ತ.
4. ಪ್ರಭು ಪೌರ್ಣಿಮೆ [ಆಷಾಢ] ಪ್ರಭು ದೇವರ ಲಿಂಗೈಕ್ಯ ನಿಮಿತ್ತ.
5. ನೀಲಮ್ಮನ ಹುಣ್ಣಿಮೆ [ಶ್ರಾವಣ] ನೀಲಮ್ಮನ ಲಿಂಗೈಕ್ಯ ನಿಮಿತ್ತ.
6. ಗುರು ಪೌರ್ಣಿಮೆ [ಭಾದ್ರಪದ] ಪೂಜ್ಯ ಗುರೂಜಿ ವರ್ಧಂತಿ ನಿಮಿತ್ತ.
7. ವಚನ ಪೌರ್ಣಿಮೆ. [ಅಶ್ವಯುಜ] ವಚನ ಸಾಹಿತ್ಯ ಸಂರಕ್ಷಣಾ ನಿಮಿತ್ತ.
8. ಚನ್ನ ಹುಣ್ಣಿಮೆ. [ಕಾರ್ತೀಕ] ಚನ್ನಬಸವಣ್ಣನವರ ಲಿಂಗೈಕ್ಯ ನಿಮಿತ್ತ.
9. ನಾಗಮ್ಮನ ಹುಣ್ಣಿಮೆ [ಮಾರ್ಗಶಿರ] ನಾಗಲಾಂಬಿಕೆಯ ಧರ್ಮಪ್ರಚಾರ ನಿಮಿತ್ತ.
10. ಸಿದ್ಧರಾಮ ಹುಣ್ಣಿಮೆ. [ಪುಷ್ಯ] ಸಿದ್ಧರಾಮ ಜಯಂತಿ ನಿಮಿತ್ತ.
11. ಹರಳಯ್ಯ-ಮಧುವಯ್ಯಗಳ ಹುಣ್ಣಿಮೆ. [ಮಾಘ] ಮಾಘ ಮಾಸದಲ್ಲಿ ಎಳೆಹೂಟೆಯಾದ ನಿಮಿತ್ತ.
12. ಶರಣ ಪೌರ್ಣಿಮೆ. [ಫಾಲ್ಗುಣ] ಎಲ್ಲ ಶರಣರ ನೆನಪಿನಲ್ಲಿ. ಹೀಗೆ 12 ಹುಣ್ಣಿಮೆಗಳನ್ನು ಜ್ಞಾನಾತ್ಮಕವಾಗಿ ಆಚರಿಸಲು ನಿರ್ಧರಿಸಲಾಗಿದೆ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮಪೀಠ, ಕೂಡಲ ಸಂಗಮ

ಬಸವ ಜಯಂತಿ ಆಚರಣೆ

1993 ನೆಯ ಸಾಲಿನ "ಬಸವ ಜಯಂತಿ"ಯು ಏಪ್ರಿಲ್ 25 ರಂದು ಬರುತ್ತಿದ್ದು ಎಲ್ಲ ರಾಷ್ಟ್ರೀಯ ಬಸವ ದಳಗಳವರು ತಪ್ಪದೆ ಆಚರಿಸಬೇಕು. ರಾಷ್ಟ್ರೀಯ ಬಸವ ದಳಗಳು ಇಲ್ಲದೇ ಇರುವಲ್ಲಿ ಶರಣ ಬಂಧುಗಳು ಆಚರಿಸಬೇಕು.

1. ಬೆಳಿಗ್ಗೆ ಪ್ರತಿಯೊಬ್ಬರ ಮನೆ ಅಂಗಡಿಗಳ ಮೇಲೂ ಷಟ್ಕೋನ ಬಸವ ಧ್ವಜ ವನ್ನು ಹಾರಿಸಬೇಕು. ಸಾಮೂಹಿಕವಾಗಿಯೂ ಹಾರಿಸಬೇಕು. ಮಠ-ಮಂದಿರ ಗಳ ಮೇಲೆ ಧ್ವಜಗಳನ್ನು ಹಾರಿಸಬೇಕು.
2. ಬಸವೇಶ್ವರ ಪೂಜಾ ವ್ರತವನ್ನು ಮನೆ ಮನೆಯಲ್ಲೂ ಮಾಡಬೇಕು.
3. ಪೂಜಾ ನಂತರ ಉಪಾಹಾರ ಪೂರೈಸಿ ಬಸವ ಮಂಟಪ ಮುಂತಾದ ಸಮುದಾಯ ಭವನಗಳಲ್ಲಿ ಸೇರಬೇಕು. ಮೊದಲಿಗೇ ಅಲ್ಲಿ ಪೂಜಾ ವ್ರತ ನೆರವೇರಿರಬೇಕು. ಕಡೆಯ ಪೂಜೆಯಲ್ಲಿ 108 ಬಸವ ಲಿಂಗ ಮಂತ್ರ ಪಠಣ ಮಾಡಿ, ಎಲ್ಲರೂ ಸೇರಿ ಮಂಗಲ ಮಾಡಬೇಕು.
4. ಒಂದು ತೊಟ್ಟಿಲನ್ನಿಟ್ಟು ಅದನ್ನು ಅಲಂಕರಿಸಿ, ಗುರು ಬಸವಣ್ಣನವರ ಭಾವ ಚಿತ್ರವನ್ನು ಅದರಲ್ಲಿಟ್ಟು ತೂಗಿ ಜೋಗುಳ ಹಾಡಬೇಕು ಮತ್ತು ಮಂಗಲಾರತಿ ಬೆಳಗಬೇಕು.

ವಿವಾಹವಾಗಿಯೂ ಮಕ್ಕಳಾಗದವರು, ಕಾರಣಾಂತರದಿಂದ ಮಕ್ಕಳು ತೀರಿ ಹೋಗುತ್ತಿರುವ ದಂಪತಿಗಳು ಗುರು ಬಸವಣ್ಣನವರ ಹೆಸರಿನಲ್ಲಿ ಸಂಕಲ್ಪ ಮಾಡಿ, ಹುಟ್ಟುವ ಮಗುವಿಗೆ ಅವರ ಹೆಸರನ್ನೇ ಇಡಲಾಗುವುದು ಎಂದು ಸಂಕಲ್ಪಿಸಿ, ತೊಟ್ಟಿಲನ್ನು ತೂಗಬೇಕು. ತೊಟ್ಟಿಲು ಕಾರ್ಯಕ್ರಮ ಆದ ಮೇಲೆ ಪ್ರಸಾದ ವಿತರಣೆ ಮಾಡಬೇಕು. ಎಲ್ಲರೂ ಪುಷ್ಪವನ್ನು ಏರಿಸಿ, ಆರತಿ ಬೆಳಗಿ ಪ್ರಸಾದ ಸ್ವೀಕಾರ ಮಾಡಬೇಕು.

5. ನಂತರ ಸಭೆ ಸೇರಬೇಕು. ಸಭೆಗೆ ಮುನ್ನ ಧ್ವಜಾರೋಹಣ ಶಿಸ್ತಿನಿಂದ ಮಾಡ ಬೇಕು. ಸಾಮೂಹಿಕ ಪ್ರಾರ್ಥನೆ ಮಾಡಿ, ಷಟ್ ಸೂತ್ರ ಘೋಷಣೆ ಮಾಡಿ ಉಪನ್ಯಾಸ ಕಾರ್ಯಕ್ರಮ ನಡೆಸಬೇಕು.
6. ಮೆರವಣಿಗೆ-ಪಥ ಸಂಚಲನಗಳನ್ನು ಬೆಳಿಗ್ಗೆ ಸೂಕ್ತವೆನಿಸಿದರೆ ಬೆಳಿಗ್ಗೆ, ಸಂಜೆ ಸೂಕ್ತವೆನಿಸಿದರೆ ಸಂಜೆಗೆ ಮಾಡಬಹುದು.
7. ಬಸವ ಜಯಂತಿಯಿಂದ 5 ದಿವಸಗಳ ಕಾಲ ಮನೆಯ ಮೇಲೆ [ಕ್ರೈಸ್ತರು ನಕ್ಷತ್ರ ಸಹಿತ ವಿದ್ಯುದ್ದೀಪ ಹಾಕುವಂತೆ] ಷಟ್‌ಕೋನ ಸಹಿತ ನಕ್ಷತ್ರ ಮಾಡಿ, ಅದ-ರೊಳಗೆ ವಿದ್ಯುತ್ ಬಲ್ಬ್ ಹಾಕಿ ಮನೆಯ ಮೇಲೆ ಕಟ್ಟಿರಿ.
8. ತಲೆ ಬಾಗಿಲಿನಲ್ಲಿ ಎರಡು ಪ್ರಣತಿಗಳನ್ನು ಹಚ್ಚಿಟ್ಟು ಬಸವ ಜಯಂತಿ ಆಚರಣೆ ಯನ್ನು ಜನರಿಗೆ ತೋರಿಸಿಕೊಡಿರಿ.
9. ನಿಮ್ಮ ನಿಮ್ಮ ವೃತ್ತಿಗೆ ಅನುಗುಣವಾಗಿ ದೀನದಲಿತರ ಸೇವೆ ಮಾಡಿರಿ. ಸಾಹಿತ್ಯ ವನ್ನು ಬಂಧು ಮಿತ್ರರಿಗೆ ಹಂಚಿರಿ.
10. ಬಸವ ಜಯಂತಿಯ ಶುಭಾಶಯ ಕಾರ್ಡುಗಳನ್ನು ಎಷ್ಟು ಸಾಧ್ಯವೋ ಅಷ್ಟು ವಿತರಿಸಿರಿ.

ಬಸವ ಶಕೆ : 888

— ಬಸವ ಜಯಂತಿಯ ಶುಭಾಶಯಗಳು —

"ನಿಮಗೆಲ್ಲ ಸುಖ-ಸಂವೃದ್ಧಿ-ಸಂತೃಪ್ತಿ, ಸುಯಿಧಾನ ತರಲಿ"

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ರಾಷ್ಟ್ರ ಪ್ರಶಸ್ತಿ ವಿಜೇತ

ಶರಣ. ಡಾ|| ಶಿವಗೌಡ ಬಾಳಗೌಡ ಪಾಟೀಲ




ಶರಣರಾದ ಡಾ|| S. B. ಪಾಟೀಲ ಅವರು ಬೆಳಗಾಂವ ಜಿಲ್ಲೆಯ ಸಂಕೇಶ್ವರದ ಸರಕಾರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ "ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ," "ಬಾಲಕರಿಂದ ಪಾಲಕರ ದುಶ್ಚಟ ನಿವಾರಣೆ" ಮುಂತಾದ ಪ್ರಬಂಧಗಳು ರಾಷ್ಟ್ರ ಮಟ್ಟದಲ್ಲಿ ಮನ್ನಣೆ ಪಡೆದಿವೆ. ರಟ್ಟರ ಕಾಲದ ಶಾಸನ ಕವಿಗಳು, ಕೊಹೊಂಡಿನಾಡು ಮುಂತಾದ ಗ್ರಂಥ, ಗಳನ್ನು ರಚಿಸಿದ್ದಾರೆ. ಇವರು ಪಠ್ಯ ಪುಸ್ತಕ ರಚನಾ ಸಮಿತಿಯ ಸದಸ್ಯರಾಗಿ, ಪರಿಷ್ಕರಣ ತಜ್ಞರಾಗಿ ಗಣನೀಯ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ ಭಾಷಾಂತರ, ಕಾವ್ಯ, ಕಥೆ, ನಾಟಕ ರಚನೆಯ ಹವ್ಯಾಸದಲ್ಲೂ ನಿರತರಾಗಿದ್ದಾರೆ. ರಾಷ್ಟ್ರೀಯ ಬಸವ ದಳದ, ಸಂಕೇಶ್ವರ ಘಟಕದ ಕಾರ್ಯಾಧ್ಯಕ್ಷರಾಗಿ, ಬಸವ ಧರ್ಮ ಸಂಸತ್ ಸದಸ್ಯರಾಗಿಯೂ ಕಾರ್ಯ ಮಾಡುತ್ತಿದ್ದಾರೆ.

ಪ್ರಾಥಮಿಕ ಹಂತದಿಂದ ಪಿ. ಎಚ್. ಡಿ. ವರೆಗಿನ ಎಲ್ಲಾ ಶಿಕ್ಷಣವನ್ನು ಬಾಹ್ಯ ರೀತಿಯಲ್ಲಿ ಪೂರೈಸಿದ ವಿಶಿಷ್ಟ ಸಾಧನೆ ಇವರದು.

ಅನೇಕ ಸಂಘ ಸಂಸ್ಥೆಗಳು ಇವರ ನಿಸ್ವಾರ್ಥ ಸೇವೆಯನ್ನು ಮನಗಂಡು ಪ್ರಶಸ್ತಿ ಗಳನ್ನು ನೀಡಿವೆ. ರಾಜ್ಯದ ಆದರ್ಶ ಶಿಕ್ಷಕರೆಂದು ಪರಿಗಣಿಸಿ 1992-93 ಸಾಲಿನ ರಾಷ್ಟ್ರ ಪ್ರಶಸ್ತಿಯನ್ನು ನೀಡಿ, ರಾಷ್ಟ್ರಪತಿಯವರು ಇವರನ್ನು ಗೌರವಿಸಲಿದ್ದಾರೆ ಎಂದು ತಿಳಿಸಲು ಸಂತೋಷವೆನಿಸುತ್ತದೆ.

ಆದರ್ಶ ಮಾದರಿ ಶಿಕ್ಷಕರಾದ ಪಾಟೀಲರಿಗೆ ಮಂತ್ರ ಪುರುಷ, ಧರ್ಮಪಿತ ಬಸವಣ್ಣನವರು ಇನ್ನೂ ಹೆಚ್ಚಾಗಿ ಸಮಾಜ ಸೇವೆ ಸಲ್ಲಿಸಲು ಆರೋಗ್ಯ, ಭಾಗ್ಯ ಸಕಲ ಸಂಪದವನ್ನು ಕೊಡಲೆಂದು ಹಾರೈಸಿ, ಕಲ್ಯಾಣ ಕಿರಣವು ಅಭಿನಂದನೆಗಳನ್ನು ಸಲ್ಲಿಸುತ್ತದೆ.

೬ ನೇ ಶರಣ ಮೇಳ  ಕೂಡಲ ಸಂಗಮ

ಶರಣರ ಬೀಡು ಬಂದು ನೋಡು

ಧರ್ಮ ಕ್ಷೇತ್ರ ಸಂಗಮ । ಕೂಡಲ ಸಂಗಮ
ಬಸವ ಬಯಲಾದ ಸಂಗಮ । ಅನುಪಮ
ಬಸವಣ್ಣನ ಐಕ್ಯ ಕ್ಷೇತ್ರ ಸಂಗಮ ||ಪ||
ವನಸಿರಿಯ ಮಡಿಲಲ್ಲಿ । ಬಸವ ಸಾಗರ ಸಮೀಪದಲ್ಲಿ
ಕೃಷ್ಣೆ ಮಲಾಪಹಾರಿ ಕೂಡಿಹರಿಲ್ಲಿ
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ||೧||

ಬಸವಣ್ಣನೇ ಧರ್ಮಗುರು । ಇಷ್ಟಲಿಂಗ ದೇವನ ಕುರುಹು
ವಚನ ಸಾಹಿತ್ಯವೇ ಧರ್ಮ ಸಂಹಿತೆಯು
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ||೨||

ಮಹಾಮನೆ ಮಹಮಠದಲ್ಲಿ । ಶರಣ ಮೇಳ ನಡೆದಿಹುದಿಲ್ಲಿ
ಬಸವನ ಭಕ್ತರು ಬಂದು ನೆರೆದಿಹರಿಲ್ಲಿ
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ||೩||

ಜಗದ್ಗುರು ಮಾತೆ ಮಹಾದೇವಿ । ಜಗದ್ಗುರು ಲಿಂಗಾನಂದ ಸ್ವಾಮಿ
ಬಸವ ತತ್ತ್ವ ಬೆಳಗಿಸುತಿರುವ ದಿವ್ಯ ಜ್ಯೋತಿ
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ||೪||

ಕನ್ನಡಮ್ಮನ ಹಿರಿಮೆ । ಭಾರತಾಂಬೆಯ ಹೆಮ್ಮೆ
ಕಂಡು ಬೆರಗಾದೆವು ಪೂಜ್ಯ ದ್ವಯರ ಚಾಣ್ಮೆ
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ||೫||

ಕಲ್ಯಾಣ ರಾಜ್ಯ ಕಟ್ಟುವೆವೆಂದು ಬಸವ ಧರ್ಮ ಬೆಳೆಸುವೆವೆಂದು
ಬಸವ ದಳ ವೀರರೇ ಪಣವ ತೊಡಬೇಕೆಂದು
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ||೬||

ಧರ್ಮ ಕ್ಷೇತ್ರ ಸಂಗಮ । ಕೂಡಲ ಸಂಗಮ
ಬಸವ ಬಯಲಾದ ಕ್ಷೇತ್ರ ಸಂಗಮ । ಅನುಪಮ
ಬಸವಣ್ಣನ ಐಕ್ಯ ಕ್ಷೇತ್ರ ಸಂಗಮ

೧೪-೧-೧೯೯೩ ರಚನೆ—ಸೌ. ಶಶಿಕಲಾತಾಯಿ ಮಡಕಿ

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 [ವಿಧಿ 8]

1.	ಪ್ರಕಟಣೆಯ ಸ್ಥಳ	– ಬೆಂಗಳೂರು.
2.	ಪ್ರಕಟಣೆಯ ನಿಯತಕಾಲಿಕತೆ	– ಮಾಸಿಕ.
3.	ಮುದ್ರಕರ ಹೆಸರು	– ಸೋದರಿ ಕಸ್ತೂರಿ.
	ಭಾರತದ ಪ್ರಜೆಯೆ?	– ಹೌದು.
	ವಿಳಾಸ	– ಪ್ರಭುದೇವ ಮುದ್ರಣಾಲಯ ಬಸವ ಗಂಗೋತ್ರಿ, ಕುಂಬಳಗೋಡು
4.	ಪ್ರಕಾಶಕರ ಹೆಸರು.	– ಬಿ. ಶಂಭುಲಿಂಗಯ್ಯ
	ಭಾರತದ ಪ್ರಜೆಯೇ	– ಹೌದು
	ವಿಳಾಸ	– ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560010
5.	ಸಂಪಾದಕರ ಹೆಸರು	– ಬಿ. ಶಂಭುಲಿಂಗಯ್ಯ,
	ಭಾರತದ ಪ್ರಜೆಯೇ ?	– ಹೌದು
	ವಿಳಾಸ	– ಬಸವ ಮಂಟಪ, ರಾಜಾಜಿನಗರ ಬೆಂಗಳೂರು-560010
6.	ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಭಂಡವಾಳ ಶೇ 1ಕ್ಕಿಂತ ಹೆಚ್ಚು ಭಾಗಕ್ಕೆ ಪಾಲು ದಾರರ ಹೆಸರು ಮತ್ತು ವಿಳಾಸ	– ವಿಶ್ವಕಲ್ಯಾಣ ಮಿಷನ್ [ರಿಜಿಸ್ಟರ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್] ಬಸವ ಮಂಟಪ. ರಾಜಾಜಿನಗರ ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ. ಶಂಭುಲಿಂಗಯ್ಯ ಘೋಷಿಸುತ್ತೇನೆ.

ದಿನಾಂಕ 1-3-1993

ಪ್ರಕಾಶಕ
ಬಿ. ಶಂಭುಲಿಂಗಯ್ಯ
ಕಲ್ಯಾಣ ಕಿರಣ, ಬೆಂಗಳೂರು–10

ಕಲ್ಯಾಣ ಕಿರಣ KRNB 312/BGW 92 ಮಾರ್ಚ್ 1993

